ಫಾಲ್ಗುಣಮಾಸ

ಫಾಗುನ್ ಆಯೋರೇ

ಆ....... ರುರು ರುಹು ತಾ ಕಿನ್ ಧಿನಕ್ ಧಾ ಧಿನಕ್ ದಾ ಓ। ಪಿಯ ಸಂಗ್ ಖೇಲೋ ಹೋರಿ ಪಿಯ ಸಂಗ್ ಖೇಲೋ। ಪ್ರಿಯ ಸಂಗ್ ಖೇಲೋ ಹೋರಿ ಫಾಗುನ್ ಆಯೋ ರೇ। ಹೋ ಫಾಗುನ್ ಆಯೋ ರೇ।। ಚುನರಿಯ ಭಿಗೋ ಲೇ ಗೋರಿ ಫಾಗುನ್ ಆಯೋರೇ ಹೋ ಫಾಗುನ್ ಆಯೋ ರೇ।। ಧಿನ್ ತಿನಕ್ ಧಿನ್ ಧಿ ಧಿನ್ ತಿನಕ್ ಧಿನ್। ಧಿ ಧಿನ್ ತಿನಕ್ ಧಿನ್ ಧಿ ಧಿನ್ ತಿನಕ್ ಧಿನ್।। ದೇಖೋ ಜಿಸ್ ಓರ್ ಮಚ್ ರಹಾ ಶೋರ್ ಗಲೀ ಮೇ ಅಭೀರ್ ಉಡೇ ಹವಾ ಮೇ ಗುಲಾಲ್। ಕಾಹೀಂ ಕೋಯಿ ಹಾಯ್ ತನ್ ಕೋ ಚುರಾಯೇ। ಚಲೀ ಜಾಯೇ ಜೈಸೀ ಗಾಡೀ ಪೂಥ್ ಜಾಯೇ ಹಾಲ್। ಕರೇ ಕೋಯೀ ಜೋರಾ ಜೋರೀ ಕರೇ ಕೋಯೀ ಜೋರಾ ಜೋರಿ। ಫಾಗುನ್ ಆಯೋ ರೇ ಹೋ ಫಾಗುನ್ ಆಯೋರೇ।। ಧಿನ್ ತಿನಕ್ ಧಿನ್। ಧಿಧಿ ತಿನಕ್ ಧಿನ್(3ಸಾರಿ)।। ಹೊ .... ಕೋಯೀ ಕಹೇ ಸಜನೀ ಸುನೋ ಪುಕಾರ್। ಬರಸ್ ಬಾದ್ ಆಯೇ ತೊಹರೇ ದುವಾರ್। ಆಜ್ ತೋ ಮೋರೀ ಗೇಂಡೆ ಕೀ ಕಲಿ। ಹೋಲೀ ಕೇ ಬಹಾನೆ ಮಿಲೋ ಇಕ್ ಬಾರ್।। ತನ್ ಪೇ ಹೈ ರಂಗ್ ಮನ್ ಪೇ ಹೈ ರಂಗ್। ಕಿಸೀ ಮತವಾರೇ ನೇ ಕ್ಯಾ ರಂಗ್ ದಿಯೋ ಡಾರ್। ಫುಲ್ವಾ ಕೇ ಪಾರ್ ಗೋರೀ ತೋರೇ ಗಾರ್। ನೈನೋಂ ಮೇ ಗುಲಾಬಿ ತೋರೇ ಮುಖ್ ಪೇ ಬಹಾರ್।। ಬೀಘಿ ಸಾಡೀ ಬಿಘಿ ಚೋಲಿ। ಫಾಗುನ್ ಆಯೋ ರೇ ಹೋ ಫಾಗುನ್ ಆಯೋ ರೇ।। ಚುನರಿಯಾ ಭೀಗೋ ಲೇ ಗೋರಿ। ಫಾಗುನ್ ಆಯೋ ರೇ ಹೊ ಫಾಗುನ್ ಆಯೋ ರೇ।।

67. "ಗೋವಿಂದ"ಮಾಸ ನಿಯಾಮಕ

ಗೋವಿಂದೇತಿ ಸದಾ ಸ್ನಾನಂ। ಗೋವಿಂದೇತಿ ಸದಾಜಪಂ। ಗೋವಿಂದೇತಿ ಸದಾ ಧ್ಯಾನಂ। ಸದಾ ಗೋವಿಂದ ಕೀರ್ತನಂ।।

ಗೋವಿಂದ ಗೋವಿಂದ ಪುರಂದರ ವಂದೇ। ಸ್ಕಂದ ಸುನಂದನ ವಂದಿತ ಪಾದ।।

ಗೋವಿಂದ ಗೋವಿಂದ ಎಂದರೆ ಗೋವರ್ಧನ ಗಿರಿಯನ್ನು ಒಂದೇ ಬೆರಳಿನಿಂದ
ಎತ್ತಿ ಗೋವ್ಗಳನ್ನು ಸಂರಕ್ಷಣೆ ಮಾಡಲಾಗಿ। ಗೋವಿಂದ ಎನ್ನಿಸಿಕೊಂಡ ।। ಕೇಶವಾಯ ನಮಃ।।

ಗೋಕುಲದಲ್ಲಿ ಗೋವಿಂದನಿದ್ದಾನೆ ರಾಮರಾಮ।
ಗೋಕುಲವನು ಕಂಡೆ ಗೋವಿಂದನ ದಯದಿಂದ ರಾಮ ರಾಮ।। ಕಾಶಿಯ ಹಾದಿಯಲಿ।।

ಗೋವಿಂದ ಗೋಕುಲ ಬಾಲ। ಸೋಳ। ಸಾಸಿರ ಗೋಪಿಯರ ಆನಂದಲೀಲ।
ನೀಲಮಣಿ ಮುಕ್ತಮಾಲಾ। ನಿನ್ನ। ನೇನೆಂದು ಕರೆಯಲಿ ಸುಗ್ರೀವಪಾಲ ।।ಅಚ್ಯುತಾನಂತ।।

ಹಿಂದನೇಕ ಯೋನಿಗಳಲಿ ಬಂದು ಬಂದು ನೊಂದೆ ನಾನು।
ಇಂದು ಭವದ ಬಂಧ ಬಿಡಿಸೋ ತಂದೆ ಗೋವಿಂದ ।।ಈಶ ನಿನ್ನ।।

ಗೋವಿಂದಂ ಗೋಕುಲಂನಂದಂ। ಗೋಪಾಲಂ ಗೋಪೀ ವಲ್ಲಭಂ।
ಗೋವರ್ಧನಧರಂ ದೇವಂ। ತಂ ವಂದೇ ಗೋಪತಿ ಪ್ರಿಯಂ।।ಓಂ ನಮೋ ಭಗವತೇ।।

ಗೋವರ್ಧನ ಗಿರಿಯನೆತ್ತಿ ದೇವೇಂದ್ರ ಮಳೆಗರೆಯೆ। ಆಗಿರಿಯ ಕೃಷ್ಣ ಕೊಡೆ ಮಾಡಿ।
ಆ ಗಿರಿಯ ಕೃಷ್ಣ ಕೊಡೆ ಮಾಡಿ ನೆಗಹಿದ। ಗೋವಿಂದ ನಮ್ಮ ಮನೆದೈವ।।ರಂಗಬಾರೋ।।

ಮುಂಜಾನೆ ಎದ್ದು ಗೋವಿಂದನೆನ್ನಿ ರಾಗ: ರೇವತಿ-ತ್ರಿವಿಡೆ

ಮುಂಜಾನೆ ಎದ್ದು ಗೊಂವಿದನೆನ್ನಿ ನಮ್ಮನಂಜಿಪ ದುರಿತವು ದೂರವೆನ್ನಿ॥ಪ॥ ಅಸುರ ಸಂಹಾರಿಯೆನ್ನಿ ದಶಶಿರ ವೈರಿಯೆನ್ನಿ। ಶಿಶುವು ಮೊರೆಯಿಡಲು ರಕ್ಷಿಸಿದನೆನ್ನಿ। ಅಸುರನರಣ್ಯದಿ ಭಸ್ಮವ ಮಾಡಲು। ವಸುಧೆಯೊಳ್ ನಾಟ್ಯವನಾಡಿದನೆನ್ನಿ॥1॥ ಬಲಿಯ ಬೇಡಿದನೆನ್ನಿ ಚೆಲುವ ವಾಮನನೆನ್ನಿ। ಲಲನೆಯ ಅಭಿಮಾನ ಕಾಯ್ದನೆನ್ನಿ। ಕಲಿಯುಗದಲಿ ಬಂದ ಕೃಷ್ಣಾವತಾರನೆನ್ನಿ। ಸಲೆ ಪಾಂಡುಸುತರನ್ನು ಪಾಲಿಸಿದನೆನ್ನಿ॥2॥ ಕರುಣಾಕರನೆನ್ನಿ ಕಪಟನಾಟಕನೆನ್ನಿ। ಕರಿರಾಜನಕಾಯ್ದ ಕೃಷ್ಣನೆನ್ನಿ। ಪರಿಪರಿಯಿಂದಲಿ ಭಕ್ತರ ಸಲಹುವ। ವರದ ಪುರಂದರ ವಿಠಲನೆನ್ನಿ॥3॥

ನಂದನ ತನಯ ಗೋವಿಂದನ ರಾಗ: ಅಭೇರಿ, ಆದಿತಾಳ

ನಂದನ ತನಯ ಗೋವಿಂದನ ಭಜಿಪುದು। ಆನಂದವಾದ ಮಿಠಾಯಿ॥ಪ॥ ಬಂಧುಗಳನು ಭವರೋಗಗಳೆಲ್ಲವ। ನಿಂದಿಪುದೀ ಮಿಠಾಯಿ॥ಅ.ಪ.॥ ದಧಿ ಘೃತ ಕ್ಷೀರಕ್ಕಿಂತಲು ಇದು। ಬಹು ಅಧಿಕವಾದ ಮಿಠಾಯಿ। ಕದಳಿ ದ್ರಾಕ್ಷ ಖರ್ಜೂರ ರಸಗಳನು। ಮೀರುವುದೀ ಮಿಠಾಯಿ॥1॥ ಪಂಚಭಕ್ಷ್ಯಗಳ ಷಡ್ರಸಾನ್ನಗಳ। ಮಿಂಚಿದಂಥ ಮಿಠಾಯಿ। ಕಂಚೀಶನೇ ರಕ್ಷಿಸು ಎಂದುಸುರುವರ। ಅಂಜಿಕೆ ಬಿಡಿಪ ಮಿಠಾಯಿ ॥2॥ ಜಪ ತಪ ಸಾಧನಗಳಿಗಿಂತಲು ಬಹು। ಅಪರೂಪದ ಮಿಠಾಯಿ । ಜಿಪುಣಮತಿಗಳಿಗೆ ಸಾಧ್ಯವಿಲ್ಲದಿಹ। ಪುರಂದರವಿಠಲ ಮಿಠಾಯಿ॥3॥

ಗೋವಿಂದ ಗೋಪಾಲ ಗೋಪಿಕಾ ವಲ್ಲಭ ರಾಗ: ಸಿಂಧುಭೈರವಿ-ಆದಿತಾಳ

ಗೋವಿಂದ ಗೋಪಾಲ ಗೋಪಿಕಾ ವಲ್ಲಭ। ಗೋವರ್ಧನೋದ್ಧಾರಕ ॥ಪ॥ ನಾರಾಯಣಾ ಅಚ್ಯುತಾ ನರಮೃಗ। ರೂಪ ಶ್ರೀಪತಿ ಶೌರೀಹರೀ। ವಾರಿಜೋದ್ಭವ ವಂದ್ಯ ವಂದಿತ ಚರಿತ್ರ। ಪುರಮರ್ದನಾಮಿತ್ರ ಪರಮ ಪವಿತ್ರ॥1॥ ಗರುಡ ತುರುಗ ಗಮನ ಕಲ್ಯಾಣಗುಣ ಗಣ ನಿರುಪಮ। ಲಾವಣ್ಯ ನಿರ್ಮಲ ಶರಣ್ಯ। ಪರಮ ಮುನಿವರೇಣ್ಯ ಭಕ್ತಲೋಕ ಕಾರುಣ್ಯ॥2 ಸಾರಿ॥ ॥2॥ ಇನಶಶಿ ಲೋಚನ ಇಂದುನಿಭಾನನ। ಎನುತ ಕುಂಡಲನಾಥನ। ಕನಕಾಮಯವಾಸನ। ಘನಪಾಪ ನಾಶನ। ವೇಣುನಾದ ಹಯವದನ॥3॥

ನಂದನ ಕಂದ ಗೋವಿಂದ ರಾಗ: ಕಾನಡಾ-ಆದಿತಾಳ

ನಂದನ ಕಂದ ಗೋವಿಂದ। ಗೋಕುಲ ನಂದ ದೇವಕಿ ಕಂದ॥ಪ॥ ನರಹರಿರೂಪ ಗೋವಿಂದ। ವರಹಾವತಾರಿ ಗೋವಿಂದ। ಪುಂಡರಿಕಾಕ್ಷ ಗೋವಿಂದ। ಪಾಂಡವ ಪಕ್ಷ ಗೋವಿಂದ॥1॥ ಕರುಣಾ ಭರಣ ಗೋವಿಂದ। ಭವಭಯಹರಣ ಗೋವಿಂದ। ಪಾವನ ಚರಣ ಗೋವಿಂದ। ನಿರುಪಮ ಗುಣಹರಿ ಗೋವಿಂದ॥2॥ ಪನ್ನಗಶಯನ ಗೋವಿಂದ। ಚಿನ್ಮಯ ರೂಪ ಗೋವಿಂದ। ಪರಮ ಪುರುಷ ಹರಿ ಗೋವಿಂದ। ಶಾರದೆ ಸನ್ನುತ ಗೋವಿಂದ॥3॥

ಇಂದಿರೆ ರಮಣ ಗೋವಿಂದ ರಾಗ: ಹಿಂದೋಳ, ಆದಿತಾಳ

ಇಂದಿರೆ ರಮಣ ಗೋವಿಂದ। ನಿನ್ನಯ ಪಾದ ದ್ವಂದ್ವವೆನಗೆ। ಸಾಕೆಲೋ ಸಾಕೆಲೋ॥ಪ॥ ಅಂದು ಬ್ರಹ್ಮಾಂಡವ ಸೀಳಿದಂಥಾ ಪಾದ। ಎಂದೆಂದು ಭಕುತರ ಪಾಲಿಪ ಪಾದ॥ಅ.ಪ॥ ನಾರಾಯಣ ನಿನ್ನ ನಾಮವು ಅಜಮಿಳನ। ಘೋರ ಪಾರವನ್ನಟ್ಟಿತೋ। ಸಾರಿ ನಿನ್ನನ್ನು ಭಜಿಪ ಚಾರುಭಕುತರಿಗೆಲ್ಲ। ಕೋರಿದ ವರಗಳ ನೀಡುವ ದಾತನೆ॥1॥ ಮುನಿಗಳು ತಮ್ಮ ತಮ್ಮ ಮನದಲ್ಲಿ ನಿಲ್ಲಿಸಿ। ಘನತರ ಮಹಿಮ ನಿನ್ನ ನೆನೆಯುತ್ತಿರಲು। ಅವರ ಕಾವಲಾಗಿರುತಿದ್ದೆ। ಅನಾಥ ರಕ್ಷಕ ಕಾರುಣ್ಯ ಮೂರ್ತಿ॥2॥ ವಂದ್ಯ ಮೂರುತಿಯಾಗಿ ಎಂದು ಇರುವವನಾಗಿ। ಪೊಂದಿದೆ ಅನಂತ ರೂಪವೆಲ್ಲ। ಒಂದು ಅರಿಯದ ಎನ್ನಕಾಯ ಬೇಕೋ ಸ್ವಾಮಿ। ತಂದೆ ಪುರಂದರ ವಿಠಲರಾಯನೆ॥3॥

❖ ❖ ❖

68. ಕೇಶವ ನವರಾತ್ರಿ

ರಂಗನಾಯಕ ರಾಜೀವಲೋಚನ (ಉದಯರಾಗ) ರಾಗ: ಭೌಳಿ

ರಂಗನಾಯಕ ರಾಜೀವಲೋಚನ ರಮಣ ನೀ ಬೆಳಗಾಯಿತೇಳೆನ್ನುತ ಅಂಗನೆಲಕುಮಿ ತಾ ಪತಿಯನೆಬ್ಬಿಸುವಳು ಶೃಂಗಾರ ನಿದ್ರೆ ಸಾಕೆನ್ನುತಾ॥ಪ॥ ಪಕ್ಷಿರಾಜನು ಬಂದು ಬಾಗಿಲೊಳಗೆ ನಿಂದು ನಿನ್ನಕ್ಷಿ ತೆಗೆದು ಬೇಗ ವೀಕ್ಷಿಸೆಂದು। ಪಕ್ಷಿಜಾತಿಗಳೆಲ್ಲ ಚಿಲಿಪಿಲಿಗುಟ್ಟುತ್ತ ಸೂಕ್ಷ್ಮದೊ ಳಗೆ ನಿನ್ನ ಸ್ಮರಿಸುವುವೋ ಕೃಷ್ಣ॥1॥ ಸನಕಸನಂದರು। ಸನತ್ಸುಜಾತರು ಬಂದು ವಿನಯದಿಂ ಕರಮುಗಿದು ಓಲೈಪರು ಘನಶುಕ ಶೌನಕ ವ್ಯಾಸ ವಾಲ್ಮೀಕರು ನೆನೆನೆನೆದು ಕೊಂಡಾಡು ವರಯ್ಯ॥2॥ ಅರುಣನು ಬಂದು ಉದಯಾಚಲದಲಿ ನಿಂದು ಕಿರಣತೋರು ವನು ಭಾಸ್ಕರನು ಶ್ರೀಹರಿಯೇ॥3॥ ಪದುಮನಾಭನೆ ನಿನ್ನ ನಾಮಾಮೃತವನ್ನು ಪದುಮಾ ಕ್ಷಿಯರು ತಮ್ಮ ಗೃಹದೊಳಗೆ ನೆನೆದು ನಲಿದು ಕೊಂಡಾಡುತ್ತ। ಪಾಡುತ್ತ ದಧಿಯ ಕಡೆವ ಕೇಳು ಮಧು ಸೂದನ ಕೃಷ್ಣ॥4॥ ಮುರಮಥನನೆ ನಿನ್ನ ಚರಣದ ಸೇವೆಯ ಕರುಣಿಸ ಬೇಕೆಂದು ತರುಣಿ ಯರು ಪರಿಪರಿಯಿಂದಲೆ ಸ್ಮರಿಸಿ ಹಾರೈಪರು ಪುರಂದರ ವಿಠಲ ನೀನೇಳೊ ಶ್ರೀಹರಿಯೇ ॥5॥

ಕೋಳಿ ಕೂಗಿತಲ್ಲಾ ಲಕ್ಷ್ಮೀಲೋಲನಲ್ಲದೆ

ಕೋಳಿ ಕೂಗಿತಲ್ಲಾ ಲಕ್ಷ್ಮೀಲೋಲನಲ್ಲದೆ ಬೇರೆ ಪರದೈವವಿಲ್ಲವೆಂದು। ಕೋಳಿ ಕೂಗಿತಲ್ಲಾ ಲಕ್ಷ್ಮೀ॥ ಮೊದಲು ಜಾವದಲ್ಲಿ ಶ್ರೀರಂಗನೆಂದು ಕೂಗೆ ಎರಡನೆ ವೆಂಕಟಾದ್ರಿ ಎನ್ನಲು ಮದ ಗಜಗಮನ ಶ್ರೀ ಲಕ್ಷ್ಮೀನರಸಿಂಹ ಚದುರ ಶ್ರೀ ಚೆಲ್ವ ಪಿಳ್ಳೆರಾಯನಲ್ಲದಿಲ್ಲವೆಂದು॥1॥ ಮೂರು ಜಾವದಲ್ಲಿ ಮುಕುಂದನೆಂದು ಕೂಗೆ ನಾಲ್ಕರಲ್ಲಿ ನಾರಾಯಣ ಎನ್ನಲು ಕ್ಷೀರಸಾಗರವಾಸ ಶ್ರೀಲಕ್ಷ್ಮೀನರಸಿಂಹ ಕೋನೇರಿ ವಾಸ ವೆಂಕಟನಲ್ಲದಿಲ್ಲವೆಂದು॥2॥ ಐದು ಜಾವದಲ್ಲಿ ಅನಂತ ನೆಂದು ಕೂಗೆ ಆರರಲ್ಲಿ ಅಳಗಾದ್ರಿ ಅಪ್ಪನೆಂದು ಏಳನೇ ಕಾಶೀಯ ಬಿಂದುಮಾಧವನೆಂದು ಎಂಟರಲ್ಲಿ ಶ್ರೀಪುರಂದರ ವಿಠಲನಲ್ಲದಿಲ್ಲವೆಂದು॥3॥

ಜಿಹ್ವೇ ಕೀರ್ತಯ ಕೇಶವಃ

ಜಿಹ್ವೇ ಕೀರ್ತಯ ಕೇಶವಃ ಮುರರಿಪುಂ ಚೇಕೋಭಜ ಶ್ರೀಧರಂ ಪಾಣಿ ದ್ವಂದ್ವ ಸಮಚರ್ಯಯ ಅಚ್ಯುತ ಕಥಾಂ ಶ್ರೋತ್ರ ದ್ವಯ ತ್ವಂ ಶೃಣು ಕೃಷ್ಣಂಲೋಕನ ಲೋಚನದ್ವಯ ಹರೇಗತ ಚ್ಛಾಂಘ್ರಿ ಯುಗ್ಮಾಲಯಂ ಜಿಘ್ರಘ್ರಾಣ ಮುಕುಂದ ಪಾದ ತುಲಸೀಂ ಮೂರ್ಧನ್ ಸಮಾಧೋಕ್ಷಜ॥

ಕೇಳಲಾರೆನು ದೂರ ಕೇಶವ

ಕೇಳಲಾರೆನು ದೂರ ಕೇಶವ ಬಾರೋ। ತಾಳಲಾರೆನು ನಾರಾಯಣ ಬಾರೋ। ಹಾಳು ಮಾಡುವುದಿಲ್ಲ ಮಾಧವ ಬಾರೋ। ಶೀಲಮೂರುತಿಯೆ ಶ್ರೀ ಗೋವಿಂದ ಬಾರೆಂದು ನಾರಿಯರು ಹಸೆಗೆ ಕರೆವರು॥1॥ ದುಷ್ಟತನವ ಬಿಡು ವಿಷ್ಣುವೆ ಬಾರೊ। ದಿಟ್ಟನೆನಿಪ ಮಧುಸೂದನ ಬಾರೋ। ಕಟ್ಟಿಹಾಕುವುದಿಲ್ಲ ತ್ರಿವಿಕ್ರಮ ಬಾರೋ। ಸೃಷ್ಟಿಯ ಬೇಡಿದ ವಾಮನನೆ ನೀ ಬಾರೆಂದು ಕಟ್ಟಾಣಿಯರ್ ಹಸೆಗೆ ಕರೆವರು॥2॥। ಬಿಡದೆ ಮೊಲೆಯನುಂಡ ಶ್ರೀಧರ ಬಾರೋ। ಕೊಡುವೆ ಹಾಲನು ಋಷಿಕೇಶನೆ ಬಾರೋ। ಒಡವರುದ್ಧಾರಿ ಪದ್ಮನಾಭನೆ ಬಾರೋ ಒಡೆಯ ವೆಂಕಟ ದಾಮೋದರ ಬಾರೆಂದು ಮಡದಿಯರು ಹಸೆಗೆ ಕರೆವರು॥3॥ ಶಂಖವ ಪಿಡಿದ ಸಂಕರ್ಷಣ ಬಾರೋ। ಶಂಕೆ ಇಲ್ಲದೆ ವಾಸುದೇವನೆ ಬಾರೋ। ಶಂಕರಪ್ರೀಯ ಪ್ರದ್ಯುಮ್ನನೆ ಬಾರೋ। ಪಂಕಜನಾಭ ಅನಿರುದ್ಧನೆ ಬಾರೆಂದು ಶಂಕಿಣಿರು ಹಸೆಗೆ ಕರೆವರು॥4॥ ಪುರುಷೋತ್ತಮ ಪುಣ್ಯಪುರುಷನೆ ಬಾರೋ ನಿರುತವು ಪೊರೆವ ಅಧೋಕ್ಷಜ ಬಾರೋ। ನರಸಿಂಹ ಮೂರುತಿ ಹರಿಯೆ ನೀ ಬಾರೋ। ನರಮೃಗ ಅಚ್ಯುತನೆ ನೀ ಬಾರೆಂದು ಹರುಷದಲಿ ಹಸೆಗೆ ಕರೆವರು॥5॥ ನಸುನಗೆ ಮೊಗದ ಜನಾರ್ದನ ಬಾರೋ। ಕುಸುಮನಾಭ ಉಪೇಂದ್ರನೆ ಬಾರೋ। ಬಿಸರುಹ ನಯನನೆ ಹರಿಯೆ ನೀ ಬಾರೋ। ಕುಶಲದಿ ಕೃಷ್ಣ ನಾರಾಯಣ ಬಾರೆಂದು ನಸುನಗುತಲಿ ಹಸೆಗೆ ಕರೆವರು॥6॥

ಕೇಶವ ಮಾಧವ ಗೋವಿಂದ ವಿಠಲೆಂಬೊ

ಕೇಶವ ಮಾಧವ ಗೋವಿಂದ ವಿಠಲೆಂಬೊ। ದಾಸಯ್ಯಬಂದಕಣೆ।। ದೋಷರಹಿತ ನರವೇಷವ ಧರಿಸಿಹ। ದಾಸಯ್ಯ ಬಂದಕಣೇ।।ಪ।। ಖಳನು ವೇದವನೊಯ್ಯೆ ಪೊಳೆವೋ ಕಾಯನಾದ ದಾಸಯ್ಯ ಬಂದಕಾಣೆ। ಘಳಿಲನೆಕೂರ್ಮತಾನಾಗಿ ಗಿರಿಯ ಪೊತ್ತ ದಾಸಯ್ಯ ಬಂದಕಾಣೆ।। ಇಳೆಯ ಕದ್ದಸುರನ ಕೋರೆದಾಡೇಲಿಕೊಂದ ದಾಸಯ್ಯ ಬಂದಕಾಣೇ। ಛಲದಿ ಕಂಬದಿ ಬಂದು ಅಸುರನಸೀಳಿದ ದಾಸಯ್ಯ ಬಂದಕಾಣೆ।।1।। ಬಲಿಯ ದಾನವ ಬೇಡಿ ನೆಲನ ಅಳೆದು ನಿಂದದಾಸಯ್ಯ ಬಂದ ಕಾಣೇ। ಛಲದಿ ಕ್ಷತ್ರಿಯರ ಕುಲವತುಂಡರಿಸಿದ ದಾಸಯ್ಯ ಬಂದಕಾಣೇ। ಲಲನೆಯ ನೊಯ್ದುದ್ದಾ ತಲೆ ಹತ್ತರವನ ಕೊಂದಾ ದಾಸಯ್ಯ ಬಂದ ಕಾಣೇ। ನೆಲಕೊತ್ತಿ ಕಂಸನ ಬಲವ ಸಂಹರಿಸಿದ ದಾಸಯ್ಯ ಬಂದ ಕಾಣೇ।।2।। ಪುಂಡತನದಿಪೋಗಿ ಪುರವನುರುಪಿಬಂದ ದಾಸಯ್ಯ ಬಂದ ಕಾಣೇ। ಭಂಡರಸದೆಯಲು ತುರಗವನೇರಿದ ದಾಸಯ್ಯ ಬಂದಕಾಣೇ। ಹಿಂಡುವೇದಗಳೆಲ್ಲ ಅರಸಿ ನೋಡಲು ಸಿಗದದಾಸಯ್ಯ ಬಂದಕಾಣೇ। ಪಾಂಡುರಂಗ ನಮ್ಮ ಪುರಂಧರ ವಿಠಲನೆಂಬೋದಾಸಯ್ಯ ಬಂದ ಕಾಣೇ।।3।।

ಮಾಧವಾ ಕೇಶವಾ ಮಧುಸೂದನ ರಾಗ: ಕಾಪಿ–ಆದಿತಾಳ

ಮಾಧವಾ ಕೇಶವಾ ಮಧುಸೂದನ ವಿಷ್ಣು। ಶ್ರೀಧರಂ ಪದ ನಖಂ ಚಿಂತಯಾಮಿ ಯಾಯಂ।।ಪ।। ವಾಮನ ಗೋವಿಂದ ವಾಸುದೇವ ಪ್ರದ್ಯುಮ್ನ। ರಾಮ ರಾಮ ಕೃಷ್ಣ ನಾರಾಯಣಾಚ್ಯುತ। ದಾಮೋದರಾನಿರುದ್ಧ ದೈವ ಪುಂಡರೀಕಾಕ್ಷ। ನಾಮತ್ರಯಾಧೀಶ ನಮೋನಮೋ।।1।। ಪುರುಷೋತ್ತಮ ಪುಂಡರೀಕಾಕ್ಷ ದಿವ್ಯ। ಹರಿ ಸಂಕರ್ಷಣ ಅಧೋಕ್ಷಜ। ನರಸಿಂಹ ಹೃಷಿಕೇಶ ನಗಧರ ತ್ರಿವಿಕ್ರಮ। ಶರಣಾಗತರಕ್ಷಕ ಜಯ ಜಯ ನೀವೆ।।2।। ಮಹಿತ ಜನಾರ್ದನ ಮತ್ಸ್ಯಕೂರ್ಮ ವರಾಹ। ಸಹಜ ಭಾರ್ಗವ ಬುದ್ಧ ಜಯ ತುರಗ ಕಲ್ಕಿ। ವಿಹಿತ ವಿಜ್ಞಾನ ಶ್ರೀವೇಂಕಟೇಶ ಶುಭಕರಂ। ಅಹಮಿಹ ತವಪದ ದಾಸ್ಯಂ ಅನಿಶಂ ಭಜಾಮಿ।।3।।

ಶ್ರೀಧರ ಕೇಶವ ನಾರಾಯಣಾ

ಶ್ರೀಧರ ಕೇಶವ ನಾರಾಯಣಾ। ಶ್ರೀಕರ ಶುಭಕರ ನಾರಾಯಣ।।ಪ।। ಈಜಗವೊಂದು ನಾಟಕ ಮಂದಿರ। ಜನರೆಲ್ಲ ಸೂತ್ರದ ಬೊಂಬೆಗಳಯ್ಯಾ। ನೀನಾಡಿಸಿದಂತೆ ಆಡುವರಯ್ಯ। ಲೀಲಾಮಯದೇವ ನೀನೇ।।1।। ಕಮಲಾರಮಣ ಪನ್ನಗ ಶಯನ। ದುರಿತನಿವಾರಣ ಭವಭಯ ಹರಣ। ದೀನಜನ ಮಂದಾರ ದಾನವ ಸಂಹಾರ। ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕ। ಮೂರ್ಲೋಕದಿ ನೀನೇ ಪೂಜಿತನಯ್ಯಾ। ಭಕ್ತರ ಭಕ್ತನು ನೀನಯ್ಯಾ।।2।। ಸುರಕುಲ ಸೇವಿತ ಲೋಕೈಕ ನಾಥ। ಮುನಿಜನ ವಂದಿತ ಮಂಗಳದಾತ। ಶ್ರೀಕಾಂತರಾಜಿತ। ಕರುಣಾಮಯನೆ ಕಾರುಣ್ಯ ಶೀಲನೆ। ಕಾಮಿತದಾಯಕ ಗರುಡ ಗಮನ ಎಲ್ಲದಕೂ ನೀನೇ ಆಧಾರವಯ್ಯ ಆಪದ್ಬಾಂದವ ನೀನಯ್ಯಾ।।3।।

ಮಾತು ಮಾತಿಗೆ ಕೇಶವ ರಾಗ: ರೇಗುಪ್ತಿ–ಅಟ್ಟತಾಳ

ಮಾತು ಮಾತಿಗೆ ಕೇಶವ ನಾರಾಯಣ। ಮಾಧವ ಎನ್ನಬಾರದೆ।।ಪ।। ಪ್ರಾತಃಕಾಲದಲೆದ್ದು ಪಾರ್ಥಸಾರಥಿಯನು। ಪ್ರೀತಿಯಲಿ ನೆನೆದರೆ ಪ್ರೀತನಾಗುವ ಹರಿ।।ಅ.ಪ।। ಜಲಜನಾಭನ ನಾಮವು ಈ ಜಗಕೆಲ್ಲ। ಜನನ ಮರಣ ಹರವು ಬಲ್ಲಿದ ಪಾಪಂಗಳೆಲ್ಲ ಪರಿಹರಿಸುವುದೆಂದು। ತಿಳಿದು ತಿಳಿಯದಿಹರೆ ಹೇ ಜಿಹ್ವೆ।।1।। ತರಳೆ ದ್ರೌಪದಿಯ ಸೀರೆಯ ಸೆಳೆದಾಗ। ಹರಿ ನೀನೆ ಗತಿಯೆನಲು। ಪರಮ ಪುರುಷ ಭವಭಂಜನ ಕೇಶವ। ದುರುಳರ ಮರ್ದಿಸಿ ತರಳೆಗಭಯವಿತ್ತ। ಹರಿ ನಮ್ಮೊಡೆಯನಲ್ಲವೆ ಹೇ ಜಿಹ್ವೆ।।2।। ಹೇಮಕಶ್ಯಪ ಸಂಭವ ಈ ಜಗಕೆಲ್ಲ। ನಾಮವೆ ಗತಿಯೆನಲು। ವಾಮನ ನೀನೆಂದು ವಂದಿಸಿದವರಿಗೆ। ಶ್ರೀಮದನಂತ ಹೇ ಜಿಹ್ವೆ।।3।।

ಕೇಶವನೊಲುಮೆಯು ಆಗುವತನಕ — ರಾಗ: ಪಂತುವರಾಳಿ-ಆದಿತಾಳ

ಕೇಶವನೊಲುಮೆಯು ಆಗುವತನಕ ಹರಿ ದಾಸರೊಳಿರುತಿರು ಹೇ ಮನುಜ॥ಪ॥ ಕ್ಲೇಶಪಾಶಂಗಳ ಹರಿದು ವಿಲಾಸದಿ। ಶ್ರೀಶನ ನುತಿಗಳ ಪೊಗಳುತ ಮನದೊಳು॥ಅ.ಪ.॥ ಮೋಸದಿ ಜೀವರ ಘಾಸಿ ಮಾಡಿದ ಪಾಪ। ಕಾಶಿಗೆ ಹೋದರೆ ಹೋದೀತೆ॥ ಶ್ರೀಶನ ಭಕುತರ ದೂಷಿಸಿದಾಫಲ। ಕಾಸು ಕೊಟ್ಟರೆ ಬಿಟ್ಟೀತೆ॥ ಭಾಷೆಯ ಕೊಟ್ಟು ನಿರಾಶೆ ಮಾಡಿದಾ ಫಲ। ಕ್ಲೇಶವಗೊಳಿಸದೆ ಇದ್ದೀತೆ॥ ಭೂಸುರಸ್ವವ ಹ್ರಾಸ ಮಾಡಿದ ಫಲ ಏಸೇಸು ಜನುಮಕು ಬಿಟ್ಟೀತೆ॥1॥ ಜೀವನ ವಶದೊಳು ನಾನಾದ್ರವ್ಯವಿರೆ। ದಾನಧರ್ಮಕ್ಕೆ ಮನಸಾದೀತೆ। ಹೀನ ಮನುಜಗೆ ಜ್ಞಾನವಬೋಧಿಸೆ। ಹೀನ ವಿಷಯವಳಿದ್ಹೋದೀತೆ। ಮಾನಿನಿ ಮನಸು ನಿಧಾನವಿರದಿರೆ। ಮಾನಾಭಿಮಾನಗಳುಳಿದೀತೆ। ಭಾನುಪ್ರಕಾಶನ ಭಜನೆಯ ಮಾಡದ। ಹೀನಗೆ ಮುಕುತಿಯು ದೊರಕೀತೆ॥2॥ ಕರುಣಾಮೃತದಾಭರಣವ ಧರಿಸಿದ। ಪರಮಗೆ ಸಿರಿಯು ತಪ್ಪೀತೆ॥ ಕರುಣಪಾಶದುರವಣೆ ತೊರೆದಾತಗೆ। ಶರಣರ ಕರುಣವು ತಪ್ಪೀತೆ॥ ಅರಿತು ಶಾಸ್ತ್ರವನು ಆಚರಿಪ ಯೋಗ್ಯಗೆ। ಗುರುಉಪದೇಶವು ತಪ್ಪೀತೆ॥ ವರವೇಲಾಪುರದಾದಿ ಕೇಶವನ। ಸ್ಮರಿಸುವವನಿಗೆ ಮೋಕ್ಷ ತಪ್ಪೀತೆ॥3॥

ಹರೇ ಮುರಾರೇ — ರಾಗ: ಮೋಹನ-ಆದಿತಾಳ

ಹರೇ ಮುರಾರೇ ಮಧುಕೈಟಭಾರೇ। ಗೋವಿಂದ ಗೋಪಾಲ ಮುಕುಂದ ಶೌರೇ॥ ಅನಂತ ಶ್ರೀಧರ ಗೋವಿಂದ ಕೇಶವ। ಮುಕುಂದ ಮಾಧವ ನಾರಾಯಣ॥ ದೇವಕೀತನಯಾ ಗೋಪಿಕಾರಮಣ। ಭಕ್ತ ಉದ್ಧರಣ ತ್ರಿವಿಕ್ರಮ॥

ಕೇಶವಾಚ್ಯುತ ಮುಕುಂದ (ಹರಿ ನಾಮಾಷ್ಟಕಮ್)

ಕೇಶವಾಚ್ಯುತ ಮುಕುಂದ ರಥಾಂಗಪಾಣೇ। ಗೋವಿಂದ ಮಧುಸೂಧನ ಜನಾರ್ಧನ ದಾನವಾರೆ। ನಾರಾಯಣ ಮರಪತೇ ತ್ರಿಜಗನಿವಾಸ। ಜಿಹ್ವೇ ಜಪೇತಿ ಸತತಂ ಮಧುರಾಕ್ಷರಾಣಿ ॥1॥ ಶ್ರೀದೇವದೇವ ಮಧುಸೂದನ ಶಾರ್ಙ್ಗಪಾಣೇ। ದಾಮೋದಾರಾರ್ಣವ ನಿಕೇತನ ಕೈಟ ಭಾರೇ। ವಿಶ್ವಂಭರಾಭರತ ಭೂಷಿತ ಭೂಮಿಪಾಲ। ಜಿಹ್ವೇ ಜಪೇತಿ ಸತತಂ ಮಧುರಾಕ್ಷರಾಣಿ ॥2॥ ಶ್ರೀಪದ್ಮಲೋಚನ ಗದಾಧರಪದ್ಮನಾಭ। ಪದ್ಮೇಶ ಪದ್ಮಪದಪಾವನ ಪದ್ಮ ಪಾಣೇ। ಪೀತಾಂಬರಾಂಬರ ರುಚೇ ರುಚಿರಾವತಾರ। ಜೀಹ್ವೇ ಜಪೇತಿ ಸತತಂ ಮಧುರಾಕ್ಷರಾಣಿ॥3॥ ಶ್ರೀಕಾಂತ ಕೌಸ್ತುಭ ಧರಾರ್ತಿ ಹಾರಾಬ್ಜ ಪಾಣೇ। ವಿಷ್ಣೋ ತ್ರಿವಿಕ್ರಮ ಮಹೀಧರ ಧರ್ಮ ನೇತೋ। ವೈಕುಂಠ ವಾಸ ವಸುಧಾದಿಪ ವಾಸುದೇವ। ಜಿಹ್ವೆ ಜಪೇತಿ ಸತತಂ ಮಧುರಾಕ್ಷರಾಣಿ ॥4॥ ಶ್ರೀನಾರಸಿಂಹ ನರಕಾಂತಕ ಕಾಂತಮೂರ್ತೇ। ಲಕ್ಷ್ಮೀಪತೇ ಗರುಡ ವಾಹನ ಶೇಷ ಶಾಯಿನ್। ಕೇಶೀಪ್ರಣಾಶನ ಸುಕೇಶ ಕಿರೀಟಮೌಳಿ। ಜಿಹ್ವೇ ಜಪೇತಿ ಸತತಂ ಮಧುರಾಕ್ಷರಾಣಿ ॥5॥ ಶ್ರೀವತ್ಸ ಲಾಂಛನ ಸುರರ್ಷಭ ಶಂಖಪಾಣೇ। ಕಲ್ಪಾಂತವಾರಿಧಿ ವಿಹಾರ ಹಾರೇ ಮುರಾರೇ। ಯಜ್ಞೇಶ ಯಜ್ಞಮಯ ಯಜ್ಞಭುಗಾದಿದೇವ। ಜಿಹ್ವೇ ಜಪೇತಿ ಸತತಂ ಮಧುರಾಕ್ಷರಾಣಿ॥6॥ ಶ್ರೀರಾಮ ರಾವಣರಿಪೋ ರಘುವಂಶಕೇತೋ। ಸೀತಾಪತೇ ದಶರಥಾತ್ಮಜ ರಾಜಸಿಂಹ। ಸುಗ್ರೀವ ಮಿತ್ರ ಮೃಗ ವೇಧನ ಚಾಪ ಪಾಣೇ। ಜಿಹ್ವೆ ಜಪೇತಿ ಸತತಂ ಮಧುರಾಕ್ಷರಾಣಿ॥7॥ ಶ್ರೀಕೃಷ್ಣ ವೃಷ್ಣಿವರ ಯಾದವ ರಾಧಿಕೇಶ। ಗೋವರ್ಧನೋದ್ಧರಣ ಕಂಸ ವಿನಾಶ ಶೌರೇ। ಗೋಪಾಲ ವೇಣುಧರ ಪಾಂಡುಸುತೈಕ ಬಂಧೋ। ಜಿಹ್ವೇ ಜಪೇತಿ ಸತತಂ ಮಧುರಾಕ್ಷರಾಣಿ॥8॥ ಇಥ್ಯಷ್ಟಕಂ ಭಗವತ ಸ್ಸತತಂ ನರೋಯೋ। ನಾಮಾಂಕಿತಂ ಪಠತಿ ನಿತ್ಯಮನನ್ಯ ಚೇತಾಃ। ವಿಷ್ಣೋಃ ಪರಂ ಪದಮುಪೈತಿ ಪುನರ್ನಜಾತು। ಮಾತುಃ ಪಯೋಧರರಸಂ ಪಿಬತೀಃ ಸತ್ಯಂ॥

ಕೇಶವ ಕೃಷ್ಣ ಮುಕುಂದ ಹರಿ ವಾಸುದೇವ

ಕೇಶವ ಕೃಷ್ಣ ಮುಕುಂದ ಹರಿ ವಾಸುದೇವ ಜಗದ್ಗುರು ಸದ್ಗುರು ಸದಾನಂದ ಯಶೋಧೆಗೆ ಸುಕೃತದ ಕಂದ ಶೇಷಶಯನ ಭಕ್ತ ಹೃದಯಾನಂದ॥1॥ ಅಚ್ಯುತಾನಂತ ಗೋವಿಂದ॥ ಸಚ್ಚಿದಾನಂದ ಮುಕುಂದ ಆನಂದ॥ ನಾರಾಯಣ ನಿಮ್ಮ ನಾಮ ಎನ್ನ ನಾಲಿಗೆ ಮೇಲಿರಬೇಕೆಂಬೊ ನೇಮ ನಾನು ನೆನೆವೆ ನಿಮ್ಮ ನಾಮ ಎನ್ನ ಪ್ರಾಣ ಪ್ರಯಾಣ ಸಮಯಕ್ಕೆ

ಬರಬೇಕು ನಿಮ್ಮ ನಾಮ॥2॥ **ಗೋವಿಂದ** ಗೋಕುಲ ಬಾಲ ಆನಂದ ಷೋಡಸಾಸಿರ ಗೋಪಿ ನೀನೆ ಮುಕ್ತಾಮಣಿ ಮಾಲ ನಿನ್ನ ನೇನೆಂದು ಕರೆವೆನು ಶ್ರೀ ಲಕ್ಷ್ಮೀಲೋಲ॥3॥**ಮಧುಸೂದನ** ಮಾರಜನಕ ಮದಗಜವ ಸೀಳಿ ಮಲ್ಲರ ಗೆಲಿದವನಂತೆ ಒದಗಿ ಕಂಸನ ಕೊಂದ ಬಳಿಕ ನೀ ಮುದುಕಗೆ ಪಟ್ಟ ಕಟ್ಟಿದೆ ಪ್ರಾಣಪದಕ॥4॥ ವಿಷ್ಣು ಚಕ್ರವು ಬಂದು ಸುತ್ತೆ ಮೂರು ಸೃಷ್ಟಿಯನೆಲ್ಲವ ಬಿಡದೆ ಬೆನ್ನ ಹತ್ತೆ ಶ್ರೀಕೃಷ್ಣ ಶರಣೆಂದು ಮೊರೆಯಿಟ್ಟ ಅಷ್ಟರ ಮೇಲೆ ಮುನಿಗೆ ನೀನ ಭಯವಿತ್ತೆ॥5॥ **ಮಾಧವ** ಮಂಗಳ ಗಾತ್ರ ಮಹದೇವ ಕೈಲಾಸವಾಸನ್ನ ಮಿತ್ರ ಮಹಿಮೆಯ ನೋಡಿದರೆ ವಿಚಿತ್ರ ಎನ್ನ ಮನಮೆಚ್ಚಿ ಶ್ರೀ ಸತ್ಯಭಾಮಾ ಕಳತ್ರ॥6॥ **ವಾಮನ** ರೂಪ ನೀನಾಗಿ ಬಲಿಯ ದಾನವ ಬೇಡಲು ಉಚಿತವೇ ಪೋಗಿ ಧರೆಯ ನೆರೆಯಲು ತ್ಯಾಗಿ ಅಳೆದು ಸಾಲದೆಂದು ಬಂದುನಿಂದೆ ಮುಂದೆ ವಟುವಾಗಿ॥7॥ **ತ್ರಿವಿಕ್ರಮ** ತ್ರೈಲೋಕ್ಯನಾಥ ತ್ರಿಪುರರ ಸತಿಯರ ವ್ರತಕೆ ವಿಘಾತ ಯದುಕುಲ ಪಾಂಡವ ಪ್ರೀತ ಎನ್ನ ಹೃದಯದಲ್ಲಡಿಗಿರುವ ಶ್ರೀಗೋಪಿನಾಥ॥8॥ ಶ್ರೀಧರ ಶೃಂಗಾರಹಾರ ಶ್ರೀವತ್ಸಲಾಂಛನ ಶ್ರೀ ರಘುವೀರ ವಾರಿಧಿ ಸಮ ಗಂಭೀರ ಕ್ರೂರ ರಕ್ಕಸ ದಲ್ಲಣ ಸಂಹಾರ॥9॥ ಹೃಷಿಕೇಶ ಬೃಂದಾವನದಲ್ಲಿ ಹರುಷದಿ ಕೊಳಲನೂದತಲಿರಲಿಲ್ಲ ಸತಿಯರ ಸಮ್ಮೇಳನದಲ್ಲಿ ಬಹು ಸಡಗರದಿಂದ ಕಾಲ ಕಳೆಯಲಿಲ್ಲ ನೀ ನಿಲ್ಲೋ ಮನದಲ್ಲಿ॥10॥ ಪದ್ಮನಾಭ ಕೇಳೋ ನಿನ್ನ ಸುದ್ದಿಯನೆಲ್ಲ ಅರುಹುವೆ ಮುನ್ನ ಅದ್ವೈತ ಗುಣ ರೂಪ ಸಂಪನ್ನ ನೀನಿದ್ದ ತಾವಿಗೆ ಕರೆದೊಯ್ಯುದ್ಕೋ ಎನ್ನ॥11॥ ದಾಮೋದರ ದನುಜ ದಲ್ಲಣನೇ ದಾನವಾಂತಕ ಯದುಕುಲ ಸಾರ್ವಭೌಮ ನೀನೆ ನೀಲ ಮೇಘಶ್ಯಾಮ ಕೃಷ್ಣ ಭುವನಾಧಿಪತಿ ಎಂಬ ಬಹು ಪುಣ್ಯನಾಮ॥12॥ ಸಂಕರ್ಷಣ ಸರ್ವಾಭರಣ ಪಂಕಜಮುಖಿ ದ್ರೌಪದಿ ಮೇಲೆ ಕರುಣ ಕುಂಕುಮಾಂಕಿತ ನಾಮಕಿರಣ ನೀನಿಟ್ಟ ಕಂಕಣ ಕೌಸ್ತುಭ ಸರ್ವಾಭರಣ॥13॥ ವಾಸುದೇವ ಕೇಳೋ ನಿನ್ನ। ಸಾಸಿರ ನಾಮವ ಪೊಗಳುವೆ ಮುನ್ನ ಬೇಸರದೆ ಕೇಳ್ವೆ ನಿನ್ನ। ಎನ್ನ ಘಾಸಿಮಾಡದೆ ಕರೆದೊಯ್ಯುಕೋ ಬೇಗ॥14॥ ಪ್ರದ್ಯುಮ್ನನೆಂದು ನಾಕರೆಯೆ ಎನ್ನ ದುರ್ಬುದ್ಧಿಗಳನೆಲ್ಲಾ ನಾಮರೆಯೆ ದುರ್ಯುಕ್ತಿಯಮಾರ್ಗ ತೊರೆಯೆ ಸಾಧುಸಜ್ಜನರ ಸಂಗವು ನಿನ್ನಿಂದ ದೊರೆಯೆ॥15॥ ಅನಿರುದ್ಧ ಗೋಕುಲದಲ್ಲಿ ಅನುದಿನವಿರಲು ಗೋಪಿಯರ ಮನೆಯಲ್ಲಿ ಸನಕಾದಿವಂದ್ಯ ನಿನ್ನನಗಲಿ ಒಂದು ನಿಮಿಷ ಬಿಟ್ಟಿರಲಾರೆ ನೀನಿಲ್ಲೋ ಮನದಲ್ಲಿ॥16॥ **ಪುರುಷೋತ್ತಮ** ನಿನಗ್ಯಾರೋ ಸಾಟಿ ಪರಬ್ರಹ್ಮ ಮೂರುತಿ ನಿನಗ್ಯಾರೋ ಸಾಟಿ ಗುಣವೊಂದೆ ಪೊಗಳುವೆ ಕೋಟಿ ನಿಮ್ಮ ಹೃದಯದಿ ಬ್ರಹ್ಮಾಂಡ ಅಖಂಡ ಕಿರೀಟ ॥17॥ **ಅಧೋಕ್ಷಜ** ಅಸುರ ಸಂಹಾರಿ ಆನಂದ ಮಹಿಮ ಶಿಶುಪಾಲನ ವೈರಿ ಆದರೆ ನೀ ಬಹುಶೌರಿ ಅಜಮಿಳ ಕರೆಯಲು ಕಾಯ್ದೆ ಮುರಾರಿ॥18॥ **ನರಸಿಂಹ**ನೆಂದು ನಾ ಕರೆಯೆ ಕಂದನ ಮೊರೆ ಕೇಳಿ ಕಂಬದಿಂ ಬಂದೆ ಹರಿಯೆ ದುರುಳ ಹಿರಣ್ಯಕನೊಡಲ ಸೀಳಿ ಹರುಷದಿಂ ಕರುಳಮಾಲೆಯ ಕೊರಳಲ್ಲಿ ಧರಿಸಿ ಶಾಂತವ ತಾಳಿ॥9॥ **ಅಚ್ಯುತ** ನೀಸತಿ ಮುದ್ದು ಬಚ್ಚಿಟ್ಟ ಹಾಲು ಬೆಣ್ಣೆಗಳನ್ನೆ ಕದ್ದು ರಚ್ಚೆಗಿಕ್ಕಲು ಕಾಲ ಶಕಟನ ನೀ ಒದ್ದು ಬಚ್ಚಿಡೆ ಚೋರ ಕಂಡಿಗಳಲ್ಲಿ ಕದ್ದು॥20॥ **ಜನಾರ್ದನ** ಕೇಳೋ ಭಿನ್ನಪವ ಎಲ್ಲ ಕ್ರಿಮಿ ತೊಗಲು ಕ್ರಿಮಿಮಾಂಸ ರಕ್ತದ ತನುವ ಹೊರಲಾರೆ ಭೂ ಭಾರದ ತನುವ ನೀನ ಗಲದಿದ್ದರೆ ಎನಗೆ ಮುಕ್ತಿಪಥ ಬಹು ಸುಲಭ॥21॥ **ಉಪೇಂದ್ರ** ನೀನುರಗವ ತುಳಿಯೆ ಅಪರಿಮಿತದ ವಿಷದ ಕಾಳಿಂದಿ ಮಡುವ ಕಲಕಿ ನೀನುಳಿಯೆ ಶಕಟ ದೈತ್ಯನ ಬಂಡಿ, ಮುರಿಯೆ ತ್ರಿಪುರರನೆಲ್ಲರ ಗೆಲಿಯೆ, ಎನ್ನ ಚಲಪ ಬುದ್ಧಿಗಳೆಲ್ಲ ನಿನ್ನಿಂದ ತೊರೆಯೆ ಮರೆಯೆ॥22॥ ಹರಿಹರಿ ಎನ್ನಲು ಪಾಪ ಹರಿದ್ಹೋಯಿತು ಎನ್ನ ಮನದ ಕಲಾಪ ಸರ್ವರೊಳಗೆ ವಿಶ್ವವ್ಯಾಪ ನಿನ್ನ ನೆರೆ ನಂಬಿದವರ ಸಲಹೇನೆಂಬೊ ತಾಪ॥23॥ ಕೃಷ್ಣ ಕೃಷ್ಣ ಎಂಬೊ ಸೊಲ್ಲು ಬಿಟ್ಟು ಹೋಯಿತು ಎನ್ನ ಮನಃಕ್ಲೇಶವೆಲ್ಲಾ ಮುಟ್ಟಿ ಭಜಿಸಿರೋ ನೀವೆಲ್ಲ ಪುರಂದರ ವಿಠಲನೀನಲ್ಲದೆ ಪರದೈವವಿಲ್ಲ॥24॥

ಕಲಿಮಲ ನಾಶಕ ಕೇಶವ

ಕಲಿಮಲ ನಾಶಕ ಕೇಶವ ಕೃಷ್ಣ। ನಾಗಶಯನ ನಾರಾಯಣ ಕೃಷ್ಣ॥ ಮಾತುಳ ಮರ್ದನ ಮಾಧವ ಕೃಷ್ಣ। ಗೋಪಾಲಕ ಹರಿ ಗೋವಿಂದ ಕೃಷ್ಣ॥ ವಿಮಲ ಸ್ವರೂಪಿ ವಿಷ್ಣುವೆ ಕೃಷ್ಣ। ಮುರಳೀಧರ ಮಧುಸೂಧನ ಕೃಷ್ಣ॥1॥ ತ್ರಿನೇತ್ರ ಸಖ ತ್ರಿವಿಕ್ರಮ ಕೃಷ್ಣ। ವಾಸುವಾನುಜನೆ ವಾಮನ ಕೃಷ್ಣ। ಶೇಷ ರಮೇಶನೆ ಶ್ರೀಧರ ಕೃಷ್ಣ। ಹೃದಯದಿ ನೆಲಸೊ ಹೃಷಿಕೇಶನೆ

ಕೃಷ್ಣ॥2॥ ಪದ್ಮಾವತಿ ಪತಿ ಪದ್ಮನಾಭ ಕೃಷ್ಣ। ಸಂಕಷ್ಟಹರ ಸಂಕರ್ಷಣ ಕೃಷ್ಣ। ವಾಸುಕಿಶಯನನೆ ವಾಸುದೇವ ಕೃಷ್ಣ॥3॥ ಪ್ರಪಂಚಪಾಲಕ ಪ್ರದ್ಯುಮ್ನ ಕೃಷ್ಣ। ಅವಿನಾಶ ಅನಿರುದ್ಧನೆ ಕೃಷ್ಣ। ಪರಮಾತ್ಮನೆ ಪುರುಷೋತ್ತಮನೆ ಕೃಷ್ಣ। ಅಮೃತರೂಪ ಅಧೋಕ್ಷಜ ಕೃಷ್ಣ॥4॥ ನಾರಾಯಣ ನರಸಿಂಹನೆ ಕೃಷ್ಣ। ಅಕ್ರೂರ ವರದನೆ ಅಚ್ಚುತ ಕೃಷ್ಣ। ಉರಗಶಯನ ಉಪೇಂದ್ರನೆ ಕೃಷ್ಣ। ಹಲಧರಾನುಜನೆ ಶ್ರೀ ಹರಿಕೃಷ್ಣ॥5॥ ದೋಷಕ್ಷಮಿಸು ಸಲಹೆನ್ನನ್ನು ಕೃಷ್ಣ। ದಾಸ ಕೇಶವನುತ ಉಡುಪಿಯ ಕೃಷ್ಣ। ಕೃಷ್ಣ ಕೃಷ್ಣಹರಿ ರಾಧಾಕೃಷ್ಣ। ಕೃಷ್ಣ ಕೃಷ್ಣ ಕರುಣಾಕರ ಕೃಷ್ಣ॥6॥

ಗಾಳಿ ಬಂದ ಕೈಯಲ್ಲಿ ತೂರಿಕೊಳ್ಳಿರೋ

ಗಾಳಿ ಬಂದ ಕೈಯಲ್ಲಿ ತೂರಿಕೊಳ್ಳಿರೋ॥ಪ॥ ನಾಳೆ ಎನ್ನಬೇಡಿ ಇದೇ ವೇಳೆ ಬನ್ನಿರೋ॥ಅ.ಪ॥ ವಾಸವಾದಿವಿನುತ ವೈಕುಂಠದೊಡೆಯ ನಮ್ಮ ಹೃದಯ। ವಾಸನೆಂದು ಬಿಡದೆ ಕೇಶವನ್ನ ನೆನೆಯಿರೊ॥1॥ ಹೇಯ ಸಂಸಾರದ ಮರ್ಮ ಘಾಯವದು ಮಾಯುವಂತೆ। ಬಾಯಿ ಮುಚ್ಚಿಕೊಳ್ಳದೆ ನಾರಾಯಣನ್ನ ನೆನೆಯಿರೊ॥2॥ ಬೋಧೆಗಳಲ್ಲಿ ಸದ್ಗುರುಬೋಧೆ ಇದು ಎಂದೆನುತ। ಗಾಧೆಗಳೆನ್ನ ಬಿಟ್ಟು ಮಾಧವನ ನೆನೆಯಿರೊ॥3॥ ಇಂದಿನ ದಿನವೆ ಸುದಿನ ಇಂದಿನ ಸೊಲ್ಲೆ ಲೇಸೆಂದು। ಇಂದಿರಾರಮಣ ಗೋವಿಂದನ್ನ ನೆನೆಯಿರೊ॥4॥ ಘನ್ನ ದೇವರ್ಕಳಿಗಿನ್ನು ಮಹಿಮನು ಹರಿ। ಅನ್ಯವಿಲ್ಲವೆಂದು ಶ್ರೀವಿಷ್ಣುವನ್ನು ನೆನೆಯಿರೊ॥5॥ ಸಾಧನೆಯ ಭಕ್ತಿಯೊಳು ಶೋಧನೆಗೈಯುತ್ತ ಕಂಡೆ। ವೀ ಧನವೆನುತ ಮಧುಸೂದನನ್ನ ನೆನೆಯಿರೊ॥6॥ ಶಕ್ರನಿಗೆ ಒಲಿದು ಜಗಚ್ಚಕ್ರವನ್ನು ಅಳೆದು ಮತ್ತೆ। ಶುಕ್ರಶಿಷ್ಯನ ಗೆಲಿದ ತ್ರಿವಿಕ್ರಮನ್ನ ನೆನೆಯಿರೊ॥7॥ ಒಮ್ಮೆ ನೆನೆಯಲು ಭುಕ್ತಿ ಒಮ್ಮೆ ನೆನೆಯಲು ಮುಕ್ತಿ। ಒಮ್ಮನ ಪೂರ್ವಕದಿಂದ ವಾಮನನ್ನ ನೆನೆಯಿರೊ॥8॥ ಈ ಧರೆರಮಣನೆ ನಮ್ಮ ಆಧಾರ ದೊರೆಯು ಬೇರೆ। ಆಧಾರವ ಕಾಣೆನೆಂದು ಶ್ರೀಧರನ್ನ ನೆನೆಯಿರೊ॥9॥ ಕಾಸಿಗೆ ಕೈ ಚಾಚುವಂಥ ಆಶಾಪಾಶವನ್ನು ತೊರೆದು। ಕಾಶಿವಾಸವಿನುತ ಹೃಷಿಕೇಶವನನ್ನು ನೆನೆಯಿರೊ॥10॥ ಈ ಭವತಿಮಿರಕ್ಕೆ ಕೋಟಿ ವಿಭಾವಸು ಸಂಕಾಶ। ಶೋಭನಾಕಾರ ಪದ್ಮನಾಭನನ್ನು ನೆನೆಯಿರೊ॥11॥ ಈ ದುರಾಚಾರ ಗಿರಿ ಬಿದುರವೆಂದರಿತು ಸನು। ಮೋದದಿಂದ ಮನದಿ ದಾಮೋದರನ್ನ ನೆನೆಯಿರೊ॥12॥ ಪುರುಷನಾಗಿ ಹುಟ್ಟಿ ನೂರು ವರುಷ ಬದುಕಿದುದಕೆ ಫಲವ। ಹರುಷದಿಂದ ಪಡೆಯೆ ಸಂಕರುಷಣನ ನೆನೆಯಿರೊ॥13॥ ಇವನೆ ಸರ್ವಶರಣ್ಯ ಇವನೆ ಲೋಕೈಕ ಮಾನ್ಯ। ದೇವದೇವೋತ್ತಮ ವಾಸುದೇವನನ್ನು ನೆನೆಯಿರೊ॥14॥ ವಿದ್ಯೆ ಬೇಕು ಬುದ್ಧಿ ಬೇಕು ಸಿದ್ಧಿ ಬೇಕು ಎಂಬುವರು ಪ್ರದ್ಯುಮ್ನ ಪ್ರದ್ಯುಮ್ನನೆಂದು ನೆನೆಯಿರೊ॥15॥ ಕದ್ದು ಹುಸಿಯನಾಡಿ ಅಪರಬುದ್ಧಿಯಿಂದ ಕೆಡಲಿಬೇಡಿ। ಬುದ್ಧಿವಂತರಾಗಿ ಅನಿರುದ್ಧನ್ನ ನೆನೆಯಿರೋ।16॥ ನಿತ್ಯನೇಮವೆಂಬೋದಿಲ್ಲ ಮತ್ತೆ ದಾನಧರ್ಮವಿಲ್ಲ। ವ್ಯರ್ಥವಾಗದ ಹಾಗೆ ಪುರುಷೋತ್ತಮನ್ನ ನೆನೆಯಿರೊ॥17॥ ರಕ್ಷೆಯಂತ್ರ ಮಂತ್ರ ತಂತ್ರಾಪೇಕ್ಷೆ ಬೇಡ ನಿಮ್ಮಗಳಿಗೆ ಮೋಕ್ಷವನ್ನು ಪಡೆಯಲು ಅಧೋಕ್ಷಜನ್ನ ನೆನೆಯಿರೊ॥18॥ ಬ್ರಹ್ಮನಾಗಿ ನಿರ್ಮಿಸಿ ಪರಬ್ರಹ್ಮನಾಗಿ ರಕ್ಷಿಸಿ। ಸಂಹಾರಕ್ಕೆ ರುದ್ರನಾರಸಿಂಹನನ್ನು ನೆನೆಯಿರೊ॥19॥ ಮುಚ್ಚುಮರೆಯ ಮಂತ್ರವಲ್ಲ... ಒಂದು ಕಾಸು ಇಲ್ಲ। ನೆಚ್ಚದೆ ಸಂಸಾರ ಶ್ರೀಮದಚ್ಯುತನ್ನ ನೆನೆಯಿರೊ॥20॥ ಕಾದ್ರವೇಯಶಯನ ಕರುಣಾರ್ದ್ರಹೃದಯನ ನಿತ್ಯ। ಭದ್ರದಾಯಕ ಶ್ರೀಜನಾರ್ದನನ್ನು ನೆನೆಯಿರೊ॥21॥ ಇಂದ್ರಿಯಂಗಳೇಕವಾಗಿ ಚಂದ್ರಿಕೆ ತೆರದಿ ಸ್ತುತಿ। ತೊಂದ್ರೆ ತಾರದ ಮುನ್ನುಪೇಂದ್ರನನ್ನು ನೆನೆಯಿರೊ॥22॥ ಹರಿಹರಿಯೆನಲು ದುರಿತ ಹರಿದು ಓಡುವುದು ತ್ವರಿತ। ಹಿರಿದು ಭಕ್ತಿಯಿಂದ ಸಿರಿ ಹರಿಯನ್ನು ನೆನೆಯಿರೊ॥23। ಕೃಷ್ಣನ ನಾಮವೆ ಗತಿ ಕೃಷ್ಣನ ಪಾದವೆ ಗತಿ। ಕಷ್ಟವೆಲ್ಲ ನೀಗಲು ಶ್ರೀ ಕೃಷ್ಣನನ್ನ ನೆನೆಯಿರೊ॥24॥ ಭುಕ್ತಿ ಕೊಡುವ ಮುಕ್ತಿ ಕೊಡುವ ಮತ್ತೆ ಸಾಯುಜ್ಯ ಕೊಡುವ ಶಕ್ತ ನಮ್ಮ ಪುರಂದರವಿಠ್ಠಲನ್ನ ನೆನೆಯಿರೊ॥25॥

ವೆಂಕಟೇಶೋ ವಾಸುದೇವೋ

ವೆಂಕಟೇಶೋ ವಾಸುದೇವೋ। ಪ್ರದ್ಯುಮ್ನೋ ಅಮಿತ ವಿಕ್ರಮ॥ ಸಂಕರ್ಷಣೋ ಅನಿರುದ್ಧಶ್ಚ। ಶೇಷಾದ್ರಿ ಪತಿರೇವಚ॥ ಜನಾರ್ಧನೋ ಪದ್ಮನಾಭೋ। ವೆಂಕಟಾಚಲ ವಾಸಕಃ॥ ಸೃಷ್ಟಿಕರ್ತಾ ಜಗನ್ನಾಥೋ। ಮಾಧವೋ ಭಕ್ತವತ್ಸಲಃ॥

ಗೋವಿಂದೋ ಗೋಪತಿ ಕೃಷ್ಣ। ಕೇಶವೋ ಗರುಡ ಧ್ವಜಃ।।ವರಾಹೋ ವಾಮನಶ್ಚೈವ। ನಾರಾಯಣ ಅಧೋಕ್ಷಜಃ।। ಶ್ರೀಧರಃ ಪುಂಡರೀಕಾಕ್ಷೋ। ಸರ್ವದೇವಸ್ತುತೋ ಹರಿಃ।। ಶ್ರೀನೃಸಿಂಹೋ ಮಹಾಸಿಂಹೋ। ಸೂತ್ರಕಾರ ಪುರಾತನಃ।। ರಮಾ ನಾಥೋ ಮಹೀಭರ್ತಾ। ಭೂಧರಃ ಪುರುಷೋತ್ತಮಃ।। ಚೋಲಪುತ್ರ ಪ್ರಿಯಃ ಶಾಂತೋ। ಬ್ರಹ್ಮದೀನಾಂ ವರಪ್ರದಃ। ಶ್ರೀನಿಧಿಃ ಸರ್ವಭೂತಾನಾಂ। ಭಯ ಹೃದ್ಭಯನಾಶನಃ।। ಶ್ರೀರಾಮೋ ರಾಮಭದ್ರಶ್ಚ। ಭವಬಂಧೈಕ ಮೋಚಕಃ।। ಭೂತಾವಾಸೋ ಗಿರಾ(ಚಲಾ)ವಾಸಃ। ಶ್ರೀನಿವಾಸಃ ಶ್ರೀಯಃ ಪತಿಃ।। ಅಚ್ಯುತಾನಂದಗೋವಿಂದೋ। ವಿಷ್ಣೋರ್ವೇಂಕಟ ನಾಯಕಂ।। ಸರ್ವದೇವೈಕ ಶರಣಂ। ಸರ್ವದೇವೈಕ ದೇವತಂ।। ಸಮಸ್ತ ದೇವ ಕವಚಂ। ಸರ್ವದೇವ ಶಿಖಾ ಮಣಿ।। ಇತೀದಂ ಕೀರ್ತನೀಯಸ್ಯ। ವಿಷ್ಣೋರಮಿತ ತೇಜಸಃ।। ತ್ರಿಕಾಲೇ ಯಃಪಠೇ ನಿತ್ಯಂ ಪಾಪಂತಸ್ಯ ನವಿದ್ಯತೇ।। ರಾಜದ್ವಾರೇ ಪಠೇದ್ಘೋರೇ। ಸಂಗ್ರಾ ಮೇರಿಪು ಸಂಕಟೇ।। ಭೂತ ಸರ್ಪ ಪಿಶಾಚಾದಿ। ಭಯಂ ನಾಸ್ತಿ ಕದಾಚನ।। ಅಪುತ್ರೋ ಲಭತೇ ಪುತ್ರಾನ್। ನಿರ್ಧನೋ ಧನವಾನ್ ಭವೇತ್।। ರೋಗತೋ ಮುಚ್ಯತೇ ರೋಗಾತ್। ಬದ್ಧೋ ಮುಚ್ಯೇತ ಬಂಧನಾತ್ ।। ಯದ್ಯದಿಷ್ಟ ತಮಂಲೋಕೇ। ಸ್ತತ್ತತ್ ಪ್ರಾಪ್ನೋತ್ಯ ಸಂಶಯಃ।। ಐಶ್ವರ್ಯಂ ರಾಜಸನ್ಮಾನಂ। ಭಕ್ತಿಮುಕ್ತಿ ಫಲಪ್ರದಂ।। ವಿಷ್ಣೋರ್ಲೋಕೈಕ ಸೋಪಾನಂ। ಸರ್ವದುಃಖೈಕ ನಾಶನಂ।। ಸರ್ವೈಶ್ವರ್ಯ ಪದಂ ನೃಣಾಂ। ಸರ್ವಮಂಗಲ ಕಾರಕಂ।। ಮಾಯಾವಿ ಪರಮಾನಂದಂ। ತ್ಯಕ್ತ್ವಾವೈಕುಂಠ ಮುತ್ತಮಮ್।। ಸ್ವಾಮಿ ಪುಷ್ಕರಣೀತೀರೇ। ರಮಯಾ ಸಹಮೋದತೇ।। ಕಲ್ಯಾಣಾದ್ಭುತ ಗಾತ್ರಾಯ। ಕಾಮಿತಾರ್ಥಪ್ರದಾಯಿನೇ।। ಶ್ರೀಮದ್ವೇಂಕಟನಾಥಾಯ। ಶ್ರೀನಿವಾಸಾಯ ತೇ ನಮಃ।। ವೆಂಕಟಾದ್ರಿ ಸಮಃ ಸ್ಥಾನಂ। ಬ್ರಹ್ಮಾಂಡೇ ನಾಸ್ತಿ ಕಿಂಚನ।। ವೆಂಕಟೇಶೋ ಸಮೋದೇವೋ। ನಭೂತೋನ ಭವಿಷ್ಯತಿ।। ಏತೇನಸತ್ಯವಾಕ್ಯೇನ। ಸರ್ವಾರ್ಥಾನ್ ಸಾಧನ ಯೋನ್ಯಹಂ।। ಇತಿಃ ಶ್ರೀ ಬ್ರಹ್ಮಾಂಡ ಪುರಾಣೇ ಬ್ರಹ್ಮಂನಾರದ ಸಂವಾದೇ। ಶ್ರೀ ವಂಕೇಟೇಶ ಸ್ತೋತ್ರಂ ಸಂಪೂರ್ಣಂ ಶ್ರೀ ಕೃಷ್ಣಾರ್ಪಣಮಸ್ತು।।

ಅಚ್ಯುತಾನಂತ ಗೋವಿಂದ

ಅಚ್ಯುತಾನಂತ ಗೋವಿಂದ। ಹರಿ। ಸಚ್ಚಿದಾನಂದ ಸ್ವರೂಪ ಮುಕುಂದಾ ।।ಪ।। ಕೇಶವ ಕೃಷ್ಣ ಮುಕುಂದ। ಹರಿ। ವಾಸುದೇವ ಗುರು ಜಗದಾದಿವಂದ್ಯ। ಯಶೋದೆಯ ಸುಕೃತದ ಕಂದ। ಸ್ವಾಮಿ। ಶೇಷಶಯನ ಭಕ್ತ ಹೃದಯಾನಂದ ।।1।। ನಾರಾಯಣ ನಿಮ್ಮ ನಾಮ। ವೆನ್ನ। ನಾಲಿಗೆ ಮೇಲಿರಬೇಕೆಂಬನೇಮ। ನಾನು ಬೇಡುವೆ ನಿಮ್ಮ ನಾಮ।ಪ್ರಾಣ। ಪಯಣಸಮಯಕೊದಗಲಿ ಗುಣಧಾಮ ।।2।। ಮಾಧವ ಮಂಗಳ ಗಾತ್ರ।ಸ್ವಾಮಿ। ಯಾದವ ಕೈಲಾಸಮಿತ್ರ। ಮಹಿಮ ಕೇಳಿದರೆ ವಿಚಿತ್ರ। ನಿನ್ನ। ಮನ ಮೆಚ್ಚಲಿಸತ್ಯಭಾಮಾಕಳತ್ರ ।।3।। ಗೋವಿಂದ ಗೋಪಾಲ ಬಾಲ। ಸೋಳ। ಸಾಸಿರ ಗೋಪೇರ ಆನಂದಲೀಲ। ನೀಲಮಣಿ ಮುಕ್ತಮಾಲಾ।ನಿನ್ನ ನೇನೆಂದುಕರೆಯಲಿಸುಗ್ರೀವ ಪಾಲ ।।4।। ವಿಷ್ಣು ಚಕ್ರವು ಬಂದು।ಸುತ್ತಿ। ಮೂರು ಸೃಷ್ಟಿಯನೆಲ್ಲ ತಿರುಗಿ ಬೆನ್ನಟ್ಟಿ। ಕೃಷ್ಣ ಸಲಹೆಂದು ಮೊರೆಯಿಟ್ಟ।ಮುನಿ। ಶ್ರೇಷ್ಠ ಗಿಷ್ಟರಮೇಲೆ ಅಭಯವ ಕೊಟ್ಟೆ ।।5।। ಮಧುಸೂಧನ ಮಾರಜನಕ।ಮದ। ಗಜ ಸೀಳಿ ಮಲ್ಲರ ಗೆಲಿದೆ ತವಕ। ಒದಗಿ ಕಂಸನ ಕೊಂದ ಬಳಿಕ। ನೀ। ಮುದುಕಗೆಪಟ್ಟವ ಕಟ್ಟಿದ್ಯೋಧನಿಕ ।।6।। ತ್ರಿವಿಕ್ರಮ ತ್ರೈಲೋಕ್ಯನಾಥ। ದೇವ। ತ್ರಿಪುರರ ಸತಿಯರ ವಿಘಾತ। ಯದುವಂಶ ಪಾಂಡವ ಪ್ರೀತ। ಎನ್ನ। ಹೃದಯದೊಳಡಗಿಹ ಶ್ರೀಜಗನ್ನಾಥ।।7।। ವಾಮನ ರೂಪಿಲಿಬಂದು। ಬಲಿಯ। ದಾನವ ಬೇಡಲು ಉಚಿತವು ಎಂದು। ಧಾರೆಯೆರೆಯಲು ಅದು।ಬೆಳೆದು। ಧಾರುಣಿಯೆಲ್ಲವ ನೆಗೆದ್ಯೋನೀನಂದು।।8।। ಶ್ರೀಧರ ಶೃಂಗಾರ ಹಾರ। ದಿವ್ಯ। ಶ್ರೀವತ್ಸಲಾಂಛನ ಶ್ರೀರಘುವೀರ। ವಾರಿಧಿ ಸಮಗಂಭೀರ।ವೀರ। ಕ್ರೂರರಕ್ಷಸರನ್ನೆಲ್ಲ ಸಂಹಾರ।।9।। ಹೃಷಿಕೇಶ ವೃಂದಾವನದಲಿ। ನೀ। ಹರುಷದಿ ಕೊಳಲನೂದುತ ಯಮುನೆಯಲಿ। ಸರಿಯರ ಸಮ್ಮೇಳದಲಿ। ನೀ। ಧರಿಸಿ ದ್ಯೋಮಂದಾರ ಮಾಲೆ ಕೊರಳಲಿ।।10।। ಪದ್ಮನಾಭ ಕೇಳೋ ಘನ್ನ। ಪಾದ ಪದ್ಮವ ತೋರಿಸೊ ಬೇಗನೆ ನಿನ್ನ। ಮುದ್ದು ಮುಖವ ತೋರಿ ಎನ್ನ ।ಬೇಗ। ಉದ್ಧಾರ ಮಾಡೆಂದು ಬೇಡುವೆ ನಿನ್ನ।।11।। ದಾಮೋದರ ಗುಣಧಾಮಾ। ಸ್ವಾಮಿ। ದಾನವಾಂತಕ ಯದುಕುಲ ಸಾರ್ವಭೌಮ।

ನೀಲಮೇಘನಿಭ ಶ್ಯಾಮ। ಕೃಷ್ಣ। ನೀಲಾಪತಿಯೆಂಬ ಬಹುಪುಣ್ಯನಾಮ॥12॥ ಸಂಕರ್ಷಣ ದನುಜ ಹರಣ।ದೇವ। ಪಂಕಜ ಮುಖಿದ್ರೌಪತಿ ಮೇಲೆ ಕರುಣ। ಕುಂಕುಮಾಂಕಿತ ರೇಖಾಚರಣ। ನಿಜ। ಕಂಕಣ ಕೇಯೂರ ಕೌಸ್ತುಭಾಭರಣ॥13॥ ವಾಸುದೇವ ಕೇಳೋ ನಿನ್ನ ।ದಿವ್ಯ। ಸಾಸಿರ ನಾಮವ ನೆನೆವನೆ ಧನ್ಯ। ಬೆಸಸಿಸದೆ ಸಲಹಬೇಕೆನ್ನ।ತುಸು। ಘಾಸಿಯ ಮಾಡದೆ ಕರುಣಾಸಂಪನ್ನ॥14॥ ಪ್ರದ್ಯುಮ್ನನೆಂದು ನಾಕರೆದೇ । ಎನ್ನ। ಬದ್ಧವಾದ ದುಷ್ಕರ್ಮವ ಕಳೆದೆ। ದುರ್ಬುದ್ಧಿ ದುರ್ವಾಕ್ಯ ಮರೆದೆ। ಸಾಧು। ಸಜ್ಜನರ ಸಂಗ ನಿನ್ನಿಂದ ಬೆರೆದೆ॥15॥ ಅನಿರುದ್ಧ ಅನುದಿನದಲ್ಲಿ।ನೀ। ವಿನಯದಿಂದಿದ್ದೆ ಗೋಪಿಯರ ಮನೆಯಲ್ಲಿ। ಸನಕಾದಿ ವಂದ್ಯ ನಿನ್ನಗಲೀ। ಒಂದುಕ್ಷಣ ಬಿಟ್ಟಿರಲಾರೆ ನಿಲ್ಲೊ ಮನದಲ್ಲಿ॥16॥ ಪುರುಷೋತ್ತಮನಿಗಾರು ಸಾಟಿ।ಪರ। ಸ್ವರೂಪಿಯೆ ನಿನಗಾರೋ ಪೋಟಿ। ಮಹಿಮೆ ಕೇಳಿದರೊಂದು ಕೋಟಿ ।ನಿನ್ನ। ಹೃದಯದಿಕಂಡು ಬ್ರಹ್ಮಾಂಡ ಕಿರೀಟಿ॥17॥ ಅಧೋಕ್ಷಜ ಅಸುರ ಸಂಹಾರಿ। ಕೃಷ್ಣ। ಅದ್ಭುತರೂಪ ಶಿಶುಪಾಲ ವೈರಿ। ಭಕ್ತರ ಪಾಲಿಪ ಶೌರಿ ಅಜಾ।ಮಿಳ। ನಾಗರ ನೆನೆಕಾಯ್ದ ಮುರಾರಿ॥18॥ ನರಸಿಂಹ ರೂಪವ ತಾಳ್ದೆ। ಕಂದ। ಕರೆಯೆ ಕಂಭದಿ ಬಂದು ಕರುಣದಿ ಕಾಯ್ದೆ। ದುರುಳ ಹಿರಣ್ಯಕನ ಸೀಳ್ದೆ। ಅವನ। ಕರುಳ ಬಗಿದು ಕಂಠ ಮಾಲೆಯ ಹಾಕ್ದೆ॥19॥ ಅಚ್ಯುತನೆ ನೀನತಿ ಮುದ್ದು ।ಗೋಪಿ। ಬಚ್ಚಿಟ್ಟ ಹಾಲು ಮೊಸರು ಬೆಣ್ಣೆಮೆದ್ದು। ತುಚ್ಛ ಶಕಟನ ಕಾಲಲೊದ್ದು ।ಕಾಡು। ಗಿಚ್ಚನು ನುಂಗಿ ಪಾಲಿಸಿದೆಯೊಗೆದ್ದು॥20॥ ಜನಾರ್ಧನ ರೂಪನಿನ್ನದಾಗಿ ।ಎನ್ನ। ಮನದಕರ್ಮವ ತೊಲಗಿಸೋ ಮುಂದಾಗಿ। ಮುನಿಗಳೆಲ್ಲರು ಒಂದಾಗಿ। ಈತನು। ನಿನ್ನದೆಂಬರೊ ಕೇಳೊ ನಿಜವಾಗಿ॥21॥ ಉಪೇಂದ್ರ ರೂಪದಿ ಬಂದೆ। ಅಪ್ರ।ಮೇಯ ಕಾಳಿಂಗನ ಮಡುವನುಧುಮುಕಿದೆ। ನಾಗನ ಹೆಡೆಗಳ ತುಳಿದೆ।ನಾಗ। ಪತ್ನಿಯರು ಬೇಡೆ ಪತಿಯ ಪಾಲಿಸಿದೆ॥22॥ ಹರಿಹರ ಎಂದರೆ ಪಾಪ ।ರಾಶಿ। ಹರಿದು ಹೋಯಿತು ಎನ್ನ ಮನದ ಸಂತಾಪ। ಸರ್ವರೊಳು ವಿಶ್ವರೂಪ ।ನಿನ್ನ। ನೆರೆ ನಂಬಿದವರನ್ನು ಸಲಹುವ ಭೂಪ॥23॥ ಕೃಷ್ಣ ಕೃಷ್ಣನೆಂಬೊ ಸೊಲ್ಲ।ಕೇಳಿ। ನಷ್ಟವಾಯಿತು ಎನ್ನ ಪಾಪಗಳೆಲ್ಲ। ಮುಟ್ಟಿಭಜಿಸಿರೊ ನೀವೆಲ್ಲ। ಪುರಂಧರ। ವಿಠ್ಠಲನಲ್ಲದೆ ಮತ್ತೆ ಬೇರಿಲ್ಲ॥24॥

ದೇವದೇವನೆ ನಿನ್ನ ಚರಣ ಸರೋಜಗಳ

ದೇವದೇವನೆ ನಿನ್ನ ಚರಣ ಸರೋಜಗಳ ನೆರೆ ನಂಬಿಹೆ। ಭಾವಜನಪಿತ ಜಾನಕೀಪ್ರಿಯ ರಾಘವನೆ ನಾಂ ಬೇಡುವೆ॥ಪ॥ ವಿಶ್ವರೂಪ ಮಹೇಶಸಖ ಸರ್ವೇಶನೇ ಸುಮನೋಹರ ಕ್ಲೇಶನಾಶಕ ಎನ್ನ ಕ್ಲೇಶವ ಬಿಡಿಸು ನೀ ಹರಿಕೇಶವಾ॥1॥ ಘೋರ ದುರಿತವ ದೂರಗೊಳಿಸ್ಯೆ ಪಾಪದೋಷ ನಿವಾರಣ। ವಾರಿಧಿಶಯನ ಧೀರನೇ ಕರುಣಾಕರ ನಾರಾಯಣ॥2॥ ಆದಿದೇವನೆ ನಿನ್ನ ನಾಮವ ಪಾಡಿಪೊಗಳುವೆ ಪರಾತ್ಪರ। ಸಾದರದಿ ನಾನಿನ್ನ ಸೇವೆಯ ಗೈಯುವೆನು ವರ ಮಾಧವಾ॥3॥ ಸುಂದರಾಂಗನೆ ಇಂದಿರೆ ಅರಸ ದೀನಬಂಧುವೆ ದೇವನೆ।ತಂದೆಬಾರೋ ದಂಡ ರಾಘವ ನೊಂದಿರುವೆ ಗೋವಿಂದನೆ॥4॥ ಎಷ್ಟುದಿವಸ ಕಷ್ಟಪಡಲೋ ಸೃಷ್ಟಿಕರ್ತನೆ ಜನಕನೆ। ಇಷ್ಟದೇವನೆ ಎನ್ನ ಕಷ್ಟವ ಪರಿಹರಿಸು ಶ್ರೀವಿಷ್ಣುವೆ॥5॥ ವಿಧವಿಧ ದಿನಾ ಪೂಜೆ ಮಾಡುವೆ ದೈತ್ಯದಾನವ ಭಂಜನ।ಯದುಕುಲೇಶನೆ ಹೃದಯದಲಿ ನಾ ಧ್ಯಾನಿಸುವೆ ಮಧುಸೂಧನಾ॥6॥ ದೇವಕಿ ವಸುದೇವ ನಂದನ ದೇವ ಅಮಿತ ಪರಾಕ್ರಮ। ತಾವು ದೈ ಕಮಲಾಕರ ಭವ ಬಂಧನಹರ ತ್ರಿವಿಕ್ರಮ॥7॥ ಕಾಮಜನಕನೆ ವಿಮಲಚರಿತನೆ ಸ್ತುತಿಸುವೆನು ನಾ ಪಾವನಾ। ಶ್ರೀಮುಕುಂದನೆ ಪ್ರೇಮಸಾಗರ ಕೋಮಲಾಂಗನೆ ವಾಮನಾ॥8॥ ವೇದಮೂರುತಿ ವ್ಯಾದಿಹರಣ ವಿರಾಧನಾಶಕ ಶ್ರೀಧರಾ। ಸಾಧುಜನ ಹೃತ್ಪದ್ಮವಾಸ ಭಕ್ತವತ್ಸಲ ಶ್ರೀಧರಾ॥9॥ ಪಾಪರಹಿತನೆ ಕೌಶಿಕಪಿಯ ದಶಾವತಾರನೆ ದೇವನೆ। ಪೋಷಿಸೆನ್ನನು ದಶರಥಾಸುತ ರಮೇಶನೇ ಹೃಷಿಕೇಶ॥10॥ ಪದ್ಮ ಜೆಯರಸ ಪಾರ್ಥನಾಪ್ರಿಯ ರುಕ್ಮಿಣಿ ಪತಿದೇವನೆ। ಭಕ್ತವತ್ಸಲ ದೇವನೇ ಹರಿ ಮಿತ್ರನೇ ಪದ್ಮ ನಾಭನೇ॥11॥ ಶ್ಯಾಮಲಾಂಗನೆ ನಿನ್ನ ಮಹಿಮೆಯನಾರು ಬಲ್ಲನು ಶ್ರೀವರಾ। ಕಾಮಿತಾರ್ಥಗಳನ್ನು ಕರುಣಿಸಿ ತಾವುದೈ ದಾಮೋದರಾ॥12॥ ಭಾಸುರಾಂಗನೆ ನಿನ್ನ ನೆಲೆಯನು ಕಾಣಿಸ್ಯೆ ಜಗದೀಶನೇ। ಶ್ರೀಶನೇ ರಘುವಂಶನಾಯಕ ಪಾಹಿಮಾಂ ವಾಸುದೇವನೇ॥13॥ ಭಾಸುರಾಂಗನೆ ನಿನ್ನ ನೆಲೆಯನು ಕಾಣಿಸ್ಯೆ ಜಗದೀಶನೆ।

ಶ್ರೀಶನೇ ರಘುವಂಶ ನಾಯಕ ಪಾಹಿಮಾಂ ವಾಸುದೇವನೇ॥14॥ ಅಂದು ನೀ ಧೃವ ಅಜಾಮಿಳಾ ಪ್ರಹ್ಲಾದರನು ಕಾಯಲಿಲ್ಲವೇ। ಇಂದು ಬಾ ಮುಚ್ಚು ಕುಂದ ವರದನೆ ಬೇಗನೆ ಪ್ರದ್ಯುಮ್ನನೇ॥15॥ಅನಂತ ರೂಪಾನಂದ ಮೂರುತಿ ಸನ್ನುತಾಂಗ ಸುರೇಶನೇ॥ ಸುನಂದ ನಾದಿ ಸಮಸ್ತ ಸುರಮುನಿ ವಂದಿತನೆ ಅನಿರುದ್ಧನೆ॥16॥ ಪರಮ ಪಾವನಾ ನಿನ್ನ ನಾ ಮೊರೆಹೊಕ್ಕಿರುವೆ ಸರ್ವೋತ್ತಮ। ಪರಮ ಕರುಣಾಸಾಗರಾ ಶ್ರೀಹರಿ ಪ್ರಾರ್ಥಿಸುವೆನು ಪುರುಷೋತ್ತಮ॥17॥ ಈ ಪ್ರಪಂಚದ ಬಾಧೆಯಿಂದಲಿ ಬಳಲಿ ಬೆಂಡಾಗಿ ರುವೆನಾ। ಅಪ್ರಮೇಯನೆ ಅನಾಥರಕ್ಷಕ ಸಲಹು ಮುದದೊಳು ಅದೋಕ್ಷಜಾ॥18॥ ಪಕ್ಷಿಗಮ ನನೆ ನಿಷ್ಕಳಂಕನೆ ನಿರ್ವಿಕಾರನೆ ದೇವನೆ। ರಾಕ್ಷಸಾಂತಕ ಪಕ್ಷಿವಾಹನ ರಕ್ಷಿಸೈ ನಾರಸಿಂಹನೇ॥19॥ ಶ್ರೀನಿವಾಸ ಗಾನಲೋರ ಸುಜ್ಞಾನವನು ದಯಪಾಲಿಸೈ। ನಿನ್ನ ಮಾಯೆಗೆ ಸಿಲುಕಿರುವೆನೈ ಪಥವು ತೋರದು ಅಚ್ಯುತಾ॥20॥ ಮಂದಮತಿಯಾಗಿಹೆನು ಎನ್ನಯ ಮಂದ ಬುದ್ಧಿಯ ತೊಲಗಿಸೈ। ಮಂದರೋದ್ಧರ ನಿನ್ನ ಪೂಜೆಯ ನಾಚರಿಸುವೆನು ಜನಾರ್ಧನಾ॥21॥ ಪಾಪಿಯಾಗಿಹೆ ಪಾಪ ಕರ್ಮವನೆ ಸಾಗುತಿಹೆ ನಾನರಿಯದೆ। ಪಾಪಿಹರಣ ಗಳ ಪಾಪಿ ಜನ್ಮವ ಸಾಕುಮಾಡು ಉಪೇಂದ್ರನೇ॥22॥ ಮೋಹಜಾಲದಿ ಸಿಲುಕಿ ಆಶಾಪಾಶ ಬಂಧನವಾಗಿಹೇ। ಮಹಾನು ಭಾವನೆ ಎನ್ನ ಬಂಧನವನು ನೀಗಿಸು ಶ್ರೀಹತಿ॥23॥ ಗೋಪಿಬಾಲನೆ ಗೋಪಿಯರ ಪ್ರಿಯ ನಾಥನೆ ಸುಪ್ರೀತನೆ। ಶ್ರೀಪತಿಯೆ ನಾ ವಂದಿಸುವೆ ಗೋಪಾಲನೇ ಶ್ರೀಕೃಷ್ಣನೇ॥24॥ ರಾಮನೇ ಗುಣಧಾಮನೇ ಬನ್ನೇರುಘಟ್ಟ ನಿವಾಸನೆ। ನೇಮದಿಂದಲಿ ನಮಿಸುವೆನು ನಾ ದೇವ ಚಂಪಕಧಾಮನೆ ॥25॥

ಕಾಶಿಯ ದಾರಿಲಿ ಕೇಶವನಿದ್ದಾನೆ **ರಾಗ: ಆನಂದಭೈರವಿ**

ಕಾಶಿಯ ದಾರಿಲಿ ಕೇಶವನಿದ್ದಾನೆ ರಾಮ ರಾಮ। ಕೇಶವನ ದಯೆಯಿಂದ ಕಾಶಿಯಾತ್ರೆ ನಮಗಾಯ್ತು ರಾಮ ರಾಮ॥1॥ ಬದರಿಕಾಶ್ರಮದಲ್ಲಿ ನಾರಾಯಣನಿದ್ದಾನೆ ರಾಮ ರಾಮ। ನಾರಾಯಣನ ದಯೆಯಿಂದ ಬದರಿಕಾಶ್ರಮವ ಕಂಡೆ ರಾಮ ರಾಮ॥2॥ ನಾರಾಯಣ ॥ ಪ್ರಯಾಗದಲ್ಲಿ ಶ್ರೀ ಮಾಧವನಿದ್ದಾನೆ ರಾಮ ರಾಮ। ಶ್ರೀ ಮಾಧವನ ದಯೆಯಿಂದ ಪ್ರಯಾಗ ದರ್ಶನವಾಯ್ತು ರಾಮ ರಾಮ॥3॥ ಮಾಧವ ॥ ಗೋಕುಲದಲ್ಲಿ ಶ್ರೀ ಗೋವಿಂದನಿದ್ದಾನೆ ರಾಮ ರಾಮ। ಗೋವಿಂದನ ದಯೆಯಿಂದ ಗೋಕುಲವನು ಕಂಡೆ ರಾಮ ರಾಮ॥4॥ ಗೋವಿಂದ ॥ ವಿಷ್ಣು ತೀರ್ಥದಲ್ಲಿ ಶ್ರೀ ವಿಷ್ಣುವಿದ್ದಾನೆ ರಾಮ ರಾಮ। ವಿಷ್ಣುವಿನ ದಯೆಯಿಂದ ವಿಷ್ಣುತೀರ್ಥದಲ್ಲಿ ಮಿಂದೆ ರಾಮ ರಾಮ॥5॥ ವಿಷ್ಣು ॥ ಮತ್ಸ್ಯ ತೀರ್ಥದಲ್ಲಿ ಮಧುಸೂಧನನಿದ್ದಾನೆ ರಾಮ ರಾಮ। ಮಧುಸೂದನನ ದಯೆಯಿಂದ ಮತ್ಸ್ಯತೀರ್ಥದಲ್ಲಿ ಮಿಂದೆ ರಾಮ ರಾಮ॥6॥ ತ್ರಿವೇಣಿಯಲ್ಲಿ ತ್ರಿವಿಕ್ರಮನಿದ್ದಾನೆ ರಾಮ ರಾಮ। ತ್ರಿವಿಕ್ರಮನ ದಯೆಯಿಂದ ತ್ರಿವೇಣಿಯಲ್ಲಿ ಮಿಂದೆ ರಾಮ ರಾಮ॥7॥ ತ್ರಿವಿಕ್ರಮ ॥ ವಾಮನ ನಮ್ಮ ಒಲಿದು ರಕ್ಷಿಯನಂತೆ ರಾಮ ರಾಮ। ವಾಮನನ ದಯೆಯಿಂದ ವೈಕುಂಠವನು ಕಂಡೆ ರಾಮ ರಾಮ॥8॥ ವಾಮನ ॥ ಶ್ರೀ ಧರನ ನಮ್ಮ ಹೃದಯದಲ್ಲಿದ್ದಾನೆ ರಾಮ ರಾಮ। ಶ್ರೀ ಧರನ ಜಯೆಯಿಂದ ಹೃದಯವಾಸನ ಕಂಡೆ ರಾಮ ರಾಮ॥9॥ ಶ್ರೀ ಧರ ॥ ಋಷಿಗಳಾಶ್ರಮದಲ್ಲಿ ಹೃಷಿಕೇಶನಿದ್ದಾನೆ ರಾಮ ರಾಮ। ಹೃಷಿಕೇಶನ ದಯದಿಂದ ಋಷಿಗಳ ನಾ ಕಂಡೆ ರಾಮ ರಾಮ॥10॥ ಹೃಷಿಕೇಶ ॥ ಪದ್ಮನಾಭದಲ್ಲಿ ಪದ್ಮನಾಭನಿದ್ದಾನೆ ರಾಮ ರಾಮ। ಪದ್ಮನಾಭನ ದಯದಿಂದ ಪದ್ಮವ ನಾ ಕಂಡೆ ರಾಮ ರಾಮ॥11॥ ಪದ್ಮನಾಭ ॥ ಸಾಧು ವೃಂದದಲ್ಲಿ ದಾಮೋದರನಿದ್ದಾನೆ ರಾಮ ರಾಮ। ದಾಮೋದರನ ದಯದಿಂದ ಸಾಧುವೃಂದವ ಕಂಡೆ ರಾಮ ರಾಮ॥12॥ ದಾಮೋದರ ॥ ಸಕಲ ತೀರ್ಥದಲ್ಲಿ ಸಂಕರ್ಷಣನಿದ್ದಾನೆ ರಾಮ ರಾಮ। ಸಂಕರ್ಷಣನ ದಯದಿಂದ ಸಕಲ ತೀರ್ಥವ ಕಂಡೆ ರಾಮ ರಾಮ॥13॥ ಸಂಕರ್ಷಣ ॥ ವಸುಧೆಯ ಮೇಲೆಲ್ಲ ವಾಸುದೇವನಿದ್ದಾನೆ ರಾಮ ರಾಮ। ವಾಸುದೇವನ ದಯದಿಂದ ವಸುಧೆಯ ನಾ ಕಂಡೆ ರಾಮ ರಾಮ॥14॥ ವಾಸುದೇವ ॥ ವೃದ್ಧ ಗಂಗೆಯಲ್ಲಿ ಪ್ರದ್ಯುಮ್ನನದ್ದಾನೆ ರಾಮ ರಾಮ। ಪ್ರದ್ಯುಮ್ನನ ದಯದಿಂದ ವೃದ್ಧಗಂಗೆಯಲಿ ಮಿಂದೆ ರಾಮ ರಾಮ॥15॥ ಪ್ರದ್ಯುಮ್ನ ॥ ಅಲಕನಂದೆಯಲ್ಲಿ ಅನಿರುದ್ಧನಿದ್ದಾನೆ ರಾಮ ರಾಮ। ಅನಿರುದ್ಧನ ದಯದಿಂದ ಅಲಕನಂದೆಯಲ್ಲಿ ಮಿಂದೆ ರಾಮ ರಾಮ॥16॥ ಅನಿರುದ್ಧ ॥ ಪುಣ್ಯಕ್ಷೇತ್ರದಲ್ಲಿ ಪುರುಷೋತ್ತಮನಿದ್ದಾನೆ ರಾಮ ರಾಮ। ಪುರುಷೋತ್ತನಮನ ದಯದಿಂದ

ಪುಣ್ಯಕ್ಷೇತ್ರದಲ್ಲಿ ಮಿಂದೆ ರಾಮ ರಾಮ॥17॥ ಪುರುಷೋತ್ತಮ ॥ ವೈತರಣಿಯಲ್ಲಿ ಅಧೋಕ್ಷಜನಿದ್ದಾನೆ ರಾಮ ರಾಮ। ಅಧೋಕ್ಷಜನ ದಯದಿಂದ ಅಲಕಾನಂದೆಯಲ್ಲಿ ಮಿಂದೆ ರಾಮ ರಾಮ॥18॥ ಅಧೋಕ್ಷಜ ॥ ನಿರ್ಮಲ ಗಂಗೆಯಲ್ಲಿ ನರಸಿಂಹನಿದ್ದಾನೆರಾಮ ರಾಮ। ನರಸಿಂಹನ ದಯದಿಂದ ನಿರ್ಮಲ ಗಂಗೆಯಲ್ಲಿ ಮಿಂದೆ ರಾಮ ರಾಮ॥19॥ ನರಸಿಂಹ ॥ ವೈಕುಂಠದಲ್ಲಿ ಶ್ರೀ ಅಚ್ಯುತನಿದ್ದಾನೆ ರಾಮ ರಾಮ। ಅಚ್ಯುತನ ದಯದಿಂದ ವೈಕುಂಠವ ನಾ ಕಂಡೆ ರಾಮ ರಾಮ॥20॥ ಅಚ್ಯುತ ॥ ಜಾಹ್ನವಿಯಲ್ಲಿ ಜನಾರ್ಧನನಿದ್ದಾನೆ ರಾಮ ರಾಮ। ಜನಾರ್ಧನನ ದಯದಿಂದ ಜಾಹ್ನವಿಯಲಿ ಮಿಂದೆ ರಾಮ ರಾಮ॥21॥ ಜನಾರ್ಧನ ॥ ಉಡುಪಿ ಕ್ಷೇತ್ರದಲ್ಲಿ ಉಪೇಂದ್ರನಿದ್ದಾನೆ ರಾಮ ರಾಮ। ಉಪೇಂದ್ರನ ದಯದಿಂದ ಉಡುಪು ಕ್ಷೇತ್ರ ನಾ ಕಂಡೆ ರಾಮ ರಾಮ॥22॥ ಉಪೇಂದ್ರ ॥ ಶ್ರೀ ಹರಿ ನಿಮ್ಮ್ರಯ ಹೃದಯದಲ್ಲಿದ್ದಾನೆ ರಾಮ ರಾಮ। ಶ್ರೀ ಹರಿಯ ದಯದಿಂದ ಹೃದಯ ವಾಸವಾಯಿತು ರಾಮ ರಾಮ॥23॥ ಶ್ರೀ ಹರಿ ॥ ಕೃಷ್ಣಯಂದರೆ ಕಷ್ಟ ಪರಿಹಾರ ರಾಮ ರಾಮ। ಕೃಷ್ಣನ ದಯದಿಂದ ಕಷ್ಟವಾ ಕಳೆದೆನು ರಾಮ ರಾಮ॥24॥ ಶ್ರೀ ಕೃಷ್ಣ ॥ ಭಕ್ತಿಲಿ ಇಪ್ಪತ್ನಾಲ್ಕು ನಾಮವ ನೆನೆದರೆ ಭಕ್ತಿಮುಕ್ತಿಯ ನೀವ ವಿಜಯ ವಿಠ್ಠಲರಾಯ॥

ಕೇಶವಾಯ ನಮಃ ಕೇಶವಾಯ ನಮಃ

ಕೇಶವಾಯ ನಮಃ ಕೇಶವಾಯ ನಮಃ ಎಂದರೆ ಬ್ರಹ್ಮಾದಿ ದೇವತೆಗಳನ್ನು ಸಂರಕ್ಷಣೆ ಮಾಡಲಾಗಿ। ಕೇಶವಾ ಎನಿಸಿಕೊಂಡ ಅಂಥಾ ಸ್ವಾಮಿಗೆ ನಮಸ್ಕಾರ॥1॥ ಕೇಶವಾ ನಾರಾಯಣ ನಾರಾಯಣ ಎಂದರೆ ಸಪ್ತ ಸಮುದ್ರವು ಮಹಾಪ್ರಳಯದ ಜಲಧಿಯಲ್ಲಿ ಏಕಾಕಾರವಾಗಿ। ವಟ ಪತ್ರ ಶಾಯಿಯಾದ್ದರಿಂದ ನಾರಾಯಣ ಎನಿಸಿಕೊಂಡ ಅಂಥ ಸ್ವಾಮಿಗೆ ನಮಸ್ಕಾರ॥2॥ ನಾರಾಯಣ ಮಾಧವಾ ಮಾಧವಾ ಎಂದರೆ ಮಾಯಾದೇವಿ ಮಹಾಲಕ್ಷ್ಮೀ ದೇವಿಯರಿಗೆ ಅರಸನಾಗಿದ್ದುದರಿಂದ ಮಾಧವಾ ಎನಿಸಿಕೊಂಡ॥3॥ ಮಾಧವಾ ಗೋವಿಂದಾ ಗೋವಿಂದಾ ಎಂದರೆ। ಗೋವರ್ಧನ ಗಿರಿಯನು ಒಂದೇ ಬೆರಳಿನಿಂದ ಎತ್ತಿ ಗೋವ್ಗಳನ್ನು ಸಂರಕ್ಷಣೆ ಮಾಡಲಾಗಿ। ಗೋವಿಂದಾ ಎನಿಸಿಕೊಂಡ॥4॥ ಗೋವಿಂದಾ ವಿಷ್ಣು ವಿಷ್ಣು ಎಂದರೆ ವಿಶ್ವವ್ಯಾಪಕನಾದ್ದರಿಂದ ವಿಷ್ಣುವೆನಿಸಿಕೊಂಡ॥5॥ ವಿಷ್ಣು ಮಧುಸೂದನ ಮಧುಸೂದನ ಎಂದರೆ ಮಧುಕೈಟಭರನ್ನು ಸಂಹಾರ ಮಾಡಲಾಗಿ ಮಧುಸೂದನಾ ಎನಿಸಿಕೊಂಡ॥6॥ ಮಧುಸೂದನಾ ತ್ರಿವಿಕ್ರಮ ತ್ರಿವಿಕ್ರಮ ಎಂದರೆ ಸ್ವರ್ಗಮರ್ತ್ಯ ಪಾತಾಳವನ್ನು ಆಕ್ರಮಿಸಿಕೊಂಡದ್ದರಿಂದ। ತ್ರಿವಿಕ್ರಮನೆನಿಸಿಕೊಂಡ॥7॥ ತ್ರಿವಿಕ್ರಮ ವಾಮನ ವಾಮನ ಎಂದರೆ ಬಲಿಚಕ್ರವರ್ತಿಯ ಯಜ್ಞಶಾಲೆಗೆ ಹೋಗಿ ಮೂರು ಪಾದದ ಭೂಮಿಯನ್ನು ಬೇಡಲು ಹಾಗೇ ಆಗಲೆಂದು ಧಾರೆ ಎರೆದು ಕೊಡಲು ಒಂದು ಪಾದವು ಭೂಮಿ ಎಲ್ಲಾ ತುಂಬಿಹೋಯಿತು। ಎರಡನೇ ಪಾದವು ರಸಾತಳಕ್ಕೆ ಇಳಿದು ಹೋಯಿತು। ಮೂರನೇ ಪಾದಕ್ಕೆ ಸ್ಥಳವಿಲ್ಲದೆ ಆಕಾಶಕ್ಕೆ ಇಡಲು ಆಕಾಶದಲ್ಲಿ ನಾರಾಯಣನ ಪಾದಕ್ಕೆ ಸೋಕಿ ಮಹಿರಾವಣದಿಂದ ಬ್ರಹ್ಮಾಂಡ ಕವಲೊಡೆದು ದೇವಗಂಗೆಯು ಉದ್ಭವಿಸಲು। ದೇವಗಂಗೆಯನ್ನು ಪಡೆದದ್ದರಿಂದ ವಾಮನ ಎನಿಸಿಕೊಂಡ॥8॥ ವಾಮನ ಶ್ರೀಧರ ಶ್ರೀಧರ ಎಂದರೆ ಶ್ರೀಲಕ್ಷ್ಮೀದೇವಿಯನ್ನು ವಕ್ಷಸ್ಥಳದಲ್ಲಿ ಇಟ್ಟುಕೊಂಡದ್ದರಿಂದ ಶ್ರೀಧರ ಎನಿಸಿಕೊಂಡ॥9॥ ಶ್ರೀಧರಾ ಹೃಷಿಕೇಶಾ ಹೃಷಿಕೇಶಾ। ಎಂದರೆ ಸರ್ವ ಋಷಿಗಳಿಗೂ ಆಶ್ರಯ ನಾದ್ದರಿಂದ ಹೃಷಿಕೇಶ ಎನಿಸಿಕೊಂಡ॥10॥ ಹೃಷಿಕೇಶ ಪದ್ಮನಾಭ ಪದ್ಮನಾಭ ಎಂದರೆ ನಾಭಿ ಕಮಲದಲ್ಲಿ ಬ್ರಹ್ಮನನ್ನು ಪಡೆದದ್ದರಿಂದ ಪದ್ಮನಾಭ ಎನಿಸಿಕೊಂಡ॥ ಪದ್ಮನಾಭ ದಾಮೋದರ ದಾಮೋದರ ಎಂದರೆ ಯಶೋದೇ ದೇವಿ ಕೈಯಲ್ಲಿ ದಾಮ (ರ)ವನ್ನು ಕಟ್ಟಿಸಿ ಕೊಂಡಿದ್ದರಿಂದ ದಾಮೋದರಾ ಎನಿಸಿಕೊಂಡ॥11॥ ದಾಮೋದರ ಸಂಕರ್ಷಣ ಸಂಕರ್ಷಣ ಎಂದರೆ ಸಕಲ ಕ್ಷತ್ರಿಯರನ್ನು ಆಕರ್ಷಣೆ ಮಾಡಿದ್ದರಿಂದ ಸಂಕರ್ಷಣ ಎನಿಸಿಕೊಂಡ॥12॥ ಸಂಕರ್ಷಣ ವಾಸುದೇವ ವಾಸುದೇವ ಎಂದರೆ ವಸುದೇವನ ಉದರದಲ್ಲಿ ಜನಿಸಿದ್ದರಿಂದ ವಾಸುದೇವ ಎನಿಸಿಕೊಂಡ॥14॥ ವಾಸುದೇವ ಪ್ರದ್ಯುಮ್ನ ಪ್ರದ್ಯುಮ್ನ ಎಂದರೆ ಕುರುಪಾಂಡವರ ಯುದ್ದದಲ್ಲಿ ಪಾರ್ಥನಿಗೆ ಸಾರಥಿಯಾದ್ದರಿಂದ ಪ್ರದ್ಯುಮ್ನ ಎನಿಸಿಕೊಂಡ॥15॥ ಪ್ರದ್ಯುಮ್ನ ಅನಿರುದ್ಧ ಅನಿರುದ್ಧ ಎಂದರೆ ಅನುದಿನವೂ ಗೋಪಸ್ತ್ರೀಯರಲ್ಲಿ ಅಲುಗದೆ ಇರೋಣವಾದ್ದರಿಂದ ಅನಿರುದ್ಧ ಎನಿಸಿಕೊಂಡ॥16॥ ಅನಿರುದ್ಧ ಪುರುಷೋತ್ತಮ ಪುರುಷೋತ್ತಮ ಎಂದರೆ ಸಕಲ ಪುರುಷರಿಗೂ ಶ್ರೇಷ್ಠನಾದ್ದರಿಂದ ಪುರುಷೋತ್ತಮ

ಎನಿಸಿಕೊಂಡ॥17॥ ಪುರುಷೋತ್ತಮ ಅಧೋಕ್ಷಜ ಅಧೋಕ್ಷಜ ಎಂದರೆ ಸ್ಥೂಲ ಸೂಕ್ಷ್ಮಕ್ಕೂ ಕಾರಣನಾದರಿಂದ ಅಧೋಕ್ಷಜ ಎನಸಿಕೊಂಡ॥18॥ ಅಧೋಕ್ಷಜ ನಾರಸಿಂಹ ನಾರಸಿಂಹ ಎಂದರೆ ಹಿರಣ್ಯ ಕಶಿಪುವನ್ನು ಸಂಹಾರಮಾಡಿ ಪ್ರಹ್ಲಾದನಿಗೆ ಅಭಯವನಿತ್ತು ಕಾಪಾಡಿದ್ದರಿಂದ ನಾರಸಿಂಹ ಎನಿಸಿ ಕೊಂಡ॥19॥ ನಾರಸಿಂಹ ಅಚ್ಚುತ ಅಚ್ಚುತ ಎಂದರೆ ತನ್ನ ಭಕ್ತರಿಗೆ ಯಾವ ಚ್ಯುತಿಯೂ ಬಾರದಂತೆ ಕಾಪಾಡೋಣವಾದ್ದರಿಂದ ಅಚ್ಯುತಾ ಎನಿಸಿಕೊಂಡ॥20॥ ಅಚ್ಚುತ ಜನಾರ್ಧನ ಜನಾರ್ಧನಾ ಎಂದರೆ ಜಾಹ್ನವಿ ಜನಕನಾದ್ದರಿಂದ ಜನಾರ್ಧನಾ ಎನಿಸಿಕೊಂಡ ॥21॥ ಜನಾರ್ಧನಾ ಉಪೇಂದ್ರ ಉಪೇಂದ್ರ ಎಂದರೆ ಇಂದ್ರನಿಗೆ ಅನುಜ ನಾದ್ದರಿಂದ ಉಪೇಂದ್ರ ಎನಿಸಿಕೊಂಡ॥22॥ ಉಪೇಂದ್ರ ಶ್ರೀ ಹರಿ ಶ್ರೀಹರಿ ಎಂದರೆ ಕ್ಷೀರಸಾಗರದಲ್ಲಿ ಶ್ರೀಲಕ್ಷ್ಮೀ ಸಮೇತನಾಗಿ ವಾಸವಾಗಿರೋಣವಾದ್ದರಿಂದ ಶ್ರೀಹರಿ ಎನಿಸಿಕೊಂಡ॥23॥ ಶ್ರೀ ಹರಿ ಶ್ರೀ ಕೃಷ್ಣ ಶ್ರೀ ಕೃಷ್ಣ ಎಂದರೆ ಯಾದವ ಕುಲದಲ್ಲಿ ಹುಟ್ಟಿ ಕಪ್ಪು ಬಣ್ಣವುಳ್ಳವನಾದ್ದರಿಂದ ಶ್ರೀಕೃಷ್ಣ ಎನಿಸಿಕೊಂಡ॥24॥ ಈ ಕೇಶವನಾಮ ಪ್ರತಿನಿದಿನವೂ ಭಕ್ತಿಯಿಂದ ಯಾರು ಹೇಳುತ್ತಾರೋ ಮತ್ತು ಕೇಳುತ್ತಾರೋ। ಅಂಥಾವರ ಹೃದಯದಲ್ಲಿ ಶ್ರೀ ಲಕ್ಷ್ಮೀ ಸಮೇತನಾದ ನಾರಾಯಣ ವಾಸವಾಗಿದ್ದು ಚತುರ್ವಿಧ ಫಲ ಪುರುಷಾರ್ಥವನ್ನು ಕೊಡುತ್ತಾನೆಂದು ಸೂತಪುರಾಣಿಕರು ಶೌನಕಾದಿಗಳಿಗೆ ಹೇಳಿದರೆಂಬಲ್ಲಿಗೆ ಅಧ್ಯಾಯಾರ್ಥಃ ಶ್ರೀರಾಮಾರ್ಪಣಮಸ್ತು ಕೃಷ್ಣಾರ್ಪಣಮಸ್ತು ಗುರುವಾರ್ಪಣಮಸ್ತು ಮಂಗಳಂ॥

ಆರತಿಯನೆತ್ತಿರೆ ಕೇಶವ ನಾರಾಯಣಗೆ

ಆರತಿಯನೆತ್ತಿರೆ ಕೇಶವ ನಾರಾಯಣಗೆ॥ಪ॥ ಶಾಶ್ವತ ವೀವ ಮಾಧವ। ವಾಸವವಂದ್ಯ ಗೋವಿಂದ ಗಾರತಿಯನೆತ್ತಿದರೆ॥ಅ.ಪ॥ ದ್ವಾಪರ ರಹಿತ ಶ್ರೀವಿಷ್ಣುವಿಗೆ ಅಪಾರ ಮಧು ಸೂದನಗೆ। ಪಾಪರಹಿತ ತ್ರಿವಿಕ್ರಮಗಾರತಿಯನೆತ್ತಿದರೆ॥1॥ ಸಾಧುಸೇವಿತ ವಾಮನಗೆ ಶ್ರೀಧರ ಹೃಷಿಕೇಶನಿಗೆ। ಆದಿಮೂರುತಿ ಪದ್ಮನಾಭಗಾರತಿಯನೆತ್ತಿದರೆ॥2॥ ದಾಮೋದರ ದಾಳುಳ್ಳವಗೆ ಪ್ರೇಮದಿಸಂಕರ್ಷಣಗೆ। ಕಾಮಿತಾರ್ಥವನೀವೆ ವಾಸುದೇವ ಗಾರತಿಯನೆತ್ತಿರೆ॥3॥ ಘನಮಹಿಮ ಪ್ರದ್ಯುಮ್ನನಿಗೆ ಅನಿರುದ್ಧ ಪುರುಷೋತ್ತಮಗೆ। ವಿನಯದಿಂದಲಿ ಅದೋಕ್ಷಜಗಾರತಿಯನೆತ್ತಿರೆ॥4॥ ನರಸಿಂಹರೂಪನಾದವನಗೆ ವರದ ಮೂರುತಿ ಅಚ್ಯುತಗೆ ಅರಿಭಯಂಕರ ಜನಾರ್ಧನ ಗಾರತಿಯನೆತ್ತಿರೆ॥5॥ ಉಪೇಂದ್ರನೆಂದೆನಿಸಿ ಕೊಂಡವಗೆ। ಅಪಾರ ಮಹಿಮ ಶ್ರೀಹರಿಗೆ। ಗೋಪಾಲ ಮೂರುತಿ ಶ್ರೀಕೃಷ್ಣಗೆ। ಆರತಿಯೆತ್ತಿರೆ ನೀರೆಯರೇ॥6॥ ಚತುರವಿಂಶತಿ ಮೂರುತಿಗಳಾ ಅತಿಶಯ ಧವಳವಪಾಡೆ। ಸಕುಪುರುಷ ರಿಷ್ಟಾರ್ಥವೀವನು ಸಿರಿ ಹರಿಯವದನ॥7॥

ಹಿಡಿ ಕೇಶವ ಶ್ರೀ ನಾರಾಯಣನನ್ನು (ಲಾಲಿ) ರಾಗ: ನೀಲಾಂಬರಿ

ಹಿಡಿ ಕೇಶವ ಶ್ರೀ ನಾರಾಯಣನನ್ನು। ಕೊಡು ಮಾಧವ ಗೋವಿಂದ ವಿಷ್ಣುವನ್ನು॥ಪ॥ ಕಡಲ ಶಯನನ ಕೊಳ್ಳೆ ಮಧುಸೂದನನನ್ನು। ಕೊಡು ಬೇಗದಿಂದಲಿ ತ್ರಿವಿಕ್ರಮನನ್ನು। ಜೋ ಜೋ॥1॥ ವಾಮನ ಶ್ರೀಧರಾ ಹೃಶಿಕೇಶನನ್ನಾ। ಕಾಮಿನಿ ನೀ ಕೊಳ್ಳೆ ಪದ್ಮನಾಭನ್ನಾ। ದಾಮೋದರ ಸಿರಿ ಸಂಕರುಷಣನನ್ನಾ। ಕೋಮಲಾಂಗಿಯೆ ನೀಡೆ ವಾಸುದೇವನ್ನ ಜೋ ಜೋ॥2॥ ಪ್ರದ್ಯುಮ್ನ ಅನಿರುದ್ಧ। ಪುರುಷೋತ್ತಮನನ್ನಾ। ಮುದ್ದು ಅಧೋಕ್ಷಜ। ನರಸಿಂಹಾಚ್ಯುತನ್ನ। ಶುದ್ಧ ಜನಾರ್ಧನನನ್ನು ಕೊಳ್ಳೆ ಉಪೇಂದ್ರನ್ನಾ ಜೋಜೋ॥3॥ ಸುರರು ಬ್ರಹ್ಮಾದಿಗಳು ಪೂಜಿಸಿದವನನ್ನಾ। ಪರಮಮಂಗಳಕರನ ಸಿರಿವಲ್ಲಭನನ್ನಾ। ಹರುಷದಿಂದಲಿ ಕೊಳ್ಳೆ ಹರಿಸರ್ವೋತ್ತಮನನ್ನಾ। ಕರದೊಳು ಕರವಿಟ್ಟು ವರದ ವಿಠಲನ್ನ ಜೋ ಜೋ॥4॥

ಕೇಶವನ ತೊಟ್ಟಿಲಿಗೆ ಪಟ್ಟೇಯ ಹಾಸೂವೆ ರಾಗ: ನಿಲಾಂಬರಿ

ಕೇಶವನ ತೊಟ್ಟಿಲಿಗೆ ಪಟ್ಟೇಯ ಹಾಸೂವೆ। ನಾರಾಯಣನನ್ನ ಮಲಗೀಸಿ ಪಾಡುವೆ। ಮಾಧವ ಬಾರೆಂದು ನಿನ್ನ ಕರೆಯುವೆ। ಗೋವಿಂದ ಬಾರಯ್ಯ ನಿನ್ನನ್ನು ಕರೆದೇನು। ವಿಷ್ಣುಗೆ ಮುತ್ತು ಕೊಟ್ಟೇನು॥ಲಾಲಿ॥ ಮಧುಸೂಧನಗೆ

ಮೋಹನ ಮಾಲೆನ್ಹಾಕೂವೆ। ತಿರುವಿಕ್ರಮನಿಗೆ ತಿಲುಕಾವ ತಿದ್ದುವೆ। ವಾಮನನಿಗೆ ಹೂವ ಮುಡಿಸುವೇ। ಶ್ರೀಧರನಿಗೆ ಆಭರಣ ತಂದು ಕೊಡುವೆನು।।ಲಾಲಿ।। ಹೃಷಿಕೇಶವನಿಗೆ ನೊರೆಹಾಲು ಕುಡಿಸುವೇ। ಪದ್ಮನಾಭ ಬಾರೋ ಎನ್ನುವೇ, ದಾಮೋದರನಾ ನೋಡಿ ಮನದಲ್ಲಿ ನೆನೆದೇನು।।ಲಾಲಿ।। ಸಂಕರ್ಷಣ ಬಾರಯ್ಯ ಬಿಂಕದಲಿ ಕರೆವೇನಾ। ವಾಸುದೇವ ಓಡಿ ಬಾರಯ್ಯ। ಪ್ರದ್ಯುಮ್ನ ಕಜ್ಜಾಯ ತುಪ್ಪ ಮೆಲ್ಲಯ್ಯ। ನಾಕಂಡದಾ ನೀ ಕೇಳಿ ಅನಿರುದ್ಧನಕ್ಕಾನೂ। ಪುರುಷೋತ್ತಮ ಓಡಿ ಬಂದಾನು।।ಲಾಲಿ।। ಅಧೋಕ್ಷಜ ನಾರೀರ ಕರವ ಪಿಡಿದಾನು। ಜನಾರ್ದನ ಬಂದು ಬೃಂದಾವನದಲ್ಲಿ ನಿಂತಾನು। ಅಚ್ಯುತ ಕೊಳಲನೂದ್ಯಾನು। ಜನಾರ್ದನ ಬೇಗ ಗೋವ್ಗಾಳ ಕರೆದಾನು। ಉಪೇಂದ್ರತಾ ಬಂದು ಉಯ್ಯಾಲೆನಾಡೀದಾ। ಶ್ರೀಹರಿ ನಾಟ್ಯವಾಡೀದಾ।। ಶ್ರೀಕೃಷ್ಣ ಭಕ್ತಾದಿಗಭಯ ಕೊಡುತಿದ್ದ। ಕರುಣಪುರಿವಾಸ ನೀ ಎನ್ನ ಹೃದಯವಾಸ. ಶ್ರೀಲಕ್ಷ್ಮೀಯ ಪ್ರಾಣೇಶ ಬಾರೆಂದು ಭಾಮೆ ಗೋಪ್ಯಮ್ಮ ಕರೆದಾಳು।।ಲಾಲಿ।।

ಮಂಗಳ ಜಯಜಯ ಜಯಮಂಗಳ–ಮಂಗಳಮೂರ್ತಿಗೆ (ಮಂಗಳ)

ಮಂಗಳ ಜಯಜಯ ಜಯಮಂಗಳ।।ಪ।। ಮಂಗಳ ಮೂರ್ತಿಗೆ ಮಂಗಳ ಕೀರ್ತಿಗೆ। ಮಂಗಳ ದೇವಿಯರಸನಿಗೆ। ಮಂಗಳ ಮನುಮಥಪಿತನಿಗೆ ಮಂಗಳ। ಮಂಗಳ ಮಹಿಮಗೆ ಮಂಗಳ।।1।। ಅಚ್ಯುತಾನಂತ ಗೋವಿಂದಗೆ ಮಂಗಳ। ಸುಚರಿತ್ರನಿಗೆ ಸಕಲ ಮಂಗಳ। ಸಚ್ಚಿದಾನಂದ ಸ್ವರೂಪಗೆ ಮಂಗಳ। ಅಚ್ಚ ಹೃದಯನಿಗೆ ಅತಿ ಮಂಗಳ।।2।। ಕೇಶವನಾರಾಯಣನಿಗೆ ಮಂಗಳ। ಕೇಶಿಸೂದನನಿಗೆ ಅತಿ ಮಂಗಳ। ಶೇಷಶಯನ ಹೃಷಿಕೇಶಗೆ ಮಂಗಳ। ವಾಸುದೇವನಿಗೆ ಸಕಲ ಮಂಗಳ।।3।। ದಾನವವೈರಿಗೆ ದೆಸಿದೆಸೆಗಳಿಗೆ ಮಂಗಳ। ಹೀನಕಲದವಗೆ ಹೆಚ್ಚು ಮಂಗಳ। ಆನಂದತೀರ್ಥಮುನಿಯ ಮುದ್ದು ಕೃಷ್ಣಗೆ ಮಂಗಳ। ಶ್ರೀನಾರಿ ಯೆತ್ತುವ ಶುಭಮಂಗಳ।।4।। ನಿಗಮವ ತಂದ ಮತ್ಸ್ಯನಿಗೆ ನಿತ್ಯಮಂಗಳ। ನಗಧರ ಕೂರ್ಮಗೆ ಅತಿಮಂಗಳ। ಜಗತಿಯ ನೆತ್ತಿದ ವರಾಹಗೆ ಮಂಗಳ। ಮಗುವ ಕಾಯ್ದ ನರಸಿಂಹಗೆ ಮಂಗಳ।।5।। ದಾನವಬೇಡಿದ ಸ್ವಾಮಿಗೆ ಮಂಗಳ। ಕ್ಷೋಣಿಉಶಾಂತನಿಗೆ ಸಕಲಮಂಗಳ।। ಜಾನಕಿರಮಣ ರಾಮಗೆ ಮಂಗಳ। ಶ್ರೀನಂದಾಚ್ಯುತನಿಗೆ ಶುಭಮಂಗಳ।।6।। ಬುದ್ದಾವತಾರ ಶ್ರೀ ಬುದ್ಧಗೆ ಮಂಗಳ। ಸದ್ಧರ್ಮ ಮೂಲಸ್ವಾಮಿಗೆ ಮಂಗಳ। ಮಧ್ವವಲ್ಲಭ ಹಯವದನ ರಾಯನಿಗಿಂಥ। ಶುದ್ಧ ಸ್ವಭಾವಗೆ ಶುಭ ಮಂಗಳ।।7।।

ಮದನನಯ್ಯಗೆ ಮಾಯಾಸುದತಿ (ಮಂಗಳ)

ಮದನನಯ್ಯಗೆ ಮಾಯಾಸುದತಿ ವಲ್ಲಭಗೆ। ಅದ್ಭುತ ಲೀಲೆಯಿಂ ಮೆರೆವೊ ಚಿನ್ಮಯಗೆ। ಹದಿನಾಲ್ಕು ಲೋಕವ ತನ್ನ ಹೃದಯದೊಳೀಂಬಿಟ್ಟ। ಪದುಮನಾಭ ಶ್ರೀಮದನಂತ ಸ್ವಾಮಿಗೇ-ಜಯ।।ಮಂಗಳ।। ವಾರಿಜೋದ್ಭವನಿಗೆ ಚಾರುವಿಕ್ರಮಗೆ ವಾರಿಜೋದ್ಭವನ ಪಿತಾಮಹಗೆ। ವಾರಿಜಾನನೆ ಲಕ್ಷ್ಮೀದೇವಿಯ ರಮಣಗೆ। ವಾರಿಜೋದ್ಭವವಂದ್ಯ ನಾರಾಯಣನಿಗೇ-ಜಯ।।ಮಂಗಳ।। ಕೇಶವ ನಾರಾಯಣ ಶ್ರೀಶ ಮಾಧವಗೆ। ವಿಷ್ಣು ಗೋವಿಂದ ಮಧುಸೂದನಗೇ। ಈಶ ಶ್ರೀಧರ ಹೃಷಿಕೇಶ ಪದ್ಮನಾಭಗೇ। ತ್ರಿವಿಕ್ರಮ ವಾಮನ ಶ್ರೀನರಹರಿಗೇ-ಜಯ।।ಮಂಗಳ।। ದಾಮೋದರ ಸಂಕರ್ಷಣ ವಾಸುದೇವಗೆ। ಸ್ವಾಮಿ ಪ್ರದ್ಯುಮ್ನ ಅನಿರುದ್ಧ ಪುರುಷೋತ್ತಮಗೆ। ಆ ಮಹಾ ಅಧೋಕ್ಷಜ ನರಸಿಂಹ ಅಚ್ಚುತಗೇ। ನಿಸ್ಸೀಮ ಜನಾರ್ಧನ ಉಪೇಂದ್ರ ಹರಿಕೃಷ್ಣಗೇ-ಜಯ ।।ಮಂಗಳ।। ವರಮತ್ಸ್ಯಕೂರ್ಮಗೆ ವರಹ ನರಸಿಂಹಗೆ। ವಾಮನ ಭೃಗುರಾಮ ರಾಮಕೃಷ್ಣರಿಗೆ। ಆ ಮಹಾ ಬೌದ್ಧಗೆ ಹಯನೇರಿದ ಕಲ್ಕ್ಯಗೆ। ಭೂಮಿಯೋಳ್ ಪೆರಿಪುರ ರಾಮಕೇಸರಿಗೇ-ಜಯ ।।ಮಂಗಳ।।

ಶೇಷಶಯನ ಕೇಶವಗೆ ಜಯಮಂಗಳಾ — ರಾಗ: ಸುರುಟಿ

ಶೇಷಶಯನ ಕೇಶವಗೆ ಜಯಮಂಗಳಾ। ಸಾಸಿರಾನಾಮನಿಗೆ ಶುಭಮಂಗಳಾ।।ಪ।। ನವರತ್ನಮಯ ಕಿರೀಟಕ್ಕೆ ಮಂಗಳಾ। ಭ್ರಮರವನು ಪೋಲ್ವ ಕುಂತಳಕೆ ಮಂಗಳಾ। ನೊಸಲ ಕಸ್ತೂರಿತಿಲಕ ಭ್ರೂ ಲತೆಗೆ ಮಂಗಳಾ। ಮಣಿಮಯದ ಮಕರ ಕುಂಡಲಗಳಿಗೆ ಮಂಗಳಾ।।1।। ಕನ್ನೈದಿಲೆಯ ಪೊಲ್ವ ಕಂಗಳಿಗೆ ಮಂಗಳಾ। ಕನ್ನಡಿಯ ಪೊಲ್ವ

ಕದಪಿಗೆ ಮಂಗಳಾ। ಸಣ್ಣ ಸಂಪಿಗೆ ಪೋಲ್ವ ನಾಸಿಕಗೆ ಮಂಗಳಾ। ಬಂಣಬಿಂಬೋಧರನ ದಂತ ಪಂಕ್ತಿಗೆ ಮಂಗಳಾ॥2॥ ಕೊರಳ ಮೂರೇಖೆ ಕೌಸ್ತುಭಗಳಿಗೆ ಮಂಗಳಾ। ತೆರೆದ ಹೃದಯಕಮಲಕೆ ಮಂಗಳಾ।ಪೊಳೆವೊ ವೈಜಯಂತಿ ವನಮಾಲಿಕೆಗೆ ಮಂಗಳಾ। ವರಲಕ್ಷ್ಮೀ ನೆಲೆಸಿರುವ ವೃಕ್ಷಸ್ಥಳಕ್ಕೆ ಮಂಗಳಾ॥3॥ ನಳಿತೋಳು ಬಳೆತಾಯ್ತಿ ಮಣಿಗಳಿಗೆ ಮಂಗಳಾ। ಹೊಳೆವೊ ಭುಜಕೀರ್ತಿ ಕಂಕಣಕೆ ಮಂಗಳಾ। ಮುಂಗೈಯ್ಯ ಮುರಡಿ ಸರಪಣಿಗಳಿಗೆ ಮಂಗಳಾ। ಮುರಳಿಯ ನೀ ನುಡಿಸುವೊ ಬೆರಳ ಮುದ್ರಿಕೆಗೆ ಮಂಗಳಾ॥4॥ ಗೆಜ್ಜೆ ಕಾಲ್ಗಡಗ ಪಾದಂಗಳಿಗೆ ಮಂಗಳಾ। ಪ್ರಜ್ವಲಿಸುವ ವೀರ ಮುದ್ರಿಕೆಗೆ ಮಂಗಳಾ। ಅಂಕುಶ ಧ್ವಜರೇಖೆಗಳಿಗೆ ಮಂಗಳಾ। ಅರ್ಜುನ ಸಾರಥಿಯಾಗಿದ್ದ ಮುದ್ದು ಕೃಷ್ಣಗೆ ಮಂಗಳಾ॥5॥ ಕುಂಭಕರ್ಣ ರಾವಣರ ಕೊಂದವಗೆ ಮಂಗಳಾ। ಕುಂಭಿಣೀ ಸುತೆಯ ತಂದವಗೆ ಮಂಗಳಾ। ನಂಬಿದ ಪ್ರಹ್ಲಾದನಿಗೆ ಒಲಿದವಗೆ ಮಂಗಳಾ। ಜಂಬುಪುರದ ಕೇಶವಗೆ। ಸರ್ವಾಂಗಗಳಿಗೆ ಮಂಗಳಾ॥6॥ ಚತುರ್ದಶಾ ಭುವನವನು ಪೊರೆಯುವಗೆ ಮಂಗಳಾ। ಸುವರ್ಣವಾಹನನಾದ ಶ್ರೀಹರಿಗೆ ಮಂಗಳಾ। ರುಕ್ಮಿಣೀ ಅರಸ ದಯಾನಿಧಿಗೆ ಮಂಗಳಾ। ಸಕಲ ಜನರನು ಪೊರೆವೊ ಚೆನ್ನ ಕೇಶವಗೆ ಮಂಗಳಾ॥7॥

❖ ❖ ❖

69. ದಶಾವತಾರ ಸ್ಮರಣೆ

ಏಳಯ್ಯ ಬೆಳಗಾಯಿತು **ರಾಗ: ಭೂಪಾಳಿ-ಝಂಪೇತಾಳ**

ಏಳಯ್ಯ ಬೆಳಗಾಯಿತು॥ಪ॥ ಬೆಳಗಾಯಿತೇಳಯ್ಯ ಬಿಸಿಲು ಮೈದೋರುತಿದೆ। ಸುಳಿವುದೋರಯ್ಯ ನಿನ್ನ ಹಾರೈಸಿ ನಿಂದಿಹರು ತಡವ ಮಾಡದಿರಯ್ಯ ಸ್ವಾಮಿ ತಿರುಮಲೆರಾಯ। ಸೆಳೆಮಂಚದಿಂದಲೆ ಏಳು॥1॥ ವೇದವನು ತರಲೇಳು ಮಂದರವ ಪೊರಲೇಳು। ಭೇದಿಸುತ ಅಸುರರನು ಭೂಮಿಯ ತರಲೇಳು। ಕಾದಿ ಹಿರಣ್ಯನ ಕರುಳ ಕೊರಳೊಳಗೆ ಧರಿಸೇಳು। ಕಾದು ಬಲಿ ಬಾಗಿಲೊಳಗೇಳು॥2॥ ಭೇದದಲಿ ಭೂಮಿಯ ತ್ರಿಪಾದದಿಂದಳೆಯೇಳು। ಭೇದಿಸುತ ಕ್ಷತ್ರಿಯರ ಕೊಡಲಿಯಿಂ ಕಡಿಯೇಳು। ಸಾಧಿಸುತ ಶರಧಿಯಲಿ ಸೇತುವೆಯ ಕಟ್ಟೇಳು। ನಂದಗೋಪನ ಉದರದೊಳೇಳು॥3॥ ಪುರಮೂರ ಗೆಲಬೇಕು ಅರಿವೆಯನು ಕಳೆದೇಳು। ದುರುಳರನು ಕೊಲಬೇಕು ತುರಗ ವಾಹನನಾಗು। ಪರಿಪರಿಯ ಕೆಲಸಗಳ ಮಾಡಲುದ್ಯೋಗಿಸದೆ। ಮರೆದು ನಿದ್ರೆಯ ಗೆಯ್ವರೆ॥4॥ ಆಲದೆಲೆಯಿಂದೇಳು ಮಾಲಕುಮಿ ಬಂದಿಹಳು। ಹಾಲಗಡಲಿಂದೇಳು ಶ್ರೀದೇವಿ ನಿಂದಿಹಳು। ಕಾಲದೆಡೆಯಿಂದೇಳು ಭೂದೇವಿ ಬಂದಿಹಳು। ಸಾಲಮಂಚ ಗಳಿಂದಲಿ॥5॥ ನಾಭಿಕಮಲದಿ ಜನಿಸಿದ ಬ್ರಹ್ಮ ಬಂದಿಹನು ಗಂಭೀರ ಗಾಯನದ ನಾರದನು ನಿಂದಿಹನು। ರಂಭೆ ಮೇನಕೆ ಮೊದಲು ನರ್ತನಕೆ ಐದಿಹರು। ಶಂಬಾರಾರಿಪಿತನೆ ಏಳು॥6॥ ರಾಜಸೂಯವಕೊಳಲು ವಾಯುಸುತ ಬಂದಿಹನು ತೇಜಿಯಾಟಕೆ ಅರ್ಜುನನು ಕರೆಯ ಬಂದಿಹನು। ಸಾಜ ಧರ್ಮಜ ಅಗ್ರಪೂಜೆ ಮಾಡುವೆನೆಂದು ಹೂಜಿಯನೆ ಪಿಡಿದುಕೊಂಡು॥7॥ ಉರಿಗೈಯ ನಟ್ಟಿದರೆ ಹರನೋಡಿ ಬಂದಿಹನು। ಗಿರಿಜೆ ವರವನು ಬೇಡೆ ಬಂದು ನಿಂದಿಹಳು ಸುರಪಾರಿಜಾತವನು ಕೊಂಡು ಸುರರಾಜ ಬಂದಿರುವನೇಳಯ್ಯ ಹರಿಯೆ॥8॥ ಕ್ಷಿತಿನಾಥ ನೀನೇಳು ಸತ್ಯಭಾಮೆ ಬಂದಿಹಳು ಮತಿವಂತ ನೀನೇಳು ಜಾಂಬವತಿ ಬಂದಿಹಳು। ಗತಿವಂತ ನೀನೇಳು ಶ್ರೀತುಳಸಿ ಬಂದಿಹಳು। ಏಕಾಂತ ಸೇವೆಯ ಮಾಡಲು॥9॥ ದೇವ ನಿನ್ನಂಘ್ರಿಯ ಪೂಜೆ ಮಾಡುವೆವೆಂದು ಕಾವೇರಿ ಕೃಷ್ಣೆ ಗೌತಮಿ ಗಂಗೆ ಮಲಾಪಹಾರಿ। ಸಾವಧಾನದಿ ಯಮುನೆ ತುಂಗೆ ಸರಸ್ವತಿ। ಭೀಮರಥಿ ನೇತ್ರಾವತಿಯ॥10॥ ದುರಿತ ಬಂಧನವನ್ನು ಪರಿಹರಿಸಿದೆಯಾ ಸ್ವಾಮಿ। ದುರಿತಾರಿ ಮೇಲುಗಿರಿ ಶಿಖರದಲಿ ನಿಂತಿಹೆಯೊ। ದುರಿತತಾಪಕೆ ಚಂದ್ರ ನೀನೆಸಿಕೊಂಡೆಯೊ। ಶ್ರೀ ಪುರಂದರವಿಠಲನೆ॥11॥

ಶ್ರೀಯಃಪತೇ ಕುಸುಮಲೋಚನ (ಸುಪ್ರಭಾತಮ್)

ಶ್ರೀಯಃಪತೇ ಕುಸುಮಲೋಚನ ಶೋಭಿತಾಸ್ಯ ಮತ್ಸ್ಯಾವತಾರ ಜಲಮಾಶ್ರಿತ ರಾಕ್ಷಸಾರೇ। ಲೋಕತ್ರಯಾವೃತ ಮಹಾಭಯ ನಾಶ ಜಿಷ್ಣೋ ಮತ್ಸ್ಯಾವತಾರ ಪ್ರಭುವೇ ಕುರು ಸುಪ್ರಭಾತಮ್॥1॥ ಕೂರ್ಮಾವತಾರ ವರಚಕ್ರ ಗಧಾವಿಭೂಷ ದೇವಾಸುರೈಶ್ಚ ಸರಿದುನ್ಮಥನೇನ ಲಬ್ಧಾ। ಪೂತಾಮೃತಂ ಚ ವರದೇವ ಗಣೇಷುದತ್ತ ಕೂರ್ಮಾವತಾರ ಪ್ರಭುವೇ ಕುರು ಸುಪ್ರಭಾತಮ್॥2॥ ವಾರಾಹ ರೂಪ ದಿತಿಪುತ್ರ ಮದಾಪಹಾರಾ ಪೃಥ್ವೀಸಮುದ್ಧರಣ ಕಾರಣ ವಾಸುದೇವಾ ಬ್ರಹ್ಮಾದಿ ದೇವ ವರದೃಪ್ತ ಖಲಾಂತಕೇಶಾ ವಾರಾಹರೂಪ ಪ್ರಭುವೇ ಕುರು ಸುಪ್ರಭಾತಮ್॥3॥ ಶ್ರೀಮನ್ನೃಸಿಂಹ ಮೃಗರೂಪ ಭಯಂಕರಾಸ್ಯ ಪ್ರಹ್ಲಾದ ಪಾಲಕ ಹಿರಣ್ಯಕ ದೈತ್ಯನಾಶ। ದಂಷ್ಟ್ರಾಕರಾಳ ವದನೇನಚ ಭೀಮರೂಪ ನೃಸಿಂಹರೂಪ ಪ್ರಭುವೇ ಕುರು ಸುಪ್ರಭಾತಮ್॥4॥ ಕುಬ್ಜಾವತಾರಕ ಹಿರಣ್ಯಕ ನಾಶನಾರ್ಥಂ ದಾನಂ ಪದತ್ರಯಮಿತಿ ತವರಾಜ್ಯ ಭೂಮೌ। ದೇಹೀತಿ ಯಾಚಿತ ಮಹಾಪುರುಷಾಗ್ರಗಣ್ಯಂ ಕುಬ್ಜಾವತಾರ ಪ್ರಭುವೇ ಕುರು ಸುಪ್ರಭಾತಮ್॥5॥ ರಾಮಾವತಾರ ಪರಶುಂಧರ ವಿಷ್ಣುರೂಪ ಯಜ್ಞಿಯಧೇನು ಹೃತಮನ್ಯುವಶೇನ ದೇವಾ। ಸರ್ವಾಂಶು ಕ್ಷತ್ರಿಯ ಕುಲಾನ್ಸಹ ಮೂಲನಾಶ ಪರಶುರಾಮಾವತಾರ ಪ್ರಭುವೇ ಕುರು ಸುಪ್ರಭಾತಮ್॥6॥ ಪದ್ಮಾವತೀ ಹೃದಯ ವಲ್ಲಭ ಮತ್ಸ್ಯರೂಪ ರಾಮಾವತಾರ ಕಪಿಸೈನ್ಯ ವಿರಾಜಮಾನ। ಸೀತಾಪಹಾರಕ ಕುಭಿಷಕ ರಾವಣಾರೇ ರಾಮಾವತಾರ ಪ್ರಭುವೇ ಕುರು ಸುಪ್ರಭಾತಮ್॥7॥ ಶ್ರೀಕೃಷ್ಣಾವತಾರ ಧೃತರಾಷ್ಟ್ರ ಸುತಾಂತಕೇಶ ಕಂಸಾಂತಕಶ್ಚ ವರ ಪಾಂಡವ ರಾಜ್ಯದಾತಃ। ಗೋಪೀ ಸಹಸ್ರಜನ ಮೋಹಿತ ರುಕ್ಮಿಣೀಶ ಕೃಷ್ಣಾವತಾರ ಪ್ರಭುವೇ ಕುರು ಸುಪ್ರಭಾತಮ್॥8॥ ಬೌದ್ಧಾವತಾರ ಬುಧ ವಂದಿತ ಪಾದ ಪದ್ಮ ಧರ್ಮೈಕ ಏವ ಇತಿ ಘೋಷಿತ ಸಂಯಮೀಂದ್ರ ಸಚ್ಚಿತ್ಸ್ವರೂಪ ಅಣುರೇಣು।ತೃಣಃ ಪ್ರಪೂರ್ಣ ಬೌದ್ಧಾವತಾರ ಪ್ರಭುವೇ ಕುರು ಸುಪ್ರಭಾತಮ್॥9॥ ಕಲ್ಕ್ಯಾವತಾರ ಧರಶಿಷ್ಟ ಜನಾನುರಾಗ ವೇದಾಂತ ವೇದ್ಯ ಕಲಿ ಕಲ್ಮಶನಾಶ ಜಿಷ್ಣೋ ವೇದಾದಿ ಧರ್ಮ ಪರಿಪಾಲಕ ಸತ್ಸ್ವರೂಪಾ ಕಲ್ಕ್ಯಾವತಾರ ಪ್ರಭುವೇ ಕುರು ಸುಪ್ರಭಾತಮ್॥10॥

ಬೆಳಗು ಜಾವದಿ ಬಾರೋ ಹರಿಯೆ ರಾಗ: ಭೌಳಿ

ಬೆಳಗು ಜಾವದಿ ಬಾರೋ ಹರಿಯೆ। ನಿನ್ನಚರಣ ತೊಳೆದು ಜಲಪಾನ ಮಾಡುವೆನು॥ಪ॥ ನೀರ ಒಳಗೆ ನಿಂತುಕೊಂಬೆನ್ನ। ಭಾರಪೊತ್ತರೆ ನಗುವಳೋ ನಿನ್ನ ರಂಭೆ। ಮೋರೆ ತಗ್ಗಿಸಿದರೇನೆಂಬೆ ಜಗದಿ। ನಾರಸಿಂಹನಾಗಿ ಪೂಜೆಯ ಗೊಂಬೆ॥1॥ ಬಲಿಯ ದಾನವ ಬೇಡಿದ್ಯಲ್ಲೋ ಕ್ಷಾತ್ರ। ಕುಲವಸವರೆ ಕೊಡಲಿಯ ಪಿಡಿದ್ಯಲ್ಲೋ। ಬಲವಂತ ನಿನಗಿದಿರಿಲ್ಲೊ ನಿನ್ನ। ಲಲನೆಯ ತಂದು ರಾಜ್ಯವನಾಳಿದ್ಯಲ್ಲೋ॥2॥ ಗೋಕುಲದೊಳು ಇದ್ದೆಯಲ್ಲೋ। ಲೋಕಸಾಕು ಮಾಡಲು ಬುದ್ಧರೂಪನಾದ್ಯಲ್ಲೋ। ಏಕೆ ಹಯವನೇರಿದ್ಯಲ್ಲೋನಮ್ಮ।ಸಾಕುವ ಹಯವದನ ನೀನೇ ಬಲ್ಯಲ್ಲೋ ॥3॥

ವ್ಯಾಸೋಕ್ತಿಯನುಸರಿಸಿ ಹತ್ತು ಅವತಾರವನು (ದಶಾವತಾರಚರಿತ್ರೆ)

ವ್ಯಾಸೋಕ್ತಿಯನುಸರಿಸಿ ಹತ್ತು ಅವತಾರವನು ಶ್ರೀಶಮಾಡಿದ ಕ್ಲುಪ್ತಿ ದಿನದ ಕ್ಲುಪ್ತಿಯಂ ಬರೆವೆ ಸಂತೋಷದಿಂದ ಕೇಳ್ವುದೆಲ್ಲರ ಪೊರೆವ ಹರಿಯು ಅಭಿಲಾಷೆ ಪೂರೈಸಿ ಬಿಡದೇ॥ಪ॥ ಕೃತಯುಗ ಪ್ರಭವ ಮಧು ಶುದ್ಧ ಪ್ರತಿಪದ ಜಲಧಿ ಸುತವಾರ ರೇವತೀ ವಿಷ್ಕಂಭ ಹಗಲು ಸಂಯುತ ಹನ್ನೆರಡು ಘಳಿಗೆಗವತರಿಸಿ ಶ್ರೀಮತ್ಸ್ಯ ಹತಮಾಡಿ ತಮನೆಂಬಾ ಚತುರಾಸ್ಯ ವೈವಸ್ವತಗೊಲಿದು ಮೆರೆದೆನೀ ಕ್ಷಿತಿಯೊಳಗೆ ಮತ್ತಾ ಯುಗದಿ ಕೂರ್ಮ ರೂಪದಿಂ ಚ್ಯುತರಹಿತನವತಾರ ಮಾಡಿ ಮಾಡಿದ ಕಾರ್ಯ ಮತಿವಂತರಿಗೆ ಪೇಳೂವೇ॥1॥ ವಿಭವಾಬ್ದ ಜ್ಯೇಷ್ಠ ಶುಕ್ಲ ದ್ವಿತೀಯ ಬುಧವಾರ ಶುಭದ ರೋಹಿಣಿ ಧೃತಿಯೋಗ ದಿವದಲ್ಲಿ ತ್ರಿಭುವನೇಶ್ವರ ನಾಲ್ಕು ಘಳಿಗೆನುದಿಸಿ ಅಮೃತ ಕ್ರತು ಭೌಜರಿಗುಣಿಸಿ ಕರುಣದಿಂ ಅಭಯವಿತ್ತನ್ಯರನು ದಣಿಸಿ, ಧರಿಸಿದನು ಜಲಜಭವಾಂಡ ಮಂದರಾತ್ರಿಯ ಬೆನ್ನಮ್ಯಾಲಿಂಥ ಸುಭುಜಾಷ್ಟನ ಚರಿತೆ ಸ್ಮರಿಸಿ ಕ್ಲೇಶ ಹ ಮತ್ತೆ ನಭಗವಹನಾ ಯುಗದಲಿ॥2॥ ಶುಕ್ಲಸಂವತ್ಸರದ ಶುಭಮಾಘಮಾಸದಲಿ ಶುಕ್ಲ ಪಕ್ಷದ ಸಪ್ತಮಿ

ಭಾನುವಾರದಲಿ ಆಕ್ಲೇಶಪ್ರದ ಅಶ್ವಿನಿ ಸಾಧ್ಯಯೋಗದಲಿ ಶುಕ್ಲ ಶೋಣಿತ ವಿದೂರ ಶುಕ್ಲಾಂಬರ ಕಿಟರೂಪ ದಿಂದವತರಿಸಿ ಹಕ್ಲಾಸುರ ಹಿರಣ್ಯಕನ ತರಿದು ತ್ವರ ತನ್ನ ಒಕ್ಲಾದವರ ಪೊರೆದ ಹಗಲೆಂಟು ಘಳಿಗೆಯೊಳು ಶುಕ್ಲಾಂಗ ಆ ಯುಗದಲ್ಲಿ।।3।। ಅಂಗಿರಸವೆಂಬ ಸಂವತ್ಸರದ ವೈಶಾಖ ತಿಂಗಳದಿ ಸಿತಪಕ್ಷ ಚತುರ್ದಶೀ ಶನಿವಾರ ತುಂಗ ಸ್ವಾತಿ ಘರಿಷು ದಿವಾಷ್ಟವಿಂಶತಿ ಘಳಿಗೆ ಗಾಂಗೇಯ ಗರ್ಭನೊರವೂ।। ಸಂಘಟನವಾಗಲಾ ಸಮಯದೊಳು ಸ್ತಂಭದಿಂ ಸಂಗರಹಿತ ಹರಿ ಘಡಿಘಡಿಸುತಲಿ ಉದಿಸಿ ನರಸಿಂಗಾಹ್ವಯದಿ ಹೇಮಕಶ್ಯಪನ ತರಿದು ತರಳಂಗೆ ಸನ್ಮದವನಿತ್ತನೂ।।4।। ತ್ರೇತಾಯುಗದಲದಿತಿ ದೇವಿ ಭಕುತಿಗೆ ಮೆಚ್ಚಿ ಧಾತಾಬ್ಧ ಭಾದ್ರಪದ ಸಿತ ಪಕ್ಷ ದ್ವಾದಶೀ ಖ್ಯಾತಿ ವಿಷ್ಣುಭಶುಕ್ರಧೃತಿ ಹತ್ತೆೃದು ಘಳಿಗೆ ಪೋತಭಾವದಿ ದಿವದಲಿ ತಾಂ ತಾಳಿ ಅವತಾರವಂ ತ್ರಿವಿಕ್ರಮನಾಗಿ ಭೂತಲಾಗಸವಳೆದು ವೈಕೋಚನಿಯ ತುಳಿದು ಪ್ರೀತಿ ಪಡಿಸುತ ಶಕ್ರನಂ ಸ್ವರ್ನದಿಯ ಪಡೆದ ಈತಗೆಣೆಯಾರೊ ಜಗದಿ।।5।। ಅದೆಯುಗದಲಿ ಪ್ರಮಾಥಿ ಎಂಬ ಸಂವತ್ಸರದಲ್ಲಿ ವೈಶಾಖ ಶುದ್ಧ ತೃತೀಯ ಸುಕರ್ಮಯೋಗದಲಿ ರೋಹಿಣಿ ಮಂದ ಹನ್ನೊಂದು ಘಟ ರಾತ್ರಿಯಾದಗುತಿರೆ ಭೂಮಗಳಾ ವಧೆಗೆ ವಿಪ್ರರ ವೃಂದವನು ಪೋಷಣೆಯ ಮಾಡುವುದಕೆ ಜಮದಗ್ನಿಯಿಂದವತರಿಸಿ ರಾಮ ನಾಮದಲಿ ಪರಶುವಧರಿಸಿ ಈ ಧಾತ್ರಿಯೊಳು ಬಹು ಮೆರೆದ ಮತ್ತು ಆ ಯುಗದಲೀ।।6।। ತಾರಣೆಂಬಬ್ಧ ಮಧುಮಾಸ ಶುಕ್ಲ ನವಮಿಯ ಆರನೇ ತಾಸು ದಿನದಲಿ ಪುನರ್ವಸು ಚಂದ್ರ ವಾರ ಶೂಲ ಎಂಬ ಯೋಗದಲಿ ದಶರಥ ನೃಪತಿ ಹಾರೈಸುರದಕೆ ಒಲಿದೂ ಶ್ರೀರಾಮನಾಮದಿಂದವತರಿಸಿ ದೈತ್ಯ ಪರಿವಾರ ರಾವಣನ ಸಂಹರಿಸಿ ವಿಭೀಷಣ ಗೊಲಿದು ವಾರಿಜೋದ್ಭವ ಮುಖದಿಪೌಕನರಿಗಾನಂದ ತೋರಿಸಿದ ಸೀತಾಪತಿ।।7।। ಮೂರನೇ ಯುಗ ವಿರೋಧಿ ಶ್ರಾವಣವದಿ ಅರ್ಧ ರಾತ್ರಿಯೊಳಷ್ಟಮಿ ರೋಹಿಣೀ ವಜ್ರ ಬುಧ ವಾರದಲಿ ಅಜನ ಬಿನ್ನಹಕೊಪ್ಪಿ ಕೃಷ್ಣಾವತಾರವನು ತಾಳಿ ಧರೆಗೇ ಭಾರವಾಗಿದ್ದ ಕಂಸಾದಿ ಖಳವೃಂದ ಸಂಹಾರವಂ ಗೈದು ಪಾಂಡವರ ಪೋಷಿಸಿ ವಿಪ್ರ ಗೋರಕ್ಷಣೆಯ ಮಾಡಿ ಧರ್ಮವಂ ಸ್ಥಾಪಿಸಿದ ಶ್ರೀರಮಣ ಮದ್ವಸದನ।।8।। ಕಲಿಖರಾಬ್ಧಾಷಾಢ ದಶಮಿ ವಿಶಾಖ ನಳಿನಸಖವಾರ ಶುಕ್ಲಾಹಯೋಗ ದಿವಾಷ್ಟ ಘಳಿಗೆಯೊಳು ಜಿನನೆಂಬ ದೈತ್ಯವಲ್ಲವತರಿಸಿ ಬಲು ದುರ್ಮತಿಯ ಪ್ರೇರಿಸಿ ಕೆಳಗೆಡಿಸಿ ಬುದ್ಧವತಾರ ವೆಂದೆನಿಸಿ ಶಿವ ಗೊಲಿದು ತ್ರಿಪುರವ ಕೆಡಿಸಿ ಸಜ್ಜನರ ಸಂಶಯವ ಕಳೆದ ಕರುಣಾಂಬುಧಿಯ ಮಹಿಮೆಯಿಂ ತಿಳಿಯಸದಳ ಮಾ ವಿಧಿಗೆ ಎಂದಿಗೂ।।9।। ದನುಜವತಿ ಯುಗ ದುರ್ಮುಖ ಮಾರ್ಗಶಿರ ಶುದ್ಧ ಶನಿವಾರ ದ್ವಿತೀಯ ಪೂರ್ವಾಷಾಢ ವೃದ್ಧಿ ಮೂರನೇ ಘಳಿಗೆ ದಿವದಿ ಕಲ್ಕ್ಯಾವತಾರದಿಂ ಮ್ಲೇಛರನು ಸದೆದು ಭೂದಿವಿಜರ ಘನಮೋದ ಪಡಿಸಿ ವಾಜಿಯನೇರಿ ಮೆರೆದಾಡಿ ಅನಿಮಿಷರ ಕೈಯ್ಯ ಪೂ ಮಳೆಯಂಗರೆಸಿಕೊಂಡನಘ ಬಲ್ಲವರಿಗೆಲ್ಲೆಲ್ಲೆ ಇರುತಿಹನು ಪ್ರಣತಜನ ಕಾಮಧೇನೂ।।10।। ಈ ಪರಿಯಲಚ್ಯುತನ ಅವತಾರ ಚರಿತೆ ಸಂಕ್ಷೇಪದಿಂ ವಿರಚಿಸಿದೆ ಸದ್ಭಕ್ತಿಯಂದಿದನು ಪಾಪಿಗಳಿಗ್ಹೇಳಿದಲೆ ಕಾಲತ್ರಯದಿ ಪಠಿಸಿ ತಾಪತ್ರಯಗಳ ಕಳೆದು ಈ ಪೊಡವಿಯೊಳಗೆ ಬಹುಮಾನ ಮಾಡಿಸಿ ತಂದೆಯೋಪಾದಿ ಕ್ಷಣ ಬಿಡದೆ ಸಲಹಿ ಪ್ರಾಂತಕೆ ತನ್ನ ಆ ಪರಂಧಾಮ ವೈದಿಸುವನತಿಕರುಣಾಳು ಶ್ರೀಪ್ರಾಣೇಶ ವಿಠ್ಠಲಾ ।।11।।

ವೇದಾನುದ್ಧರತೇ

ವೇದಾನುದ್ಧರತೇ ಜಗನ್ನಿವಹತೇ ಭೂಗೋಲ ಮುದ್ಬಿಭ್ರತೇ। ದೈತ್ಯಂದಾರಯತೇ ಬಲಿಂ ಛಲಯತೇ। ಕ್ಷತ್ರಕ್ಷಯಂ ಕುರ್ವತೇ। ಪೌಲಸ್ತ್ಯಂಜಯತೇ ಹಲಂಕಲಯತೇ ಕಾರುಣ್ಯ ಮಾತನ್ವತೇ। ಮ್ಲೇಛ್ಛಾನ್ ಮೂರ್ಛಯತೇ ದಶಾಕೃತಿ ಕೃತೇ ಕೃಷ್ಣಾಯ ತಸ್ಮೈ ನಮಃ।।

ಮಚ್ಚನರಿಸಿ ವೇದವತಿಗೆ — ರಾಗ: ಶಂಕರಾಭರಣ-ಆದಿತಾಳ

ಮಚ್ಚನರಿಸಿ ವೇದವತಿಗೆ ಸ್ವಚ್ಛ ಮನದಲ್ಲೆರಗುವೆನು ಅಚ್ಯುತನ್ನ ಪಾದ ನಮಗೆ ನಿಶ್ಚಯದಿ ತೋರಿಸೆ।।ಪ।. ಕೂರ್ಮನರಸಿ ಕುಮುದವತಿಗೆ ಪ್ರೇಮದಿಂದ ಎರಗುವೆನು। ಕಾಮಿತಾರ್ಥ ಕರೆಯೆ ನಮಗೆ ಸೋಮ ಮುಖಿಯಳೆ।।1।। ಪೊಡವಿ ತಂದ ವರಹಮೂರ್ತಿ ತೊಡೆಯಲಿದ್ದ ನಿಮ್ಮ ಅಡಿಗಳಿಗೆ ನಮಿಪೆ ಮತಿಯ ಕೊಡಬೇಕನುತಲಿ।।2।। ನಾರಸಿಂಹನರಸಿ ನೀನು

ಸುಖವ ತೋರೆ ಮಹಾಲಕ್ಷ್ಮಿ ಘೋರ ದುರಿತ ದೂರಮಾಡೆ ಚಾರುವದನಳೆ॥3॥ ಸುಖಾಲಯಳೆ ವಾಮನಾಂಗಿ ಮುಖವ ನೋಡಿ ಮೋದ ಪಡುವೆ ಭಕ್ತಿ ಜ್ಞಾನ ಕೊಟ್ಟು ಸಕಲರ ರಕ್ಷಿಸೆ॥4॥ ಭಾರ್ಗವನರಸಿ ನಮ್ಮ ದೀರ್ಘವಾದ ಬಂಧನಗಳನು ಪ್ರೀತಿ ಇಂದ ಬಿಡಿಸೆ ನೀನು ಇಂದುಮುಖಿಯಳೆ॥5॥ ಖ್ಯಾತರಾಮನರಸಿ ಸೀತೆ ನಿಮಗೆ ಎರಗುವೆನು ಭೂತ ಬಂಧನವ ಬಿಡಿಸೆ ಪ್ರೀತಿಯಿಂದಲಿ॥6॥ ದೊರೆ ಕೃಪ ರಾಜನರಸಿ ಹಿರಿಯ ರುಕ್ಮಿಣಿಗೆರಗುವೆನು ಭವದ ಬಂಧನವ ಬಿಡಿಸೆ ಪ್ರೀತಿಯಿಂದಲಿ॥7॥ ಚೆಲುವ ರೇವತಿ ಬೌದ್ಧ ದೇವನ ಲಲನೆ ಚರಣಕ್ಕೆರಗುವೆನು ಮನದಮಲಿನ ತೊಳೆದು ಪೊರೆಯೆ ನಮ್ಮನು ಸುಲಭದಿಂದಲಿ॥8॥ ಕುದುರೆಯೇರಿ ಮೆರೆವ ಕಲ್ಕಿ ಲಲನೆ ಪ್ರಭಾದೇವಿ ನಮ್ಮನು ನಿರಿಯದಿಂದ ಕಡೆಗೆ ಎತ್ತೆ ಶಿರವ ಬಾಗುವೆ॥9॥ ನಾಗಶಯನನ ರಮಣಿ ರಮಾ ಭಾಗವತರ ಮ್ಯಾಳದಲ್ಲಿ ಹೋಗಿ ಸೇರುವಂತೆ ನಮ್ಮ ಭಾಗ್ಯ ರಕ್ಷಿಸೆ॥10॥ ಸತ್ಯ ಸಂಕಲ್ಪ ಹರಿಯ ಪತ್ನಿ ನಾಮಗಳನು ನೆನೆದವರ ಭಕ್ತಿ ಜ್ಞಾನ ಕೊಟ್ಟು ಪುರಂದರವಿಟ್ಠಲ ರಕ್ಷಿಸುವನು॥11॥

ಬಾರೊ ಬಾರೊ ಭಾಗ್ಯದ ಸಿರಿನಲ್ಲ

ಬಾರೊ ಬಾರೊ ಭಾಗ್ಯದ ಸಿರಿನಲ್ಲ ಕೇಳುತಲೆನ ಸೊಲ್ಲ। ಬಾರೊ ಬಾರೆನುತಲಿ ಭಕ್ತವತ್ಸಲನೆ ಬಾರಿ ಬಾರಿಗೆ ನಿನ್ನ ಬೇಡಿಕೊಂಡುವೆನು॥ಪ॥ ಕಡಲೊಳು ಮುಣಿಗಜಗ್ವೇದವ ತರು ವಕ್ಷೀರಾಂಬುಧಿ ಕಡೆವ ಕಡು ಕ್ರೋಡರೂಪದಿ ಬೇರನೆ ಕಡಿವ ಅಸುರನ ಒಡಲೊಡೆವ ಬಡವನಾಗ್ಯಜ್ಞ ಶಾಲೆಗೆ ನಡೆವ ಕೊಡಲಿಯನೆ ಪಿಡಿವ ಹೊಡೆದ್ದತ್ತು ಶಿರಕಾಳಿ ಮಡುವ್ವಾರಿ ತ್ರಿಪುರರ ಮಡದೇರನ್ವೊಲಿಸ್ವಾಜಿ ಹಿಡಿದೇರೋಡಿಸುವನೆ॥1॥ ಕಣ್ಣು ತೆರೆದೆವೆಯಿಗ್ಗದಲೆ ನೋಡಿ ಬೆನ್ನಲಿ ಗಿರಿ ಹೂಡಿ ಮಣ್ಣುಕೆದರುತಲವನ ದಾಡೆ ಕರುಳ್ಹಾರವ ಮಾಡಿ ಸಣ್ಣ ತ್ರಿಪಾದ ದಾನವ ಬೇಡಿ ಮನ್ನಿಸಿ ತಪ ಮಾಡಿ ಅರಣ್ಯ ಚರಿಸಿ ದಧಿ ಬೆಣ್ಣೆಗಳನು ಕದ್ದು ಹೆಣ್ಣುಗ್ಗಳನೆ ಕೆಡಿಸ್ಹಯವನ್ನೇರಿ ಮೆರೆವನೆ॥2॥ ನಾರುತ್ತ ಮೈಯ ನೀರೊಳಗಿರುವ ಮಂದಾರ ವನೋಹೊರುವ ಕ್ವಾರೆ (ಕೋರೆ?) ಕಂಬದಿ ಬರುವ ಘೋರ ತ್ರಿವಿಕ್ರಮನಾಗಿ ತೋರುವ ತಾಯಿಯ ಶಿರ ತರಿವ ನಾರ್ವಸ್ತ್ರಬಿಗಿದುಟ್ಟ ಭೀಮೇಶಕೃಷ್ಣನೆ ನಾರೇರ ವ್ರತ ಭಂಗ ಮಾಡಿ ತರುಗವೇರಿ॥3॥

ಕೃಷ್ಣ ಬೃಂದಾವನದೊಳು **ರಾಗ: ಮಿಶ್ರಪೀಲು**

ಕೃಷ್ಣ ಬೃಂದಾವನದೊಳು ಕೊಳಲೂದಲಿಲ್ಲವೇ। ನೀನಂದು ಗೋಪಿಯರನು ಕರೆಯಲಿಲ್ಲವೇ। ಇಂದೇಕೆ ಮರೆತೆಯೋ ಮಾಧವಾ ಬಂದು ನೀ ಕಾಯಬೇಕೋ ಮಾಧವಾ॥ಪ॥ ನೀರೊಳು ಆಟವ ಆಡಲಿಲ್ಲವೇ। ನೀ ಭಾರವ ಬೆನ್ನಲಿ ಎತ್ತಲಿಲ್ಲವೇ। ಕೋರೆಯ ಮಸೆಯುತ ತಿರುಗಲಿಲ್ಲವೇ। ನೀ ಪೋರನ ಮಾತಿಗೆ ಬರಲಿಲ್ಲವೇ॥1॥ ಪೊಡವೀಲಿ ದಾನವ ಬೇಡಲಿಲ್ಲವೇ। ನೀ ಒಡವ ಬ್ರಾಹ್ಮಣನಾಗಿ ತಿರುಗಲಿಲ್ಲವೇ। ಮಡದಿಯ ಕಟ್ಟಿಕೊಂಡು ಪೋಗಲಿಲ್ಲವೇ। ನೀ ಕಡಗೋಲ ಕೈಯಲ್ಲಿ ಹಿಡಿಯಲಿಲ್ಲವೇ॥2॥ ಬೆತ್ತಲೆ ಬುದ್ಧನಾಗಿ ಮೆರೆಯಲಿಲ್ಲವೇ। ನೀ ಉತ್ತಮ ತೇಜಿಯ ನೇರಲಿಲ್ಲವೇ। ಹತ್ತವತಾರವನೆತ್ತಲಿಲ್ಲವೇ। ನೀ ಮತ್ತೆ ಶ್ರೀಪುರಂದರ ವಿಠಲನಲ್ಲವೇ॥3॥

ಮುಂದೆ ಕರೆಯಿರಿ ಶ್ಯಾಮಲಾಂಗನ **ರಾಗ: ಮೋಹನ**

ಮುಂದೆ ಕರೆಯಿರಿ ಶ್ಯಾಮಲಾಂಗನ। ಸುಂದರೀಯರು ಬೇಗನೆ। ಚೆಂದದಿಂದಾ ನಿಂತರೂಪಿನ। ಪೊಂದಿದಾ ಗೋವಿಂದನಾ॥ಪ॥ ಮುನ್ನಧರಿಸಿದ ಮೀನರೂಪವನ್ನುಮೈನಿದ ಕೂರ್ಮವ। ಇನ್ನು ಪೊಂದಿದಕರಿಯಜಲ್ಮವ। ಸನ್ನುತಾಂಗನರಸಿಂಹನಾ॥1॥ ಎಂತುಪೇಳಲಿವಾಮನಾಂಗನ ಅಂತಪಿಡಿದನು ಪರುಶುವ। ಇಂತು ಸದ್ಗುರು ಪರಮತನುಗುಣ। ಪಂಥನಾದ ಶ್ರೀರಾಮನಾ॥2॥ ಇರದೆತಾಳಿದ ಕೃಷ್ಣರೂಪವ ಬರಿದೆಧರಿಸಿ ಬೌದ್ಧವಾ। ಹರಿಯುವರಿಸಿದ ಗುಣಗಳಾಂಬುಧೀ। ಪರಮಸಾಕ್ಷಾತ್। ಕಲ್ಕ್ಯಾನಾ॥3॥

ಯಾಕೆ ನೀನಿಲ್ಲಿ ಪವಡಿಸಿದೆಯೋ ರಾಗ: ಸಿಂಧುಭೈರವಿ

ಯಾಕೆ ನೀನಿಲ್ಲಿ ಪವಡಿಸಿದೆಯೋ ಹರಿಯೇ। ಜಗದೇಕವಿಖ್ಯಾತ ಶ್ರೀರಂಗನಾಥ॥ಪ॥ ತಮನೊಡನೆ ಹೋರಿಬೇಟ್ಟಿವನು ಬೆನ್ನಲ್ಲಿ ಪೊತ್ತು। ರಮಣಿ ಭೂಮಿಯನು ತಂದಾಲಸ್ಯವೋ। ಅಮರವೈರಿಯ ಕರುಳಕಿತ್ತ ಕಡುಧಾ ವತಿಯೋ। ಕ್ಷಮೆಯನಳೆದು ಈ ಪಾದ ಕಮಲ ನೊಂದವೊ॥1॥ ಪೊಡವಿಪಾಲಕರ ವಂಶವನು ಒಬ್ಬನೇ ಕಡಿದು। ಕೊಡಲಿಯನು ಬೀಸುವ ಮಲಗಿದ ಭಾವವೋ। ಮಡದಿಯನು ಕದ್ದೊಯ್ದವನ ಶಿರವನೆ ತರಿದು। ಒಡಲಿ ನಾಯಾಸದಲಿ ಪವಡಿಸಿದ ಪರಿಯೋ॥2॥ ವಾಲಿಮೊದಲಾದ ಹೆಸರಾಂತ ವೀರರಕೊಂದು। ಕಾಳಿಯ ಹೆಡೆತುಳಿದು ಮಯ್ಯಲಸಿತೋ॥ ಲೀಲೆಯಿಂದಲೇ ಬಂದು ನಿರ್ವಾಣದಲಿ ನಿಂದು। ಆ ಲಜ್ಜೆಗಾಗಿ ತಲೆಬಗ್ಗಿ ಮಲಗಿದ್ಯೋ ದೇವಾ ॥3॥ ನಾಲ್ಕು ಯುಗದಾಧಾರಿ ಕಡೆಗೆ ತುರುಗವನೇರಿ। ಸಾಕಾಗಿ ದಣಿದು ನೀನಿಲ್ಲಿ ಮಲಗಿದೆಯೋ। ಸಾಕಾರಿಯಾಗಿ ಗೌತುಮ ಮುನೀಶ್ವರಗೆ। ಬೇಕೆಂದು ನೀ ಕೊಟ್ಟ ವರಕೆ ನೀ ಮಲಗಿದೆಯೋ॥4॥ ಇನ್ನೆಷ್ಟು ಕಾಲನೀನಿಲ್ಲಿ ಮಲಗಿದ್ದರೂ ನಿನ್ನನ್ನೆಬ್ಬಿಸುವರೋಬ್ಬರನು ಕಾಣೆ॥ ಉನ್ನತ ಕಾಗಿ ನೆಲೆಯಾದಿ ಕೇಶವರಾಯ। ಚೆನ್ನ ಶ್ರೀರಂಗಪಟ್ಟಣದ ರಂಗರಾಯ ॥5॥

ಮಲಗಿ ಎದ್ದನು ಕಾಣೆ ರಾಗ: ಸೌರಾಷ್ಟ್ರ–ಅಟ್ಟತಾಳ

ಮಲಗಿ ಎದ್ದನು ಕಾಣೆ ಮಕ್ಕಳ ಮಾಣಿಕ ರಂಗ। ಎದ್ದ ಕಾಣೆ॥ಅಮ್ಮ॥ ಛಲ ಹೋರಿ ಅಳುತಾನೆ ಮೊಲೆಕೊಡೆ ರಂಗಗೆ। ಎದ್ದ ಕಾಣೆ॥ಪ॥ ಧರೆಯೊಳು ತಮವ ಮರ್ದಿಸಲೆಂದು ಮತ್ಸ್ಯನಾ। ಗೆದ್ದೆ ಕಾಣೆ। ಭರದಿ ಮಂದಿರ ಪೊತ್ತು ಇಳೆಯೊಳು ಕೂರ್ಮನಾ ಗೆದ್ದೆಕಾಣೆ। ಧರೆಯ ಕದ್ದಸುರನ್ನ ಕೊಲಲೆಂದು ವರಾಹನಾ। ಗೆದ್ದೆ ಕಾಣೆ॥ತರಳ ಕರೆಯೆ ಕಂಭದಿಂದ ನರಸಿಂಹನಾ। ಗೆದ್ದೆಕಾಣೆ॥1॥ ಚಿಕ್ಕವೇಷದಲಿ ದಾನವ ಬೇಡಿ ವಾಮನಾ। ಗೆದ್ದೆ ಕಾಣೆ। ಉಕ್ಕಿನ ಕೊಡಲಿಯ ಪಿಡಿದು ಪರಶುರಾಮ। ಎದ್ದ ಕಾಣೆ। ರಕ್ಕಸ ರಾವಣನ ಕೊಲಲೆಂದು ಶ್ರೀರಾಮ ಎದ್ದಕಾಣೆ। ಸೊಕ್ಕಿದ ಕಂಸನ್ನ ವಧೆಮಾಡೆ ಶ್ರೀಕೃಷ್ಣ। ಎದ್ದಕಾಣೆ॥2॥ ಪುರದ ಸತಿಯರ ವ್ರತವನಳಿದ ಬುದ್ಧನೆದ್ದ ಕಾಣೆ। ಹರುಷದಿ ತುರಗವನೇರಿದ। ಕಲ್ಕ್ಯತಾ। ನೆದ್ದ ಕಾಣೆ। ಶರಣಾಗತರನ್ನು ಪಾಲಿಪ ಶ್ರೀಹರಿ। ಯೆದ್ದ ಕಾಣೆ ನಮ್ಮ ವರದ ಪುರಂದರವಿಠಲ ಕೋಟಿ ಸೂರ್ಯನೆದ್ದಕಾಣೆ॥3॥

ಬಂದನಮ್ಮ ನಮ್ಮ ಕೃಷ್ಣ ರಾಗ: ಆರಭಿ

ಬಂದನಮ್ಮ ನಮ್ಮ ಕೃಷ್ಣ ಬಂದನಮ್ಮ॥ಪ॥ ಛಂದದಿಂದ ತನ್ನಯ ಮಡದಿಯ ಕೂಡುತ್ತ॥ಅ.ಪ॥ ಮೀನಿನ ರೂಪವನಾಂತು ವೇದವ ತಂದವ ಬೆನ್ನಲ್ಲಿ ಬೆಟ್ಟವ ಪೊತ್ತನಮ್ಮ। ಬೆನ್ನಲ್ಲಿ ಬೆಟ್ಟವನೆತವನೆತ್ತಿದ ಶ್ರೀಹರಿ ಚಿನ್ನದ ರಥದಲಿ॥1॥ ತನ್ನಯ ಮಡದಿಯ ನೆತ್ತಿದ ಶ್ರೀಹರಿ, ರನ್ನ ಕಶಿಪುವನು ಕೊಂದನಮ್ಮ। ರನ್ನ ಕಶಿಪುವನು ಕೊಂದಂಥ ನರಹರಿ ಚಿನ್ನದ ರಥದಲ್ಲಿ ಬಂದನಮ್ಮ॥2॥ ಪುಟ್ಟವನಾಗಿ ಬಂದು ದಿಟ್ಟನಾದ ನಮ್ಮ ದೇವ ದುಷ್ಟ ದುರುಳರನ್ನೆಲ್ಲ ಕೊಂದನಮ್ಮ। ದುಷ್ಟರ ಕೊಂದಂಥದುರಿತಾಪಹಾರಿಯು ಪಟ್ಟದರಸಿ ಕೂಡಿ ಬಂದನಮ್ಮ॥3॥ ವನಜಾಕ್ಷಿಯನು ಬಿಟ್ಟು ವನವನ ತಿರುಗುತ್ತ ದಾನವರನ್ನೆಲ್ಲ ಕೊಂದನಮ್ಮ। ದಾನವರನ್ನೆಲ್ಲ ಕೊಂದಂಥ ನಮ್ಮ ದೇವ ಚೆನ್ನ ಲಕುಮಿ ಕೂಡಿ ಬಂದನಮ್ಮ॥4॥ ಮಂಗಳಾಂಗನು ತಾನು ವೃಂದಾವನದಲ್ಲಿ ಅಂಗನೆಯರ ಕೂಡಿ ನಲಿದನಮ್ಮ। ಅಂಗನೆಯ ಕೂಡಿ ನಲಿದಂಥಾ ನಮ್ಮ ರಂಗ ಬಂಗಾರ ರಥದಲ್ಲಿ ಬಂದನಮ್ಮ॥5॥ ಸಿರಿಯರಸ ಧರಿಸಿದ ಮೋಹಕ ರೂಪವ ತುರಗವನೇರಿ ಮೆರೆದನಮ್ಮ। ತುರಗವನೇರುತ್ತ ಮೆರೆದಂಥ ಶ್ರೀಹರಿ ಹರುಷ ತೀರ್ಥರ ಕರೆಗೆ ಬಂದನಮ್ಮ॥6॥ ಮುದ್ದು ಕೃಷ್ಣನು ತಾನು ವಿದ್ಯಾಮಾನ್ಯರು ಕರೆಯೆ ಎದ್ದು ಬಂದಿಹ ನೋಡಿರಮ್ಮ। ಶುದ್ಧವಾಗಿ ಭಜಿಪರ ಉದ್ಧರಿಪೆನೆಂದು ಮುದ್ದು ವರಾಹ ಹರಿ ವಿಠಲ ನಿಂದನಮ್ಮ॥7॥

ದೇವ ಬಂದಾ ನಮ್ಮ ಸ್ವಾಮಿ ಬಂದನೋ ರಾಗ: ಕಲ್ಯಾಣಿ

ದೇವ ಬಂದಾ ನಮ್ಮ ಸ್ವಾಮಿ ಬಂದನೋ। ದೇವರ ದೇವ ಶಿಖಾಮಣಿ ಬಂದಾನೋ॥ಪ॥ ಮತ್ಸ್ಯಾವತಾರ ಬಂದ ಸ್ವಚ್ಛ ವೇದವ ತಂದ। ಅಚ್ಯುತಾನಂತ ಮಧುಸೂದನ ಬಂದನೋ॥1॥ ಮಂದರೋದ್ಧರ ಬಂದ ಮಾಮನೋಹರ

ಬಂದ। ವೃಂದಾವನ ಪತಿ ಗೋವಿಂದ ಬಂದಾನೋ ॥2॥ ಸೂಕರ ರೂಪ ಬಂದ ಸುರಮುನಿ ವಂದ್ಯ ಬಂದ। ನಾಕ ಜನರಿಗೊಲಿದು ವಸುಧೆಯ ತಂದನೋ॥3॥ ನರಹರಿ ರೂಪ ಬಂದ ನರನೋದ್ಧಾರ ಬಂದ। ತರಳನ ಕಾಯ್ದ ಹಿರಣ್ಯಕನ ಕೊಂದನೋ॥4॥ ವಾಮನನಾಗಿ ಬಂದ ಭೂಮಿ ಬೇಡುತ ನಿಂದ। ವ್ಯೋಮಕೆ ಬೆಳೆದ ತ್ರಿವಿಕ್ರಮ ಬಂದನೋ॥5॥ ಪರಶುರಾಮನುಬಂದ ತುರುಳಕ್ಷತ್ರಿಯ ಕೊಂದ। ಪರಮಪಾವನನಮ್ಮ ಪೊರೆವನು ಬಂದನೋ॥6॥ ದಶರಥ ಸುತ ಬಂದ ದಶಮುಖನರಿ ಬಂದ। ವಸುಧೆಸುತೆಯ ಪತಿ ಹಸನ್ಮುಖಿ ಬಂದನೋ॥7॥ ದೇವಕಿ ಸುತ ಬಂದ ಮಾವನ ಪೋಗಿ ಕೊಂದ। ಐವರಿಗೊಲಿದಂಥ ಶ್ರೀವರ ಬಂದನೋ॥8॥ ಬುದ್ಧ ರೂಪನು ಬಂದ ಭುಜಗಶಯನ ಬಂದ। ಮುದ್ದು ಮೋಹಿನಿಯರ ಮೋಹಕನಿಂದನೋ॥9॥ ಕಲ್ಕಿಕಲಿಯ ಕಾಣುತಕೊಂದ। ಸಿಲುಕುವೆ ಭಕುತರಿಗೆನ್ನುತ ನಿಂದನೋ॥10॥ ಶಂಖ ಚಕ್ರವಧರಿಸಿ ಕಂಕಣ ಕೈಯಲ್ಲಿರಿಸಿ। ಪಂಕಜನಾಭ ತಾ ಪಾಲಿಸಲು ಬಂದನೋ॥11॥ ಬೆಟ್ಟದ ಮೇಲಿದ್ದು ಭಕುತರ ಸಲಹುವ। ಸೃಷ್ಟಿಸ್ಥಿತಿಲಯ ಕರ್ತನು ಬಂದನೋ॥12॥ ಜಗವನುದ್ಧರಿಸುತ ಖಗವಾಹನ ಬಂದ। ತ್ರಿಜಗಕಧಿಕ ಶೇಷನಗದಲಿ ನಿಂದನೋ॥13॥ ಉರಗ ಶಯನ ಬಂದ ಗರುಡಗಮನ ಬಂದ॥ ನರಗೊಲಿದವ ಬಂದ ನಾರಾಯಣ ಬಂದನೋ॥14॥ ನಕ್ರಹರನು ಬಂದ ಚಕ್ರಧರನು ಬಂದ। ಅಕ್ರೂರಗೊಳಿದವ ತ್ರಿವಿಕ್ರಮ ಬಂದನೋ॥15॥ ಪಕ್ಷಿವಾಹನ ಬಂದ ಲಕ್ಷ್ಮಣಾಗ್ರಜ ಬಂದ। ಅಕ್ಷಯ ಫಲದಾ ಶ್ರೀ ಲಕ್ಷ್ಮೀರಮಣ ಬಂದಾ॥16॥ ನಿಗಮಗೋಚರ ಬಂದ ನಿತ್ಯತೃಪ್ತನು ಬಂದ। ನಗೆಮೊಗ ಪುರಂದರ ವಿಠಲ ಬಂದಾನೋ॥17॥

ಹಸೆಗೇಳೋ ಹರಿಗೋಪಾಲ — ರಾಗ: ಆನಂದಭೈರವಿ

ಹಸೆಗೇಳೋ ಹರಿಗೋಪಾಲ। ಬಿಸಜಾಕ್ಷ ಸಿರಿವರ ಲೋಲಾ॥ಪ॥ ಶರಧಿಯೊಳಿರುವಾ ಶೌರಿ। ಗಿರಿಯನ್ನೆ ಹೊರುವ ಮುರಾರಿ। ಬಿರುಸಾದ ದಾಡಿಯ ಕೋರಿ। ನರಸಿಂಹ ಸಾರಿ॥1॥ ಬಲಿದಾನ ಬೇಡಿದ ಧೀರ ಕಲಿಕ್ಷಾತ್ರ ಕುಲಕೆ ಕುಠಾರ। ಜಲಜಾಕ್ಷ ರಾಮ ಸುವೀರ। ಚೆಲುವ ಶ್ರೀರಂಗನಮಾರ॥2॥ ಬತ್ತಲೆ ತಿರುಗಿ ಮೀರಿ। ಉತ್ತಮ ಹಯವನ್ನೇರಿ। ಅರ್ಥಿಲಿ ಕರೆವರು ನಾರೀ। ಕರ್ತಾ ಶ್ರೀ ಹನುಮನಧೋರಿ॥3॥

ಹೇಮಮಾಣಿಕದ ಮಂಟಪದಂತರಾಳದಿ

ಹೇಮಮಾಣಿಕದ ಮಂಟಪದಂತರಾಳದಿ ಕಾಮಿನಿಜನರು ಕೂಡಿ ಲೌಕಿಕವಾದ ನೇಮವೆಲ್ಲವ ಮಾಡಿ ಸಂತೋಷದಿ ಶ್ರೀ ವ ುನೋಹರನ ನೋಡಿ ಸದ್ಗುಣವ ಪಾಡಿ ಕಾಮಜನಕ ಸುಧಾಮವರದ ಮಹಾಮಹಿಮ ಸುತ್ರಾಮನುತ ಗುಣಧಾಮ ಮಂಜುಳಗಾನ ಕಂಸವಿರಾಮ ಯದುಕುಲಸೋಮ ಬಾರೆಂದು ಭಾಮಿನಿಯರು ಹಸೆಗೆ ಕರೆವರು॥1॥ ಲೋಕಕಂಟಕನಾದ ತಮನೆಂಬೊ ಖಳನ ಮತ್ಸ್ಯಾವತಾರದಲಿ ಮರ್ದಿಸಿ ಪಿಯೂಷವ ನಾಕಪುರಕೆ ಸೇರಿಸಿ। ದಾನವನ ವಧಿಸಿ ಸೂಕರನ ರೂಪದಲಿ ಸುರಕುಲ ಭೀಕರನ ಕೊಂದ ಕೋಪದಲಿ ಕೊಂದ ದಯಾಕರನೆ ಕುಜನಾಂಧಕಾರ ವಿಭಾಕರನೆ ಬಾರೆಂದು ಹರಿಯನು ಕೋಕಿಲಗಾನೇಯರು ಕರೆವರು॥2॥ ದುಷ್ಟಹಿರಣ್ಯಕಶಿಪುವಿನ ಹತಿಯಿಂದ ಶಿಷ್ಟಬಾಲಕನು ನೊಂದು ಗೋವಿಂದನೆ ಕೆಟ್ಟೆನೆ ಕಾಯೋ ಎಂದು ಕೂಗಲು ಮನಗೊಟ್ಟು ಕಂಬದಲಿ ಬಂದು ದಾನವನ ಕೊಂದು ಪುಟ್ಟವಾಮನನಾಗಿ ಬಲಿಯನು ಮೆಟ್ಟಿ ಮಿಗೆ ಜಮದಗ್ನಿಮುನಿಯಲಿ ಪುಟ್ಟಿ ಬಳಿಕೀ ಸೃಷ್ಟಿಭಾರ ವಿಶಿಷ್ಟನೃಪರನು ಕುಟ್ಟಿ ವಧಿಸಿದ ದಿಟ್ಟನೆ ಬಾರೆಂದು ಕರೆವರು॥3॥ ಜನನಾಥ ದಶರಥ ತನುಜಾತನೆನಿಸುತ ಜನಕಜೆಯನು ವರಿಸಿ ಸಂತಸದಿಂದ ಜನಕನಾಜ್ಞೆಯನು ಧರಿಸೀ ಲಕ್ಷ್ಮಣ ಭೂಮಿತನುಜೆಯೀರ್ವರ ವೆರಸಿ ಇರೆವನದಿ ನೆಲಸಿ ದುರುಳ ರಾವಣನೊಯ್ಯೆ ಸೀತೆಯ। ವನಚರರ ಕೂಡ್ಯೆದಿ ಸೇತುವೆ ಜಲಧಿಗೆಸಗಿ ದಶಾಸಮುಖ್ಯರ ಹನನ ಗೈದನ ನಿಜೆಯನಾಳ್ದನ ವನಿತೆಯರು ಹಸೆಗೆ ಕರೆವರು॥4॥ ವಸುದೇವನುದರದಿ ಜನಿಸಿ ಉದ್ಧರಿಸಿ ಸಮಸ್ತ ರಕ್ಕಸರ ಕೊಂದವನೇ ಬಾರೋ। ಬತ್ತಲೆಯಿಂದಲೆಸದ ಮಹಾತ್ಮ ಬಾರೋ। ಕಲ್ಕಿಯೆನಿಪ ಪೆಸರಾಂತ ವೀರ ಬಾರೋ ವೈಕುಂಠ ಬಾರೋ ಬಿಸಜಸಖ ಶತಕಿರಣ ಬಾರೈ ಬಿಸಜ ಭವನುತ ಚರಣ ಬಾರೈ ಬಿಸಜ ನಿಲಯಾರಮಣ ಬಾರೈ ಬಿಸಜನಾಭನೆ ಹಸೆಗೆ ಬಾರೆಂದು ಬಿಸಜನೇತ್ರೆಯರು ಕರೆವರು॥5॥

ಯಾದವ ನಿನ್ನೆಲ್ಲ ವರ್ಮಕರ್ಮಂಗಳ

ಯಾದವ ನಿನ್ನೆಲ್ಲ ವರ್ಮಕರ್ಮಂಗಳ ಸಾಧಿಸಿ ಜನರ ಮುಂದ್ಹೇಳಲ್ಯಾ ರಂಗ ಸಾಧಿಸಿ ಜನರ ಮುಂದ್ಹೇಳಲ್ಯಾ ಭೇದವಿಲ್ಲದೆ ಕರುಣವನಿಟ್ಟು ಮರೆಯದೆ ನೀ ದಯ ಸುಮ್ಮನೆ ಮಾಡುವ್ಯಾ॥ಪ॥ ಮಡುವಿನೊಳಗೆ ಪೊಕ್ಕು ಬಿಡುತ ನೀ ಕಣ್ಣ ದುಡುಗು ಮಾಡಿದ್ದೆಲ್ಲ ಹೇಳಲ್ಯಾ ರಂಗ ದುಡುಕು ಮಾಡಿದ್ದೆಲ್ಲ ಹೇಳಲ್ಯಾ ಮಡುಹಿದ ಸೋಮಕಾಸುರನೆಂಬ ಸುದ್ದಿಯ ಬಿಡದೆ ಜನರ ಮುಂದ್ಹೇಳಲ್ಯಾ॥1॥ ಕಡಗೋಲನ್ಹೊತ್ತು ಮಂಡಿಯಂತೆ (?) ಕೈಕಾಲು ಮುದುಡಿಕೊಂಡಿದ್ದೆಲ್ಲ ಹೇಳಲ್ಯಾ ರಂಗ ಮುದುಡಿಕೊಂಡಿದ್ದೆಲ್ಲ ಹೇಳಲ್ಯಾ ಹಿಡಿದು ಸುಧೆಯ ವಂಚನಿಂದ ಸುರರಿಗೆ ನೀ ಬಡಿಸಿದ್ದು ಭಂಗ ನಾ ಹೇಳಲ್ಯಾ॥2॥ ಊರುಮನೆಗಳಿಲ್ಲ ನೀ ಗಿರಿಗಂಹ್ವರ ಸೇರಿಕೊಂಡದ್ದೆಲ್ಲ ಹೇಳಲ್ಯಾ ಕೋರೆ ಹಲ್ಲುಗಳಿಂದ ಬೇರನು ಸವಿದುಂಡು ದಾರಿದ್ರ್ಯವೆಲ್ಲ ನಾ ಹೇಳಲ್ಯಾ॥3॥ ಮುಖ ನೋಡಲು ಮೃಗದಂತೆ ಬಾಯ್‌ತೆರೆದ ನಿನ್ವಿಪರೀತ ಕೋಪಂಗಳ್ಹೇಳಲ್ಯಾ ರಂಗ ನಿನ್ವಿಪರೀತ ಕೋಪಂಗಳ್ಹೇಳಲ್ಯಾ ನಖದಿಂದ ಹಿರಣ್ಯಕನ ಕರುಳ ನೀ ಬಗೆದಂಥ ಸಕಲ ವ್ಯಾಪಾರ ನಾ ಹೇಳಲ್ಯಾ॥4॥ ಮೂರು ಪಾದ ಭೂಮಿ ಮುದ್ದು ರೂಪಗಳಿಂದ ಬೇಡಿಕೊಂಡಿದ್ದೆಲ್ಲ ಹಳಲ್ಯಾ ರಂಗ ಬೇಡಿಕೊಂಡಿದ್ದೆಲ್ಲ ಹೇಳಲ್ಯಾ ಮೂರು ಲೋಕವು ಸಾಲದಂತೆ ನೀ ಬೆಳೆದ ಅನ್ಯಾಯ ಮಾಯಾಗಳ ನಾ ಹೇಳಲ್ಯಾ॥5॥ ಜಮದಗ್ನಿಯಲ್ಹುಟ್ಟಿ ಜನಭಯಕಂಜದೆ ಜನನಿ ಹತವ ಮಾಡಿದ್ಹೇಳಲ್ಯಾ ರಂಗ ಜನನಿ ಹತವ ಮಾಡಿದ್ಹೇಳಲ್ಯಾಅನುಮಾನವಿಲ್ಲದೀತನು ನಿಮ್ಮ ಕುಲಕೆ ಛೇದಕನೆಂದು ಕ್ಷತ್ರೇರಿಗ್ಹೇಳಲ್ಯಾ॥6॥ ದೊರೆತನಾಳುವ ತಂದೆ ಪುರವಬಿಟ್ಹೋರಗ್ಹಾಕೆ ವನವನತಿರುಗಿದ್ದು ಹೇಳಲ್ಯಾ ರಂಗ ವನವನತಿರಿಗಿದ್ದು ಹೇಳಲ್ಯಾ ಸಿರಿಯನಗಲಿ ಹತ್ತು ಶಿರ(ನ)ನುಜೆಯ ಮೂಗು ಮುಂದಲೆ ಕೊಯ್ದ(ಯ್ದಿದ)ನೆಂದ್ಹೇಳಲ್ಯಾ॥7॥ ಎಳೆದು ಗೋಪ್ಯಮ್ಮ ನಿನ್ನ್ವರಳಿಗೆ ಕಟ್ಟಿದ್ದು ಕಳವು ಜನರ ಮುಂದ್ಹೇಳಲ್ಯಾ ರಂಗ ಕಳವು ಜನರ ಮುಂದ್ಹೇಳಲ್ಯಾ ಸೆಳೆದು ಗೋಪ್ಯೇರ ಸೀರೆಕಟ್ಟಿ (ಕಡಹಾ)ಲಕ್ಕೆ ಆ ಕಳಕಾಯ್ದನೆಂದು ನಾ ಹೇಳಲ್ಯಾ॥8॥ ಬಟ್ಟರಹಿತನಾಗಿ ಹೊಕ್ಕು ತ್ರಿಪುರದಲ್ಲಿ ಬತ್ತಲೆ ತಿರಿಗಿದ್ದು ಹೇಳಲ್ಯಾ ರಂಗ ಬತ್ತಲೆ ತಿರುಗಿದ್ದು ಹೇಳಲ್ಯಾ ದುಷ್ಟ ಕಲಿಯ ಶಿರಕಡಿದು ಹಾಕುವ ನೀ ದುಷ್ಟ ಗುಣಗಳ ನಾ ಹೇಳಲ್ಯಾ॥9॥ ಭಕ್ಷ ಜನರು ಕಂಡು ಕಟ್ಟಿ ಹಾಕುವರೆಂದು ದಿಷ್ಟು ಅಂಜಿಕೆ ನಿನ್ನದ್ಹೇಳಲ್ಯಾ ರಂಗ ಇಷ್ಟು ಅಂಜಿಕೆ ನಿನ್ನದ್ಹೇಳಲ್ಯಾ ನಿತ್ಯ ಈ ಹೃದಯಮಂದಿರದಲ್ಲಿ ಭೀಮೇಶಕೃಷ್ಣ ನೀನಡಗಿದ್ದು ಹೇಳಲ್ಯಾ॥10॥

ಇವನ ಹಿಡಿದುಕೊಂಡು ಹೋಗೆಲೋ

ಇವನ ಹಿಡಿದುಕೊಂಡು ಹೋಗೆಲೋ ಜೋಗಿ॥ಪ॥ ಇವ ನಮ್ಮ ಮಾತು ಕೇಳದೆ ಪುಂಡನಾದ॥ಅ.ಪ॥ ಆಡುತಾಡುತ ಹೋಗಿ ನೀರೊಳು ಮುಳುಗಿದ। ಬೇಡವೆಂದರೆ ಬೆಟ್ಟ ಬೆನ್ನಲಿ ಹೊತ್ತ ॥ ದಾಡೆಯ ಮೇಲೆ ತಾ ಧಾರಿಣಿ ನೆಗಹಿದ। ಹಿಡಿಯಹೋದರೆ ಬಾಯ್ ತೆರೆದು ಅಂಜಿಸಿದ॥1॥ ಹುಲ್ಲಲಿ ವಿಪ್ರನ ಕಣ್ಣು ತಿವಿದ। ಬುದ್ಧಿ ಇಲ್ಲೆಂದರೆ ಕೈಲಿಕೊಡಲಿಯ ಪಿಡಿದ॥ ಬಿಲ್ಲು ಹಿಡಿದು ರಾಕ್ಷಸರನು ಸವರಿದ। ಬಲಿದ ಮಾವನ ಶಿರವನು ತರಿದ॥2॥ ಬತ್ತಲೆ ಕುದುರೆಯ ಹತ್ತಬೇಡೆಂದರೆ। ಹತ್ತಿದನೋ ಇವ ಛಲದಿಂದ॥ ಭಕ್ತವತ್ಸಲ ಸಿರಿ ಪುರಂದರ ವಿಠಲನ ಎತ್ತಲಾದರು ಕೊಂಡು ಹೋಗೆಲೋ ಜೋಗಿ॥3॥

ಆಡಹೋಗಲು ಬೇಡವೋ

ರಾಗ: ಪಂತುವರಾಳಿ-ಆದಿತಾಳ

ಆಡಹೋಗಲು ಬೇಡವೋ ರಂಗಯ್ಯ ಬೇಡಿಕೊಂಬೆನೊ ನಿನ್ನ॥ಪ॥ ಗಾಡಿಗಾತಿಯರ ಕೊಂಡಾಡಿ ಕೆಡಲು ಬೇಡ ಕಾಡುವರೊ ನಿನ್ನನು ಮುಕುಂದ॥ಅ.ಪ.॥ ನೀರೊಳು ಮುಳುಗೆಂಬರೋ ಬೆನ್ನಿನ ಮೇಲೆ ಭಾರವ ಹೊರಿಸುವರೋ। ಕೋರೆದಾಡೆಯ ಮುದ್ದಾಡಿ ಸೋಲಿಸುವರೋ। ಕರುಳಹಾರ ಕೊರಳನೆಂಬರೋ॥1॥ ಪುಟ್ಟರೂಪನೆಂಬರೋ ಅಣ್ಣಯ್ಯ ಕೊಡಲಿ ಪಿಡಿದನೆಂಬರೋ। ಹಣೆಗಣ್ಣ ರುದ್ರನ ವರವುಳ್ಳ ದಶಕಂಠನ ಕೊಂದವನೆಂಬರೋ॥2॥ ಬೆಣ್ಣೆಕಳ್ಳನೆಂಬರೋ ಹೆಂಗಳನೆಲ್ಲ ಭಂಗ ಮಾಡಿದನೆಂಬರೋ। ಪುಟ್ಟ ಕುದುರೆಯನೇರಿ ಕಲ್ಕಿರೂಪನಾಗಿ ಪುರಂದರವಿಠಲ ಬಾ ಎಂಬರೋ॥3॥

ಎಂಥವನೆಂಥವನೆ ರಂಗಯ್ಯ **ರಾಗ: ಕಾಪಿ-ಆದಿತಾಳ**

ಎಂಥವನೆಂಥವನೆ ರಂಗಯ್ಯ। ಎಂಥವನೆಂಥವನೆ॥ಪ॥ ಆಗಮವನು ತಂದವನೆ, ರಂಗ। ಬೇಗದಿ ಗಿರಿಯ ಪೊತ್ತವನೆ। ಮೂಗಿಂದ ಭೂಮಿಯನೆತ್ತಿದನೆ, ಶಿಶು। ಕೂಗಲು ಕಂಭದಿಂದೊದಗಿದನೆ ಕೃಷ್ಣ॥1॥ ಧರಣಿಯ ಈರಡಿಮಾಡಿದನೆ। ಭೂಸುರನಾಗಿ ಪರಶುವ ಧರಿಸಿದನೆ। ಭರದಿ ಕೋಡಗಹಿಂಡು ಕೂಡಿದನೆ, ಫಣಿ। ಶಿರದಲ್ಲಿ ಕುಣಿದಾಡಿದನೆ ರಂಗ॥2॥ ಉಟ್ಟಿದ್ದ ಬಟ್ಟೆಯ ಬಿಸುಟಿಹನೆ ರಂಗ। ದಿಟ್ಟ ತೇಜಿಯನೇರಿ ಮೆರೆಯುವನೆ। ದುಷ್ಟರನೆಲ್ಲ ಸಂಹರಿಸಿದನೆ ನಮ್ಮ। ದಿಟ್ಟ ಪುರಂದರವಿಠಲನ ಕೃಷ್ಣ॥3॥

ನಿನ್ನ ನಾನೇನೆಂದೆನೋ **ರಾಗ: ಷಣ್ಮುಖಪ್ರಿಯ**

ನಿನ್ನ ನಾನೇನೆಂದೆನೋ ರಂಗಯ್ಯ ರಂಗ। ನಿನ್ನ ನಾನೇನೆಂದೆನೋ॥ಪ॥ ನಿನ್ನ ನಾನೇನೆಂದೆ ಚಿನ್ಮಯ ಮೂರುತಿ। ಪನ್ನಗಶಯನ ಪಾಲ್ಗಡಲೊಡೆಯನೆ ಕೃಷ್ಣ॥ಅ॥ ಧೀರ ಸೋಮನ ವೇದಚೋರನ ಮಡುಹಿದೆ। ವಾರಿಧಿಗಿಳಿದ ಪರ್ವತವ ಪೊತ್ತೆ। ಧಾರಿಣಿಯನು ತಂದು ದನುಜದಲ್ಲಣನಾದೆ। ನಾರಸಿಂಹ ನಿನಗೆ ನಮೋ ಎಂದೆನಲ್ಲದೆ॥1॥ ನೀರ ಪೊಕ್ಕವನೆಂದೆನೆ। ಬೆನ್ನಿನ ಮೇಲೆ ಭಾರ ತಾಳ್ದವನೆಂದೆನೆ। ಮಣ್ಣನಗಿದು ಬೇರ ಮೆದ್ದವನೆಂದೆನೆ। ರಕ್ಕಸರೊಳು ಹೋರಾಡಿದವನೆಂದು ಹೊಗಳಿದೆನಲ್ಲದೆ॥2॥ ಧರೆಯ ದಾನವ ಬೇಡಿ। ನೆಲವ ಮೂರಡಿ ಮಾಡಿ। ಪರಶುವಿಡಿದು ಕ್ಷತ್ರಿಯರ ಸವರಿ। ಚರಣದಿ ಪಾಷಾಣ ಹೆಣ್ಣು ಮಾಡಿದ। ಪುಣ್ಯ ಚರಿತ ಯಾದವಪತಿ ಶರಣೆಂದೆನಲ್ಲದೆ॥3॥ ತಿರುಕ ಹಾರುವನೆಂದೆನೆ। ಹೆತ್ತ ತಾಯ ಶಿರಕೆ ಮುನಿದವನೆಂದೆನೆ। ವನದೇಶದಿ ಧುರಕೆ ನಿಂದವನೆಂದೆನೆ। ಪೂತನಿಯ ಮೊಲೆಯ ಹರಿದು। ಕೊಂದವನೆಂದು ಸ್ತುತಿಸಿದೆನಲ್ಲದೆ॥4॥ ಚಿತ್ತಜಕೋಟಿ ಲಾವಣ್ಯಮುಪ್ಪುರದೊಳು। ಉತ್ತಮಸ್ತ್ರೀಯರ ವ್ರತವಳಿದೆ। ಮತ್ತೆ ಕಲ್ಕಿಯಾದೆ ಮಲೆತರ ಮಡುಹಿದೆ। ಉತ್ತಮ ಶ್ರೀರಾಮನೆಂದು ಸ್ತುತಿಸಿದೆನಲ್ಲದೆ॥5॥ ಬತ್ತಲೆನಿಂತವನೆಂದೆನೆ। ತೇಜಿಯನೇರಿ ಒತ್ತಿ ಬಾಹವನೆಂದೆನೆ। ಬಾರಿಬಾರಿಗೆ ಸತ್ತುಹುಟ್ಟುವನೆಂದೆನೆ। ಆದಿಕೇಶವ ಹತ್ತವತಾರದ ಹರಿಯೆಂದೆನಲ್ಲದೆ॥6॥

ನೋಡು ನೋಡು ಬಾಲಕೃಷ್ಣ **ರಾಗ: ಮಧ್ಯಮಾವತಿ**

ನೋಡು ನೋಡು ಬಾಲಕೃಷ್ಣ ಹೀಗೆ ಮಾಡುತ್ತಾನೆ। ಹೀಗೆ ಮಾಡುತ್ತಾನೆ ಹೀಗೆ ಮಾಡುತ್ತಾನೇ॥ಪ॥ ಪಿಳಿ ಪಿಳಿ ಕಣ್ಣು ಬಿಟ್ಟು ನಕ್ಕು ನಲಿಸುತ್ತಾನೆ। ಜುಳುಜುಳು ಜಲದೊಳಗೆ ಬಗ್ಗಿ ಮಲಗುತ್ತಾನೆ। ಜಲದೊಳಗೆ ಆಡುತಲಿ ಮಣ್ಣ ಕೆದರುತಾನೆ। ಹಲ್ಲು ಕಿರಿದು ಖುಲ್ಲರೆದೆಯ ಮೆಟ್ಟಿ ನಿಲ್ಲುತ್ತಾನೆ॥1॥ ಪುಟ್ಟ ರೂಪದಿಂದ ಬಂದು ಕ್ಷಮೆಯ ಕೇಳುತ್ತಾನೆ। ದಿಟ್ಟತನದಿ ಕೊಡಲಿಯಿಂದ ಎಲ್ಲರ್ಹೊಡೆಯುತಾನೆ। ಬೆಟ್ಟ ಗುಡ್ಡದಲ್ಲಿ ಪೋಗಿ ಕಪಿಯ ಕೂಡುತ್ತಾನೆ। ಗುಟ್ಟಿನಲ್ಲಿ ಹಾಲು ಕುಡಿದು ಗಡಿಗೆ ಒಡಿಯುತಾನೆ॥2॥ ಬೆತ್ತಲೆಯಾಗಿ ನಿಂತು ನೋಡಿರೆನ್ನುತಾನೆ। ಹತ್ತಿ ಹಯವ ಹಾರಿಸುತ್ತ ಸುತ್ತ ತಿರುಗುತ್ತಾನೆ। ಹುತ್ತದಲ್ಲಿ ನುಗ್ಗಿ ತಾನು ಅಲ್ಲಿ ಮಲಗುತ್ತಾನೆ। ಮತ್ತೆ ವರಾಹ ಹರಿ ವಿಠಲ ತಾನೆ ಎನ್ನುತ್ತಾನೆ॥3॥

ಶಿಕ್ಷಿಸಿ ತಮನ ಕೊಂದು ಭಕ್ತರನು **ರಾಗ: ಶಿವರಂಜನಿ-ಆದಿತಾಳ**

ಶಿಕ್ಷಿಸಿ ತಮನ ಕೊಂದು ಭಕ್ತರನು ಕಾಯ್ದುಬಂದ। ಮತ್ಸ್ಯಮೂರ್ತಿ ಕೃಷ್ಣಗೆ ನಮಸ್ಕಾರ ಮಾಡುವೆ॥1॥ ಮಂದರ ಗಿರಿಯನ್ನೆತ್ತಿ ಸಿಂಧುಮಥನವನ್ನು ಗೈದ। ಆನಂದ ಕೂರ್ಮ ಕೃಷ್ಣಗೆ ನಮಸ್ಕಾರ ಮಾಡುವೆ॥2॥ ಸುರಳಿಯ ಸುತ್ತಿ ಭೂಮಿ ಎರಡು ದಾಡೆಯಲ್ಲಿ। ಇಟ್ಟ ವರಾಹ ರೂಪಿ ಕೃಷ್ಣಗೆ ನಮಸ್ಕಾರ ಮಾಡುವೆ॥3॥ ಸೀಳಿ ಪಿತನ ಸುತನಿಗಾಗಿ ಬಾಲಕನ್ನ ಕಾಯ್ದು ಬಂದ ನಾರಸಿಂಹ ಕೃಷ್ಣಗೆ ನಮಸ್ಕಾರ ಮಾಡುವೆ॥4॥ ಅದಿತಿ ದೇವಿಯೊಳಗೆ ಪುಟ್ಟಿ ಬಲಿಯ ಬಾಗಿಲನ್ನು ಕಾಯ್ದ ವಟು ವಾಮನ ಕೃಷ್ಣಗೆ ನಮಸ್ಕಾರಮಾಡುವೆ॥5॥ ಕಾಮಧೇನುವಿಗಾಗಿ ಕಾರ್ತವೀರ್ಯನ ಕೊಂದ। ರಾಮ ಭಾರ್ಗವ ಕೃಷ್ಣಗೇ ನಮಸ್ಕಾರ ಮಾಡುವೆ॥6॥ ಜಾನಕಿ ದೇವಿಗಾಗಿ ದುಷ್ಟರಾವಣನ ಕೊಂದ। ಸೀತಾರಾಮ ಕೃಷ್ಣಗೆ

ನಮಸ್ಕಾರ ಮಾಡುವೆ॥7॥ ಬಿಲ್ಲು ಹಬ್ಬಕ್ಕೆ ಹೋಗಿ ಅಲ್ಲಿ ಮಾವಕಂಸನ ಕೊಂದ। ಮಲ್ಲ ಮರ್ದನ ಕೃಷ್ಣಗೆ ನಮಸ್ಕಾರ ಮಾಡುವೆ॥8॥ ಯಮುನೆಯ ತೀರದಲ್ಲಿ ಗೌರಿ ನೋಹಿ ಮಾಡುತಿರಲು ಸತಿಯರ ವ್ರತವ ನಳಿದ ಬೌದ್ಧರೂಪಿ ಕೃಷ್ಣಗೆ ನಮಸ್ಕಾರಮಾಡುವೆ॥9॥ ತೇಜಿಯ ನೇರಿಕೊಂಡು, ಮೂರ್ಜಗವ ಮೋಹಿಸುತ್ತ । ತೇಜಉಳ್ಳ ಕೃಷ್ಣಗೇ ನಮಸ್ಕಾರ ಮಾಡುವೆ॥10॥ (ದೇವರ ದೇವಗೆ ನಮಸ್ಕಾರ ಮಾಡುವೆ) ಹತ್ತವತಾರದಿಂದ ಭಕ್ತರನು ಸಲಹುವ ಹಯವದನ ಕೃಷ್ಣಗೆ ನಮಸ್ಕಾರ ಮಾಡುವೆ॥11॥

ಹೊನ್ನು ತಾ ಗುಬ್ಬಿ **ರಾಗ: ಮೋಹನ**

ಹೊನ್ನು ತಾ ಗುಬ್ಬಿ ಹೊನ್ನು ತಾ ಚೆನ್ನ ಗೋಪಾಲನ ಚೆಲುವ ಕೃಷ್ಣನ ಕೈಗೆ॥ಪ॥ ಆಗಮವನು ತಂದು ಅಜಗಿತ್ತ ಕೈಗೆ। ಸಾಗರವನೊತ್ತಿಕ್ಕಿ ಸುಧೆಯಿತ್ತ ಕೈಗೆ। ತೂಗಿ ನಡೆವ ಸ್ಥೂಲಕಾಯನ ಕೈಗೆ। ನಾಗಶಯನ ನರಸಿಂಹನ ಕೈಗೆ॥1॥ ಬಲಿಯ ದಾನವ ಬೇಡಿ ಬಂದಂಥ ಕೈಗೆ। ಛಲದಿಂದ ಕ್ಷತ್ರಿಯರ ಕೊಂದಂಥ ಕೈಗೆ। ಕಲಿ ವಿಭೀಷಣಗಭಯವಿತ್ತಂಥ ಕೈಗೆ। ಬಲುಗಿರಿಯ ಬೆರಳಲ್ಲಿ ಆತಂಥ ಕೈಗೆ॥2॥ ಪತಿವ್ರತೆಯರ ವ್ರತವಳಿದಂಥ ಕೈಗೆ। ಹಿತವಾಜಿಯನೇರಿ ದುರುಳಮರ್ದನ ಕೈಗೆ। ಸತಿ ಶಿರೋಮಣಿ ಲಕ್ಷ್ಮೀಕಾಂತನ ಕೈಗೆ। ಚತುರ ಹೆಳವನಕಟ್ಟೆರಂಗನ ಕೈಗೆ॥3॥

ಇವಗ್ಯಾಕೆ ಶೃಂಗಾರ **ರಾಗ: ಭೌಳಿ**

ಇವಗ್ಯಾಕೆ ಶೃಂಗಾರ। ಇವಗ್ಯಾಕೆ ಪರಿಮಳವು। ನವನೀತ ಚೋರಗೆ ನಾರುವ ಗೊಲ್ಲಗೆ। ಹೊಲಸು ಮಯ್ಯವಗ್ಯಾಕೆ ಹಲವು ರತ್ನದ ಹಾರ। ತಲೆದೋರದವಗ್ಯಾಕೆ ಮುಖದ ಪುಂಡೆಯ ಸಾದು॥1॥ ವಿಪರೀತನಿಗೆ ಯಾಕೆ ಇಂದು ಮುಖಿಯಾ। ತಿರುಕ ಹಾರುವಗ್ಯಾಕೆ ಮೆರೆವ ಪೀತಾಂಬರವು। ಕುಲಗೇಡುಕನಿಗ್ಯಾಕೆ ಕುಂಕುಮದ ರೇಖೆ। ಬಲುಸಾತ್ವಿಕನಿಗ್ಯಾಕೆ। ರಾಯರೊಳು ಶಣಕೆ॥2॥ ಚಾರಚೋರನಿಗ್ಯಾಕೆ ಯಜಮಾನಿಕೆ ವ್ರತಗೇಡಿ ಇವಗ್ಯಾಕೆ ಈ ಲೀಲೆಯೂ। ಹತ್ತು ರಾಹು ರಾಹುತನಿಗೇಕೆ ಬಹುಮಾತು। ಹತ್ತುರೂಪನಿಗ್ಯಾಕೆ ಹಲವಂಗ ದಾಟಗಳು। ಆದಿಕೇಶವನಿಗ್ಯಾಕೆ ಅಂತರಂಗ॥3॥ ನಿಲ್ಲಿ ಮಲಗಿದರೂ। ನಿನ್ನನ್ನೆಬ್ಬಿಸುವರೊಬ್ಬರನು ಕಾಣೇ। ಉನ್ನತಕಾಗಿನೆಲೆಯಾದಿ ಕೇಶವರಾಯ। ಚನ್ನ ಶ್ರೀರಂಗಪಟ್ಟಣದ ರಂಗರಾಯ॥4॥

ಯಾಕೆ ಕಿರಿಕಿರಿ ಮಾಡುತ್ತಿ **ರಾಗ: ಸಿಂಧೂಭೈರವಿ-ಆದಿತಾಳ**

ಯಾಕೆ ಕಿರಿಕಿರಿ ಮಾಡುತ್ತಿ। ನೀನ್ಯಾಕೆ ಕಿರಿಕಿರಿ ಮಾಡುವೆ॥ಪ॥ ಭಕ್ತವತ್ಸಲ ಭಯ ನಿವಾರಣ ಬಟ್ಟಲು ಬಾರಿಸಲೇನೋ॥ಅ.ಪ॥ ನೀರೊಳು ಮುಳುಗಿದೆಯೇನೋ। ನಿನಗೆ ನೆಗಡಿಯಾಯಿತೇನೋ। ಧಾರುಣಿ ಅಳೆದು ನಿನ್ನ ದಾಡಿ ನೊಂದವೇನೋ। ದುರುಳ ಹಿರಣ್ಯಕನ ಬಗೆದು ಬೆರಳು ನೊಂದವೇನೋ॥1॥ ಭಾರವ ಹೊತ್ತು ನಿನ್ನ ಬೆನ್ನು ನೊಂದಿತೇನೋ। ಧಾರುಣಿ ಅಳೆದು ನಿನ್ನ ಪಾದ ನೊಂದವೇನೋ।ರಾಯ ರಾಯರ ಗೆದ್ದು ಬಾಹು ನೊಂದವೇನೋ। ಸೇತುವೆ ಕಟ್ಟಿ ನಿನ್ನ ರಟ್ಟೆ ನೊಂದವೇನೋ। ಅಷ್ಟಮ ಸ್ತ್ರೀಯರನಾಳಿ ತೋಳು ನೊಂದವೇನೋ॥2॥ ಬೆತ್ತಲೆ ನಿಂತು ನಿನಗೆ ಚಳಿಯಾಯಿತೇನೋ। ಉತ್ತಮ ತೇಜಿಯನೇರಿ ಪಿತ್ತ ಹತ್ತಿತೇನೋ। ನಾರದ ಗುರುವಿಗೆ ನಾನು ಹೇಳಿ ಕಳುಹಿಸಲೇನೋ। ಮಾಯದ ಕಷ್ಟ ನಿನ್ನ ಮೋರೆಗೆ ಹಚ್ಚಿಸಲೇನು। ಬಾಲ ಲಕುಮಿಲೋಲ ಪ್ರಸನ್ನ ವೆಂಕಟಕೃಷ್ಣ ನಿನಗ್ಯಾಕೆ ಕಿರಿಕಿರಿ॥3॥

ನಾಮಸ್ಮರಣಾತ್ ಅನ್ಯೋಪಾಯಂ **ರಾಗ: ಮಧ್ಯಮಾವತಿ**

ನಾಮಸ್ಮರಣಾತ್ ಅನ್ಯೋಪಾಯಂ। ನಹಿ ಪಶ್ಯಾಮೋ ಭವತರಣೇ। ರಾಮಹರೇ ಕೃಷ್ಣಹರೇ ತವ ನಾಮ ವದಾಮಿ ಸದಾನೃಹರೇ॥ಪ॥ ವೇದೋದ್ಧಾರ ವಿಚಾರಮತೇ। ಸೋಮಕದಾನವ ಸಂಹರಣೇ। ಮೀನಾಕಾರ ಶರೀರ ನಮೋ। ಹರಿ ಭಕ್ತಂ ತೇ ಪರಿಪಾಲಯ ಮಾಂ॥1॥ ಮಂಥನಾಚಲ ಧಾರಣ ಹೇತೋ। ದೇವಾಸುರ ಪರಿಪಾಲನವಿಭೋ। ಕೂರ್ಮಾಕಾರ ಶರೀರ ನಮೋ। ಹರಿ ಭಕ್ತಂ ತೇ ಪರಿಪಾಲಯ ಮಾಂ॥2॥ ಭೂಚೋರಕಹರ ಪುಣ್ಯದಮೂರ್ತೇ।

ಕ್ರೋಢೋಧೃತ ಭೂತೇಶಹರೇ। ಕ್ರೋಢಾಕಾರ ಶರೀರ ನಮೋ। ಹರಿ ಭಕ್ತಂ ತೇ ಪರಿಪಾಲಯ ಮಾಂ॥3॥ ಹೇಮಕಶಿಪು ತನುಧಾರಣಹೇತೋ। ಪ್ರಹ್ಲಾದಾ ಸುರಪಾಲನ ಭೋ। ನರಸಿಂಹಾಚ್ಯುತರೂಪ ನಮೋ। ಹರಿ ಭಕ್ತಂ ತೇ ಪರಿಪಾಲಯ ಮಾಂ॥4॥ ಬಲಿಮುಖ ಬಂಧನ ವಿತತಮತೇ। ಪಾದಾದ್ವಯ ಕೃತ ಲೋಕಕೃತೇ। ವಟುಬಟುವೇಷ ಮನೋಜ್ಞನಮೋ। ಹರಿ ಭಕ್ತಂ ತೇ ಪರಿಪಾಲಯ ಮಾಂ॥5॥ ಕ್ಷಿತಿಪತಿವಂಶ ಸಂಭವ ಮೂರ್ತೇ। ಕ್ಷಿತಿಪತಿರಕ್ಷಾಕ್ಷತ ಮೂರ್ತೇ। ಭೃಗುಪತಿ ರಾಮ ವರೇಣ್ಯ ನಮೋ। ಹರಿ ಭಕ್ತಂ ತೇ ಪರಿಪಾಲಯ ಮಾಂ॥6॥ ಸೀತಾವಲ್ಲಭ ದಾಶರಥೇ। ದಶರಥನಂದನ ಲೋಕಗುರೋ। ರಾವಣಮರ್ದನ ರಾಮ ನಮೋ। ಹರಿ ಭಕ್ತಂ ತೇ ಪರಿಪಾಲಯಮಾಂ॥7॥ ಕೃಷ್ಣಾನಂದ ಕೃಪಾಜಲಧೇ। ಕಂಸಾರೇ ಕಮಲೇಶ ಹರೇ। ಕಾಲಿಯ ಮರ್ದನ ಕೃಷ್ಣನಮೋ। ಹರಿ ಭಕ್ತಂ ತೇ ಪರಿಪಾಲಯ ಮಾಂ॥8॥ ತ್ರಿಪುರ ಸತೀಮಾನಾಪಹರ। ತ್ರಿಪುರವಿಜಯ ಮಾರ್ಗಣರೂಪಾ ಶುದ್ಧ ಜ್ಞಾನವಿಬುದ್ಧ ನಮೋ। ಹರಿ ಭಕ್ತಂ ತೇ ಪರಿ ಪಾಲಯ ಮಾಂ॥9॥ ದುಷ್ಟವಿಮರ್ದನ ಶಿಷ್ಟಹರೇ। ಕಲಿತುರಗೋತ್ತಮ ವಾಹನರೇ ಕಲ್ಕಿನ್ ಕರ ಕರವಾಲ ನಮೋ। ಹರಿ ಭಕ್ತಂ ತೇ ಪರಿಪಾಲಯ ಮಾಂ॥10॥

ಕೋದಂಡರಾಮ್ ಕೋದಂಡರಾಮ್ (ಕನ್ನಡ) **ರಾಗ: ಯಮನ್‌ಕಲ್ಯಾಣಿ**

ಕೋದಂಡರಾಮ್ ಕೋದಂಡರಾಮ್। ಕೋದಂಡರಾಮಪಾಹಿ ಕೋದಂಡರಾಮ್। ಶ್ರೀಕರಪಾಹಿ ಭಾಸ್ಕರದೇಹಿ। ಲೋಕೇಶ ತ್ರಾಹಿ ಸದ್ಗುಣ ಪಾಹಿ॥ಪ॥ ನೀರೊಳು ದೂರಿ ಪಾತಾಳ ಸೇರಿ। ತಮನೊಳು ಹೋರಿದ ಮತ್ಸ್ಯಾವತಾರಿ॥1॥ ನಾಕೇಶ ಬ್ರಹ್ಮ ಪ್ರಾರ್ಥಿಪೆ ನಿಮ್ಮ। ಆದಿಲಿ ಕೂರ್ಮ ಪಾಲಿಸು ನಮ್ಮ॥2॥ ಕಟಿರೂಪತಾಳಿ ದನುಜರ ಸೀಳಿ। ಧರೆಯನು ಆಳಿದ ಪರಮ ಕೃಪಾಳಿ॥3॥ ನರಹರಿರೂಪ ತಾಳಿ ಪ್ರತಾಪ। ತೋರಿದ ಭೂಪ ಪ್ರೌಢಕಲಾಪ॥4॥ ಬಲಿಯನು ಮೆಟ್ಟಿ ಹೃದಯವ ಕುಟ್ಟಿ। ಪಾತಾಳಕಟ್ಟಿದ ವಾಮನಜಟ್ಟಿ॥5॥ ಧಾತ್ರೀಶವಂಶ ಮಾಡಿದ ಧ್ವಂಸ। ಮುನಿಕುಲಹಂಸ ಸತ್ಯಪ್ರಶಂಸ॥6॥ ದಶರಥಬಾಲ ದಶಶಿರಕಾಲ। ದಶದಿಶಪಾಲ ದಶಾನುಕೂಲ॥7॥ ಗೋಕುಲರಕ್ಷಾ ಸುಜನಸಂರಕ್ಷ। ಮಾತುಳಶಿಕ್ಷಾ ಕಂಜದಳಾಕ್ಷ॥8॥ ಬೆತ್ತಲೆ ನಿಂದು ಬೌದ್ಧನೀಬಂದು। ಅರ್ಚಿಪೆ ಎಂದು ಪ್ರಾರ್ಥಿಪೆಎಂದು॥9॥ ಕಲ್ಕ್ಯಾವತಾರ ಕಲಿಮನದೂರ। ಸುಜನೋದ್ಧಾರ ಪಾಪವಿದೂರ॥10॥ ಸಾಗರವಾಸ ಮಂದವಿಹಾಸ। ನುಡಿಸಿದ ಭಾಷಾ ಭಜನ ವಿಶೇಷ॥11॥ ಸುಜನರು ಕೂಡಿ ಭಜನೆಯ ಮಾಡಿ। ಭಜಿಸುತಲಾಡಿ ಜಗವ ಕೊಂಡಾಡಿ॥12॥

ರಾಮನಾಮ ರತ್ನಹಾರ ದೊರಕಿತೆನಗೇ **ರಾಗ: ಕಾಂಭೋದಿ-ಅಟ್ಟತಾಳ**

ರಾಮನಾಮ ರತ್ನಹಾರ ದೊರಕಿತೆನಗೇ ಪೂರ್ವದ ಪುಣ್ಯದ ಫಲಕೇ॥ಪ॥ ಮತ್ಸ್ಯನೆಂಬುವ ಮಾಣಿಕ್ಯದ ಹರಳು ಕೂರ್ಮನೆಂಬುವ ಕುಸುರಿ। ವರಹನೆಂಬುವ ಸಮ ಹದದ ಚಿನ್ನ। ಕಂಭದಲಿ ಉದ್ಭವಿಸಿದ ನರಸಿಂಹ। ನಾಮದ ಸಿರಿಮುತ್ತು ಕುಂದಣ ಬಿಗಿದಿತ್ತು॥1॥ ವಾಮನನೆಂಬುವ ವಲಿವ ಏಕಾವಳಿಯು ಬಹುಭುಜರನು ಗೆಲಿದು। ಪರಶುರಾಮನೆಂಬೊ ಪಟ್ಟೆಯ ಹೊಡೆದಿತ್ತು ರಾಮನಾಮವೆಂಬ ರತ್ನದ ಹಾರಗಳಿಗೆ ಕೃಷ್ಣನಾಮದ ಕೀಲಿತ್ತು॥2॥ ಬುದ್ಧನೆಂಬುವ ಸಲಿಗೆಯ ಸುತ್ತಿತ್ತು ಅಲುಕು ಮುಲುಕಿತ್ತು ಕಲ್ಕಿಯೆಂಬುವ ಕುಣಿಕೆಯು ಹತ್ತಿತ್ತು ಪುರಂದರ ವಿಠಲನೆಂಬ ನಾಮದ ಸರಮುತ್ತು ಸಾಧುಗಳಲ್ಲಿತ್ತು॥3॥

ಸಲಹಯ್ಯ ಶ್ರೀರಘುರಾಮ **ರಾಗ: ಭೈರವಿ**

ಸಲಹಯ್ಯ ಶ್ರೀರಘುರಾಮ। ಛಲವ್ಯಾಕೊ ಯನ್ನೊಳು ಧಾಮಾ। ಪರಿಪೂರ್ಣಭಕ್ತ ಕಾಮಾ। ಅನುಮಾನವ್ಯಾಕೋನಿಸ್ಸೀಮ॥ಪ॥ ಮತ್ಸ್ಯಾವತಾರ ವತಾಳೀ ಮಡುವಲ್ಲಿ ವಾಸವಮಾಡಿ। ತುಚ್ಛಾಸೋಮ ಕನನಕೊಂದು। ಸತ್ಯಾದಿವೇದವ ತಂದೇ॥1॥ ಬೆಟ್ಟವ ಬೆನ್ನಲ್ಲಿ ಪೊತ್ತೆ। ದುಷ್ಟಾರಕ್ಕಸರನು ಕೊಂದೆ। ಇಷ್ಟಾದಿಂದಮೃತವ ತಂದು ಕೊಟ್ಟೆನೀ ದೇವತೆಗಳಿಗೆ॥2॥ ವರಹಾವತಾರ ತಾಳಿ ಧರಣೀಯದಂತದಿ ಕೆದರಿ। ದುರುಳಾ ರಕ್ಕಸರನು ಕೊಂದು।

ಪೊರೆದೇ ನೀ ದೇವತೆಗಳನು॥3॥ ನರಸಿಂಹ ರೂಪವ ತಾಳಿ। ಹಿರಣ್ಯ ಕಶ್ಯಪನನು ಸೀಳಿ। ತರಳಂಗೆವರವಾನಿತ್ತೆ। ನರಮೃಗರೂಪನೆನೀನು॥4॥ ಬಲಿಯನ್ನುದಾನವ ಬೇಡಿ। ಇಳೆಯನು ಮೂರಡಿ ಮಾಡೀ। ಬಲಿಚಕ್ರವರ್ತಿಯ ತುಳಿದಾ ಬಲವಾದ ವಾಮನಮೂರ್ತಿ॥5॥ ತಾತಾನ ಅಣತಿಯಿಂದ ಮಾತೇಯ ಶಿರವನೆತರಿದು। ದುಷ್ಟಾಕ್ಷತ್ರಿಯರನ್ನೆ ಕೊಂದಾ ಪರುಶೂರಾಮನೆ ನೀನು॥6॥ ಪಟ್ಟದ ಅರಸಿಯ ಕದ್ದ। ದುಷ್ಟರಾವಣಕೊಂದು। ಭಕ್ತರಿಗೆ ರಾಜ್ಯವನಿತ್ತೇ। ಪಟ್ಟಾಭಿರಾಮನೆ ನೀನು॥7॥ ವಸುದೇವನುದರದಿ ಜನಿಸಿ। ವಾಸುಕಿಶಯನನೆಂದೆನಿಸಿ। ಹಸನಾದ ಗೋವ್ಗಳಕಾಯ್ದು। ವಸುದೇವ ಕೃಷ್ಣನೆ ನೀನು॥8॥ ಸತಿಯಾರವ್ರತವನ್ನಳಿದೆ। ಅತಿಶಾಯರೂಪವ ತಾಳ್ದ। ಹಿತದಿಂದ ಬೆತ್ತಲೆ ನಿಂದ ಬೌದ್ಧವತಾರನೇ ನೀನು॥9॥ ಕರದಲ್ಲಿ ಖಡ್ಗವ ಪಿಡಿದು। ದುರುಳಾದುಷ್ಟರನು ತರಿದು। ಕುದುರೇಯನೇರಿ ಬಂದ ಕಲ್ಕ್ಯಾವತಾರನೆನೀನು॥10॥ ಹತ್ತಾವತಾರನೆ ಬಾರೋ ಭಕ್ತರಪ್ರಿಯನೆ ಬಾರೋ॥11॥

ದೀನಜನಾವನ ಶ್ರೀರಾಮ — ರಾಗ: ಭೂಪಾಲ-ಛಾಪುತಾಳ

ದೀನಜನಾವನ ಶ್ರೀರಾಮ। ದಾನವ ಹರಣ ಶ್ರೀರಾಮ। ದೀನವಿಮಾನ ಶ್ರೀರಾಮ। ಮೀನಶರೀರ ಶ್ರೀರಾಮ॥ಪ॥ ನಿರ್ಮಲ ಹೃದಯ ಶ್ರೀರಾಮ। ಕಾರ್ಮುಕ ಪಾಣಿ ಶ್ರೀರಾಮ। ಶರ್ಮಲ ಫಲಪ್ರದ ಶ್ರೀರಾಮ। ಕೂರ್ಮಾವತಾರ ಶ್ರೀರಾಮ॥1॥ ಶ್ರೀಕರ ಸುಗುಣ ಶ್ರೀರಾಮ। ಶ್ರೀಕರ ಲಾಲಿತ ಶ್ರೀರಾಮ। ಶ್ರೀಕರುಣಾರ್ಣವ ಶ್ರೀರಾಮ। ಸೂಕರ ರೂಪ ಶ್ರೀರಾಮ॥2॥ ಸರಸಿಜ ನಯನ ಶ್ರೀರಾಮ। ಸುರಪತಿ ವಿನುತ ಶ್ರೀರಾಮ। ನರವರವೇಷ್ಟ ಶ್ರೀರಾಮ। ನರಹರಿ ರೂಪ ಶ್ರೀರಾಮ॥3॥ ಕಾಮಿತ ಫಲದ ಶ್ರೀರಾಮ। ಪಾಮರ ದೂರ ಶ್ರೀರಾಮ। ಸಾಮಜ ವರದ ಶ್ರೀರಾಮ। ವಾಮನ ರೂಪ ಶ್ರೀರಾಮ॥4॥ ಅಘತಿರಾದಿತ್ಯ ಶ್ರೀರಾಮ। ಪಿಗಳಿತ ಮೋಹ ಶ್ರೀರಾಮ। ರಘುಕುಲ ತಿಲಕ ಶ್ರೀರಾಮ। ಭೃಗುಸುತ ರೂಪ ಶ್ರೀರಾಮ॥5॥ ಕುಶಲವ ಜನಕ ಶ್ರೀರಾಮ। ಕುಶಲವ ಚತುರ ಶ್ರೀರಾಮ। ದಶಮುಖ ಮರ್ಧನ ಶ್ರೀರಾಮ। ದಶರಥ ನಂದನ ಶ್ರೀರಾಮ॥6॥ ಕಲಿಮಲ ಹರಣ ಶ್ರೀರಾಮ। ಜಲಜ ಭವಾರ್ಚಿತ ಶ್ರೀರಾಮ। ಸಲಲಿತ ವಚನ ಶ್ರೀರಾಮ। ಹಲಧರ ರೂಪ ಶ್ರೀರಾಮ॥7॥ ಸಿದ್ದ ಜನಪ್ರಿಯ ಶ್ರೀರಾಮ। ಪ್ರಸಿದ್ದ ಚರಿತ್ರ ಶ್ರೀರಾಮ। ಬಡ್ಡುವ ಸನ ಶ್ರೀರಾಮ। ಬುದ್ಧಾವತಾರ ಶ್ರೀರಾಮ॥8॥ ಜಯಕರ ನಾಮ ಶ್ರೀರಾಮ। ವಿಜಯರಥ ಸಾರಥೀ ಶ್ರೀರಾಮ। ಭಯನಾಶನ ಹರೇ ಶ್ರೀರಾಮ। ಹಯಮುಖ ರೂಪ ಶ್ರೀರಾಮ॥9॥ ಭಾಗವತ ಪ್ರಿಯ ಶ್ರೀರಾಮ। ಆಗಮ ಮೂಲ ಶ್ರೀರಾಮ। ನಾಗಸುಶಯನ ಶ್ರೀರಾಮ। ತ್ಯಾಗರಾಜಾರ್ಚಿತ ಶ್ರೀರಾಮ॥10॥

ರಾಮ ಗೋವಿಂದ ಹರೇ ಕೃಷ್ಣ ಗೋವಿಂದ — ರಾಗ: ರೇವತಿ

ರಾಮ ಗೋವಿಂದ ಹರೇ ಕೃಷ್ಣ ಗೋವಿಂದ। ದಾಮೋದರ ಹರಿ ವಿಷ್ಣು ಮುಕುಂದ॥ಪ॥ ಮತ್ಸ್ಯಾವತಾರ ದೊಳಾಡಿದವನೆ ಮಂದ। ರಾಚಲ ಬೆನ್ನೊಳಗಾಂತವನೆ॥ ಅಚ್ಚ ಸೂಕರನಾಗಿ ಬಾಳಿದನೆ ಮದ। ಹೆಚ್ಚಿ ಹಿರಣ್ಯಕನ ಸೀಳಿದನೆ॥1॥ ಬಲಿಯೊಳು ದಾನವ ಬೇಡಿದನೆ ಕ್ಷಾತ್ರ। ಕುಲವ ಬಿಡದೆ ಕ್ಷಯ ಮಾಡಿದನೆ॥ ಜಲನಿಧಿಗೆ ಬಿಲ್ಲ ಹೂಡಿದನೆ ಕಾಮ। ಕೊಲಿದು ಗೊಲ್ಲತಿಯೊಳಗಾಡಿದನೆ॥2॥ ಸಾಧಿಸಿ ತ್ರಿಪುರರ ಗೆಲಿದವನೆ ಪ್ರತಿ। ವಾದಿಸಿ ಹಯವೇರಿ ನಲಿದವನೆ॥ ಭೇದದದಿ ವಿಶ್ವವ ಗೆಲಿದವನೆ ಬಾಡ। ದಾದಿ ಕೇಶವ ನಮಗೊಲಿದವನೆ॥3॥

ನಾರಾಯಣನಮ್ಮ ಈತ

ನಾರಾಯಣನಮ್ಮ ಈತ ನಾರಿ ಒಳ್ಳೊಳ್ಳೆಯವರಿಗೆ ಮಾಡಿತ ಖ್ಯಾತ॥ಪ॥ ನಾನಾ ಬಗೆಯಿಂದ ಪೋಗಳುವೆನೀತ। ಸ್ನಾನೆಂಬುವುದನ್ನು ಮುರಿದ ಪ್ರಖ್ಯಾತ॥ಅ.ಪ॥ ಕೈಕಾಲಿಲ್ಲದೆ ಆಟ ಆಡಿದ ಮೈಮ್ಯಾಲೆ ಹೊರೆಯ ಹೊತ್ತು ನೋಡಿದ। ಕೋರೆಯ ಮಸೆದು ಹದ ಮಾಡಿದ। ಕೋಯೆಂದು ಕೂಗಿ ಒದರುತೋಡಿದ। ಇವ ಭಕ್ತರನ್ನ ಪಾತಾಳಕ್ಕೆ ದೂಡಿದ। ಶಕ್ತಿ ಮಗನಾದ ಕ್ಷತ್ರಿಯರ ಕಾಡಿದ॥ರಾವಣನಿಗೆ ಅಂಬು ತೆಗೆದು ಹೂಡಿದ। ರಾಧಾನ್ನನೆ ಮೋಜು ಮಾಡಿದ। ಇವ ದಿಗಂಬರನಾಗಿ ಅಶ್ವವೇರಿ ಓಡಿದ॥1॥ ಕಳ್ಳಗಿಂತ ಮಹಾಕಳ್ಳ ಕಲ್ಲು ಮಾಡಿಕೊಂಡು ಇರುವನು ನೆಳ್ಳ ಭೂಮಿಗೆ ನೆಗವಿ

ಸುತ್ತಿ ಬಲ್ಲ। ಬುದ್ಧಿವಂತ ಪ್ರಹ್ಲಾದಗೊಳಿದನಲ್ಲ। ಇವ ಎರಡುಪಾದ ಭೂಮಿ ದಾನ ಒಲ್ಲ। ಇವ ಕೊಡಲಿಬಾಯಿಗ್ಯಾರು ಇದಿರಿಲ್ಲ। ಲಂಕೆಗೆ ಬೆಂಕಿಯನಲ್ಲ ಕೊಂಕಿ ಕೊಳಲನೂದುವನು ಗೊಲ್ಲ। ಮೈಮೇಲೆ ಗೇಣು ಅರಿವ್ವಿಲ್ಲ। ಇದು ಮಾಮೇರೆಂಬ(?) ತೇಜೀ ಏರ್‍ಯಾನಲ್ಲ॥2॥ (ಬಿಟ್ಟಕಣ್ಣ) ಕಂಡ ವೈರಿ ಕೊಂದ। ಕಾಮಾತ್ಮ ರಿ(ಗಾ) ಗೋದೇನು ಛಂದ। ದಾಡೆಯಿಂದ ದೂಡಿ ಭೂಮಿ ತಂದ। ದಾಡೆಯಿಂದ ಕಂಬ ಒಡೆದು ಬಂದ। ಇವ ಶುಕ್ರನ್ನ ಕಣ್ಣ ಮುರಿದೊಂದ। ತಂದೆ ಮಾತಿಗೆ ತಾಯಿ ಮರಣಂದ ವನದ್ದಿಂಡು ಕೂಡಿ ವನಕೆ ಕೇಡು ತಂದ। ಒಮ್ಮೆ ಮೀಸಲ್ಬೆಣ್ಣೆ ಮುದ್ದೇನಂದ। ಇವ ಬತ್ತಲಾಗಿ ಹತ್ತು ಕುದುರಿದಂದ। ತಂದೆಹೆಳವನಕಟ್ಟೆರಂಗ ಬಂದ॥3॥

ನಾರಾಯಣ ಗೋವಿಂದ ಹರಿ — ರಾಗ: ವಸಂತ

ನಾರಾಯಣ ಗೋವಿಂದ ಹರಿ ನಾರಾಯಣ ಗೋವಿಂದ॥ಪ॥ ನಾರಾಯಣ ಗೋವಿಂದ ಮುಕುಂದ ಪರತರ ಪರಮಾನಂದ॥ಅ.ಪ.॥ ಮೊದಲು ಮತ್ಸ್ಯನಾಗಿ ಉದಿಸಿ ಸೋಮನ ಸದೆದು ವೇದಗಳ ತಂದ॥1॥ ಮಂದರಧರ ತಾ ಸಿಂಧುವಿನೊಳಮೃತ ತಂದು ಭಕ್ತರಿಗುಣಲೆಂದು॥2॥ ಭೂಮಿಯ ಕದ್ದ ಖಳನ ಮರ್ದಿಸಿ ಆ ಮಹಾಸತಿಗಳ ತಂದ॥3॥ ದುರುಳ ಹಿರಣ್ಯಕನ ಕರುಳ ಬಗೆದು ತನ್ನ ಕೊರಳೊಳಿಟ್ಟ ಮುದದಿಂದ॥4॥ ಪುಟ್ಟನಾಗಿ ಮಹಿಕೊಟ್ಟ ಬಲಿಯ ತಲೆ ಮೆಟ್ಟಿ ತುಳಿದ ದಯದಿಂದ॥5॥ ಧಾತ್ರಿಯೊಳು ಮುನಿಪುತ್ರನಾಗಿ ಬಂದು ಕ್ಷತ್ರಿಯರೆಲ್ಲರ ಕೊಂದ॥6॥ ಮಡದಿಗಾಗಿ ಸರಗಡಲನೆ ಕಟ್ಟಿ ಹಿಡಿದು ರಾವಣನ ಕೊಂದ॥7॥ ಗೋಕುಲದಿ ಹುಟ್ಟಿ ಗೋವ್ಗಳ ಕಾಯ್ದು ಗೋಪಾಲಕೃಷ್ಣ ತಾ ಬಂದ॥8॥ ಛಲದಲೇ ತ್ರಿಪುರರ ಸತಿಯರ ವ್ರತದ ಛಲವಳಿದ ಬಗೆಯಿಂದ॥9॥ ಧರೆಯೊಳು ಪರಮ ನೀಚರ ಸವರಿ ಕುದುರೆಯೇರಿದ ಕಲಿ ಚಂದ॥10॥ ದೋಷದೂರ ಶ್ರೀ ಪುರಂದರವಿಠಲ ಪೋಷಕ ಭಕ್ತಸುವೃಂದ॥11॥

ಪಾಹಿ ಪರಮಾನಂದ ಪಾಹಿ ಮುನಿಜನವಂದ್ಯ

ಪಾಹಿ ಪರಮಾನಂದ ಪಾಹಿ ಮುನಿಜನವಂದ್ಯ ಪಾಹಿ ಖಳಜನ ಬಾಧ ಪಾಹಿ ಗೋವಿಂದ॥ಪ॥ ಪಾಹಿ ಗೋಪಿಯನಾಥ ಪಾಹಿ ಮನ್ಮಥ ತಾತ। ಪಾಹಿ ಲಕ್ಷ್ಮೀಕಾಂತ ಪಾಹಿ ಭೂಕಾಂತ॥ಅ.ಪ॥ ಮತ್ಸ್ಯರೂಪಲಿ ಬಂದು ಬಲಿದ ದೈತ್ಯನ ಕೊಂದೆ। ಬೆಚ್ಚರದೆ ಬಹುಗಿರಿಯ ಬೆನ್ನಲ್ಲಿ ತಾಳ್ದೆ। ಬಚ್ಚಿಟ್ಟ ಧರಣಿಯನ್ನು ಬಲುಮೆಯಿಂದಲಿ ತಂದೆ। ಅರ್ಚಿಸಿದ ಪ್ರಹ್ಲಾದಗೆ ಒಲಿದೆ ನರಸಿಂಹ॥1॥ ಕುಬ್ಜರೂಪಿಲಿ ನೆಲನ ಬೇಡಿ ಬಲಿಯನು ತುಳಿದೆ ಪಿತನಾಡಿದ ಶಬ್ದವನು ಕೇಳಿ ಮಾತೆಯ ಶಿರವನಳಿದೆ। ಕೊಬ್ಬಿದ್ದ ರಾವಣನ್ನ ಕಂದರವ ಖಂಡಿಸಿದೆ। ಅಬ್ಜಮುಖಿ ಜಾನಕಿಯನಾಳಿದೆ ಶ್ರೀರಾಮ॥2॥ ತುರುಹಿಂಡ ಕಾಯ್ದು ತಪವಳಿದು ಪತಿವ್ರತೆಯರ ಭರದಿ ವಾಜಿಯನೇರಿ ಚರಿಸುತ್ತ ಬಂದೆ। ಕರುಣಾಳು ಶ್ರೀಹೆಳವನಕಟ್ಟೆ ರಂಗಯ್ಯ ಪಿಳ್ಳಂಗಿರಿ ವಾಸ ಶ್ರೀ ವೇಂಕಟೇಶ॥3॥

ಗೋವಿಂದ ಹರಿ ಗೋವಿಂದ — ರಾಗ: ನಾಟ

ಗೋವಿಂದ ಹರಿ ಗೋವಿಂದ। ಗೋವಿಂದ ಕೇಶವ ಕೃಷ್ಣ ಜನಾರ್ದನ॥ಪ॥ ಮತ್ಸ್ಯಾವತಾರ ದೊಳಾಡಿದನೆ ಮಂದರಾಚಲ ಬೆನ್ನೊಳು ತಾಳಿದನೆ। ಅಚ್ಚಸೂಕರನಾಗಿ ಬಾಳಿದನೆ ಮದಹೆಚ್ಚಿ ಹಿರಣ್ಯನ ಸೀಳಿದನೆ॥1॥ ಕುಂಭಿನಿ ದಾನವ ಬೇಡಿದನೆ ಕ್ಷಾತ್ರರೆಂಬುವರನು ಹತ ಮಾಡಿದನೆ। ಅಂಬುಧಿಗೆ ಶರ ಹೂಡಿದನೆ ಕಮಲಾಂಬಕ ಗೊಲ್ಲರೊಳಾಡಿದನೆ॥2॥ ವಸುದೇವನುದರದಿ ಪುಟ್ಟಿದನೆ ಪಲ್ಮೊಸೆವ ದನುಜರೊಡಗುಟ್ಟಿದನೆ। ಎಳೆವ ಕಾಳಿಂಗನ ಮೆಟ್ಟಿದನೆ ಬಾಧಿಸುವರ ಯಮಪುರಿಗಟ್ಟಿದನೆ॥3॥ ಪೂತನಿಯ ಮೈಯ ಸೋಕಿದನೆ ಮಹಾಘಾತದ ಮೊಲೆಯುಂಡು ತೇಗಿದನೆ। ಘಾತಕಿಯನತ್ತ ನೂಕಿದನೆ ಗೋಪವ್ರಾತ ಗೋಗಳನೆಲ್ಲ ಸಾಕಿದನೆ॥4॥ ಸಾಧಿಸಿ ತ್ರಿಪುರರ ಗೆಲಿದವನೆ ಮ್ಲೇಚ್ಛರ ಛೇದಿಸಿ ಹಯವೇರಿ ಮೆರೆದವನೆ। ಸಾಧಿಸಿ ಸಕಲವ ತಿಳಿದವನೆ ಬಾಡದಾದಿಕೇಶವ ಭಕ್ತಿಗೊಲಿದವನೆ॥5॥

ಪರಮ ಪುರುಷ ಹರಿ ಗೋವಿಂದ **ರಾಗ: ಸಿಂಧೂಭೈರವಿ**

ಪರಮ ಪುರುಷ ಹರಿ ಗೋವಿಂದ, ಕರಿವರದ ನಾರಾಯಣ ಗೋವಿಂದ॥ಪ॥ ನಿಶಿಪೆಸರಸುರನ ಉಸುರ ತೊಲಗಿಸಿದ। ಕುಸುಮಶರನ ಪಿತ ಗೋವಿಂದ। ರಸಪೂರಿತ ಶ್ರುತಿ ಮಸುಳಿಸದಲೆ ತಂದು। ಬಿಸಜಸಂಭವಗಿತ್ತೆ ಗೋವಿಂದ॥1॥ ಜತನ ತಪ್ಪದೆ ಅಮೃತ ಮಥನದಿ ಪರ್ವತವ ನುದ್ಧರಿಸಿದೆ ಗೋವಿಂದ। ಶತಕ್ರತುವಿನ ಸಿರಿ ಹತವಾಗೆ ಕಡಲನವ। ಮಥಿಸಿ ನಿಲ್ಲಿಸಿಕೊಟ್ಟೆ ಗೋವಿಂದ॥2॥ ಭೂತಳವೆರಸಿ ರಸಾತಳಕಿಳಿದನ। ಪಾತಾಳದಿ ಕಂಡೆ ಗೋವಿಂದ। ಆತನೊಡನೆ ಕಾದಿ ಖ್ಯಾತಿಲಿ ಮಡುಹಿ ಮ। ಹೀತಳವನು ತಂದೆ ಗೋವಿಂದ॥3॥ ದುರುಳ ದೈತ್ಯನ ಸೀಳಿ ಕರುಳ ಮಾಲೆಯ ಮುಂ। ಗೊರಳೊಳು ಧರಿಸಿದೆ ಗೋವಿಂದ। ಗರಳಕಂಧರ ವಿಧಿ ಕರವೆತ್ತಿ ಪೊಗಳಲು। ತರಳಗಭಯವಿತ್ತೆ ಗೋವಿಂದ॥4॥ ವಾಮನನಾಗಿ ನಿಸ್ಸೀಮ ಬಲಿಯ ಕೈಯ್ಯ। ಭೂಮಿಯಳೆದುಕೊಂಡೆ ಗೋವಿಂದ। ಆಮರಸೋದ್ಭವಾಂಡವೊಡೆದು ನಿಂತು। ವ್ಯೋಮ ಗಂಗೆಯ ಪೆತ್ತೆ ಗೋವಿಂದ॥5॥ ವರಪರಶುಧರನಾಗಿ ಭೂಪರ ಧಿ। ಕ್ಕರಿಸಿ ಸಂಹರಿಸಿದೆ ಗೋವಿಂದ। ತರಹರಿಸದೆ ವಸುಂಧರೆಯನೆಲ್ಲವ ಭೂ। ಸುರರಿಗೊಪ್ಪಿಸಿ ಕೊಟ್ಟೆ ಗೋವಿಂದ॥6॥ ತ್ರಿನಯನನೊಲಿಸಿದ ರಾವಣನನು ರಣಾಂಗಣದೊಳಗೊರಸಿದೆ ಗೋವಿಂದ। ಕ್ಷಣವೆನಿಸದೆ ಮಣಿಪುರದಲಿ ವಿಭೀಷಣಗೆ ಶಾಶ್ವತವಿತ್ತೆ ಗೋವಿಂದ॥7॥ ವಾರಣದಂತ ವಿದಾರಣ ಕಂಸ ಸಂ। ಹಾರಣ ಭುಜಬಲ ಗೋವಿಂದ। ವಾರಣಪುರಪತಿದಾರಣ ಪ್ರಿಯ ಭೂ। ಭಾರೋತ್ತಾರಣ ಗೋವಿಂದ॥8॥ ಕಥೆಯ ನಿರ್ಮಿಸಿ ಪತಿವ್ರತೆಯರ ಬಲು। ವ್ರತಗಳ ಕೆಡಿಸಿದೆ ಗೋವಿಂದ। ಜತನದಿಂದ ತ್ರಿಪುರವನುರುಹಿ ದೇ। ವತೆಗಳ ಸಲಹಿದೆ ಗೋವಿಂದ॥9॥ ವಾಜಿಯ ಮರುಕದಿ ತೇಜದಲೇರಿ ಕ। ನೋಜು ರಾವುತನಾದೆ ಗೋವಿಂದ। ವಾಜಿಯ ಬೆನ್ನೊಳು ರಾಜಿಪಗುಣದಂಕೆ। ಈ ಜಗದೊಳಗಿಪ್ಪೆ ಗೋವಿಂದ॥10॥ ಮೇದಿನಿಗೋಸುಗ ಕಾದಿ ಕಲಹದಿ ವಿ। ರೋಧಿಗಳನು ಕೊಂದೆ ಗೋವಿಂದ।ಸಾಧುಗಳಿಗೇ ಸುಖವೈದಿಪ ಕಾಗಿನೆಲೆ। ಯಾದಿ ಕೇಶವರಾಯ ಗೋವಿಂದ॥11॥

ಗೋವಿಂದ ಸಲಹೆನ್ನನು **ರಾಗ: ನಾದನಾಮಕ್ರಿಯ–ಮಿಶ್ರಛಾಪುತಾಳ**

ಗೋವಿಂದ ಸಲಹೆನ್ನನು ಸದಾನಂದ॥ಪ॥ ಗೋವಿಂದ ಸಲಹೆನ್ನ ಕುಮುದಲೋಚನ ನಿನ್ನ ಸೇವಕರಡಿಯ ಸೇವಕನಯ್ಯ ಗೋವಿಂದ॥ಅ.ಪ॥ ತಮನ ಸಂಹರಿಸಿ ವೇದವ ತಂದೆ ಗೋವಿಂದ। ಅಮರರಿಗೊಲಿದಮೃತವನಿತ್ತೆ ಗೋವಿಂದ। ರಮಣಿಯ ತಂದ ವರಾಹರೂಪಿ ಗೋವಿಂದ। ಭ್ರಮಿಸಿ ಕಂಭದೊಲುದ್ಭವಿಸಿದೆ ಗೋವಿಂದ॥1॥ ಕ್ಷಮೆಯನಳೆದ ಬ್ರಹ್ಮಚಾರಿಯೆ ಗೋವಿಂದ। ಸಮರದೊಳಖಿಳ ರಾಯರ ಕೊಂದೆ ಗೋವಿಂದ। ಕಮಲಾಕ್ಷ ಕಡಲ ಕಟ್ಟಿದ ದಿಟ್ಟಗೋವಿಂದ। ಮಮತೆಯೊಳಿಳೆಯ ಗೋವ್ಗಳ ಕಾಯ್ದೆ ಗೋವಿಂದ॥2॥ ರಮಣಿಯರ್ಗೊಲಿದು ಬತ್ತಲೆ ನಿಂದೆ ಗೋವಿಂದ। ವಿಮಲ ತುರಗವೇರಿ ನಡೆಸಿದೆ ಗೋವಿಂದ। ನಮಿಪರಿಗೊಲಿವೆ ಗೋವಿಂದ ನಿಂದಿಪರಿಗೆ। ಶಮನನಂತಿಪ್ಪೆ ಗೋವಿಂದ ಎಲ್ಲರೊಳಪ್ಪ ಗೋವಿಂದ॥3॥ ಅಮಿತಮಹಿಮ ಗೋವಿಂದ ಇಂಗಡಲೊಳು। ಗಮನ ನಿರ್ಜಿತ ಗೋವಿಂದ। ಅಚ್ಯುತ ಸರ್ವೋತ್ತಮನೆ ಚಿನ್ಮಯ ಗೋವಿಂದ। ನಿಶ್ಚಲಭಕ್ತಿ ಕ್ರಮವ ಬೋಧಿಸೊ ಗೋವಿಂದ॥4॥ ಪಾಪವನೆಲ್ಲ ಶಮನಗೊಳಿಪ ಗೋವಿಂದ। ನಮೋ ಲಕ್ಷ್ಮೀರಮಣ ದಶಾವತಾರ ತಾಳಿದ ಹರಿಯೆ॥5॥

ಸಕಲ ದುರಿತಗಳ ಪರಿಹಾರ ಮಾಡಿದ್ಯೋ **ರಾಗ: ಮೋಹನ**

ಸಕಲ ದುರಿತಗಳ ಪರಿಹಾರ ಮಾಡಿದ್ಯೋ ವೇಂಕಟೇಶ। ಭಕುತಿಗೊಲಿದು ಬಂದು ಭಕ್ತರ ಕಾಯ್ದ್ಯೋ ವೆಂಕಟೇಶ॥ಪ॥ ಮತ್ಸ್ಯಾವತಾರದಿ ನಾಲ್ಕು ವೇದವ ತಂದ್ಯೋ ವೇಂಕಟೇಶ। ಪೃಥ್ವಿಧರನ ಹೊತ್ತು ಭೃತ್ಯರ ನೀ ಕಾಯ್ದೊ ವೇಂಕಟೇಶ। ಧರೆಯನೊಯ್ದನ ಕೋರೆದಾಡಿಯಿಂದಲಿ ಕೊಂದ್ಯೋ ವೇಂಕಟೇಶ। ತರಳಗೊಲಿದು ನೀ ಕಂಬದಿಂದಲಿ ಬಂದ್ಯೋ ವೆಂಕಟೇಶ॥1॥ ಭೂಮಿದಾನವ ನೀಡಿದವನ ಬಾಗಿಲ ಕಾಯ್ದೋ ವೇಂಕಟೇಶ। ಭೂಮಿಪಾಲರನಳಿದು ಭಾರ್ಗವನೆನಿಸಿದ್ಯೋ ವೇಂಕಟೇಶ। ದಶಶಿರನನು ಕುಟ್ಟಿ ಶಶಿಮುಖಿಯಳ ತಂದ್ಯೋ ವೇಂಕಟೇಶ। ಅಸುರೆಯ ಸಂಹರಿಸಿ

ಕಂಸನ ಮಡುಹಿದ್ಯೋ ವೇಂಕಟೇಶ॥2॥ ಅಧಮ ಜನರಿಗೆ ಬೋಧಿಸಿ ಬೆತ್ತಲೆ ನಿಂದ್ಯೋ ವೇಂಕಟೇಶ। ಕುದುರೆ ಏರಿ ಕಲ್ಕಿ ರೂಪವ ತಾಳಿದ್ಯೋ ವೇಂಕಟೇಶ। ಹರಿದಾಸರ ಮೇಲೆ ಒಲಿದು ಬೇಗನೆ ಬಂದ್ಯೋ ವೇಂಕಟೇಶ। ವರದ ಪುರಂದರವಿಠಲ ನಮೋ ನಮೋ ವೇಂಕಟೇಶ॥3॥

ತಿಳಿಯದೋ ನಿನ್ನಾಟ ತಿರುಪತಿಯ ವೆಂಕಟ **ರಾಗ: ಕಲ್ಯಾಣಿ-ಖಂಡಏಕತಾಳ**

ತಿಳಿಯದೋ ನಿನ್ನಾಟ। ತಿರುಪತಿಯ ವೆಂಕಟ॥ಪ॥ ನೀರೊಳು ಯವಳ ಮೋರೆಯ। ನೋಡುವಿ ಸುಳಿವ ರಂಬುಧಿ। ಇಳೆಯನಾಳುವ ಭಳಿರೆ ಭಾರ್ಗವ। ಖಳನ ಭೇದಿಸಿ ಕೊಳಲ ಧ್ವನಿಯನು। ನಳಿನ ಮುಖಿಯರಿಗೆ ನಾಚಿಸುವ ದಿದೊಳಿತೆ। ಯೇಳು ಹವಣೆಗಾರನೆ॥1॥ ಆರು ಬಲ್ಲರು ನಿಮ್ಮ ಶ್ರೀ ಲಕುಮಿ ಮನಸಿಗೆ ತೋರದಿಹ ಪರಬೊಮ್ಮ। ಉಳಿದವರು ಬಲ್ಲರೆ ನೀರಜಾಸನ ಬೊಮ್ಮ ಇದು ನಿಮ್ಮವರ್ತಿ॥ ನೀರೊಳಗೆ ಮನೆ ಭಾರ ಬೆನ್ನಲಿ॥2॥ ಕೋರೆದಾಡೆಯ ನಾರಸಿಂಹನೆ। ಭೂರಿ ಬೇಡಿದಿ ಧೀರಹರುಷದಿ ವಾರಿಬಂಧಿಸಿ ಮಾರಜನಕನೆ ನಾರಿಯರ ವ್ರತವಳಿದು ಕುದುರೆಯನೇರಿ ಮೆರೆಯುವ ಸುಂದರಾಂಗನೆ॥3॥ ಸಕಲ ಮಾಯವಿದೇನು ತ್ರಿವಿಕ್ರಮನ ಪಾಲಿಸಿ ಸಖನ ಸಲಹಿದೆ ನೀನು। ಭಕುತಿಯಿಂದಲಿ ತುತಿಪರಿಗೆ ಸುರಧೇನು ಸುಮನಸರಭಾನು ನಿಖಿಳ ವೇದೋದ್ಧಾರ ಗಿರಿಧರ॥4॥ ನಿಖಿಳ ಭೂಮಿಯ ತಂದ ನರಹರಿ। ಯುಕುತಿಯಲಿ ಆಳಿದಿ ಭಕ್ತ ವೃಂದಕೆ ಸುಖವ ತೋರುವ ವೇಣುಗೋಪಾಲನೆ। ರುಕುಮನನುಜೆಯ ರಮಣ ಬೌದ್ಧನೆ ಲಕುಮಿರಮಣನೆ ಕಲ್ಕಿರೂಪಿಯೆ॥5॥ ನಿನ್ನ ರೂಪಿನ ಲೀಲೆ ನೋಡುವ ಜನಕೆ ಕಣ್ಣು ಸಾವಿರವಿಲ್ಲ। ನಾ ಪಾಡಿ ಪೊಗಳಲು ಪನ್ನಗಾಧಿಪನಲ್ಲ ನೀನರಿಯದಿಲ್ಲ। ಕಣ್ಣು ಮುಚ್ಚದೆ ಬೆನ್ನು ತೋರುವಿ ಮಣ್ಣು ಕೆದರುವಿ॥6॥ ಚಿಣ್ಣ ಗೊಲಿದನೆ। ಸಣ್ಣವಾಮನ ಅಣ್ಣರಾಮನೆ ಪುಣ್ಯ ಪುರುಷನೆ ಬನ್ನ ಬಡುಕನೆ। ಹೆಣ್ಣುಗಳ ವ್ರತಕೆಡಿಸಿ ತೇಜಿಯ ಬೆನ್ನನೇರಿದ ವ್ಯಾಸವಿಠಲ॥7॥

ಅಪ್ಪಪ್ಪಾ ನೀ ನೋಡಪ್ಪ **ರಾಗ: ಆನಂದಭೈರವಿ-ಆದಿತಾಳ**

ಅಪ್ಪಪ್ಪಾ ನೀ ನೋಡಪ್ಪ। ಮೈಯೆಲ್ಲವು ಕೆಸರಪ್ಪ। ಕಪ್ಪು ಬಡಿವುದೇನಪ್ಪ। ತೊಳೆವೆನೋ ನೀ ಬಾರಪ್ಪ॥1॥ ಬಾರಪ್ಪ ನೀ ಬಾರಪ್ಪ। ಭಾರ ಹೊರುವುದೇನಪ್ಪ॥ ಭಾರವೆಲ್ಲ ನಿನದಪ್ಪ। ಸುರರ ಕಾವ ಎನ್ನಪ್ಪ॥2॥ ಎನ್ನಪ್ಪ ಎನ್ನಪ್ಪ। ಮೋರೆ ಸೊಟ್ಟು ಯಾಕಪ್ಪ। ಕಾನನಳೆ ಗಡ್ಡೆ ಬೇಡಪ್ಪ। ಒಪ್ಪರ ಬೇರ ತಿನ್ನಪ್ಪ॥3॥ ತಿನ್ನಪ್ಪ ತಿನ್ನಪ್ಪ। ಭಕ್ತಿರಸದ ಹಣ್ಣಪ್ಪ। ಸಣ್ಣವ ನೀಡುವನಪ್ಪ। ತೆರೆದ ಬಾಯ ತೋರಪ್ಪ॥4॥ ತೋರಪ್ಪ ನೀ ತೋರಪ್ಪ। ಮುದ್ದು ರೂಪವ ತೋರಪ್ಪ। ಇಂದ್ರಪದವಿ ನೀಡಪ್ಪ। ಬಲಿಗೆ ಕಾವಲಾಗಪ್ಪ॥5॥ ಆಗಪ್ಪ ಭೃಗುರಾಮಪ್ಪ। ವನಚರನು ಆಗಪ್ಪ। ಭಾಗವತ ಭರತನಪ್ಪ। ಪಾದುಕೆ ಅವಗೆ ನೀಡಪ್ಪ॥6॥ ನೀಡಪ್ಪ ನೀ ನೀಡಪ್ಪ। ಹೆಣ್ಣ ಅವಗೆ ನೀಡಪ್ಪ। ಬಡವ ನಾದರೇನಪ್ಪ। ಸೋದರ ಅಳಿಯನು ಬಿಡನಪ್ಪ॥7॥ ಬಿಡೆನಪ್ಪ ಬಿಡೆನಪ್ಪ। ನಿನ್ನ ಚರಣವ ಬಿಡೆನಪ್ಪ। ಕಡಿವಾಣವ ಪಿಡಿಯಪ್ಪ। ಪಾರ್ಥಗೆಸಾರಥ್ಯ ಮಾಡಪ್ಪ॥8॥ ಮಾಡಪ್ಪ ನೀ ಮಾಡಪ್ಪ। ವೇದಶಾಸ್ತ್ರವ ಕಲಿಸಪ್ಪ। ದಿಟ್ಟ ತೇಜಿಯನೇರಪ್ಪ। ತಂದೆ ಪುರಂದರ ವಿಠಲಪ್ಪ ॥9॥

ಹರಿ ಹರಿ ಹರಿ ಎನ್ನಿರೋ **ರಾಗ: ಹಿಂದೋಳ**

ಹರಿ ಹರಿ ಹರಿ ಎನ್ನಿರೋ ಸಜ್ಜನರೆಲ್ಲಾ। ಹರಿ ಹರಿ ಹರಿ ಎನ್ನಿರೋ, ಸಜ್ಜನರೆಲ್ಲಾ॥ಪ॥ ಹರಿ ಹರಿ ಹರಿ ಎನ್ನಿ ಹರಿಯ ಪ್ರಭುವೆ ಎನ್ನಿ। ಹರಿ ಇಂದ ಮಣಿ ಪಡೆದು ನಾರಿಮಣಿಯನ್ನು ವರಿಸಿದ॥ಅ.ಪ॥ ಜಲಚರ ರೂಪಿಯೆ, ನಮನ ನಿನಗೆನ್ನಿ। ಜಲವ ಶಿರದಲ್ಲಿಟ್ಟವನ ಪ್ರಿಯನೆನ್ನಿ॥1॥ ಸೂಕರ ರೂಪಿಯೆ ಸ್ತುತಿಸುವೆ ಎನ್ನಿ। ಸೂತ್ರ ಭಾಷ್ಯದ ವೇದವ್ಯಾಸನೆ ಎನ್ನಿ॥2॥ ಆಮೆಯಾಗಿದ್ದುದೇನು ಅತಿಶಯವೆನ್ನಿ। ಆನೆಗೊಲಿದುದು ಏನಾಶ್ಚರ್ಯವೆನ್ನಿ॥3॥ ನರಸಿಂಹ ದೇವನೆ ನಮಿಸುವೆನೆನ್ನಿ। ನರನು ಕರೆಯಲು ಅಂದು ಕಾಯ್ದವನೆನ್ನಿ॥4॥ ದಾನವ ಬೇಡಿದ ವಾಮನನೆನ್ನಿ। ದಾನವರ ಕೊಂದ ಶ್ರೀಹರಿಯೇ ಎನ್ನಿ॥5॥ ಮಾತೆಯ ಶಿರವ ಕಡಿದವನೆನ್ನಿ। ಮಾತೆಗೆ ಮೂರ್ಜಗವ ತೋರಿದನೆನ್ನಿ॥6॥ ರಾವಣ ವೈರಿಯೆ ಶ್ರೀರಾಮನೆ ಎನ್ನಿ। ರಾಧೇಯನ ವೈರಿಯ ಪರಮಾಪ್ತನೆನ್ನಿ॥7॥ ಮಾವನ ಕೊಂದ ಶ್ರೀಕೃಷ್ಣನೆನ್ನಿ। ಮಾನವ ಕಾಯ್ದ ಮುಕುಂದನೆನ್ನಿ॥8॥ ಕ್ಷಣಕಾಲ ಬಂದಂತ ಬೌದ್ಧನೆ ಎನ್ನಿ। ಕ್ಷೀರಸಾಗರವಾಸ ಶ್ರೀಧರನೆನ್ನಿ॥9॥ ಹಯವೇರಿ ಮೆರೆದ ಕಲ್ಕಿಯೆ ಎನ್ನಿ। ಹರಿಣಾಕ್ಷಿಯರ ವಸ್ತ್ರ

ಚೋರನೆ ಎನ್ನಿ।।10।। ಮಮ ಸ್ವಾಮಿ ಮನೋಹರ ವಿಠಲನೆ ಎನ್ನಿ। ಮಧ್ವ ಮತದಲ್ಲೇ ಎನ್ನನ್ನು ಪುಟ್ಟಿಸು ಎನ್ನಿ।।11।।

ಬಹಳ ನಂಬಿದೆ ಭಕ್ತಪಾಲ ಶ್ರೀ ಲಕ್ಷ್ಮೀಯ ಲೋಲ

ಬಹಳ ನಂಬಿದೆ ಭಕ್ತಪಾಲ ಶ್ರೀ ಲಕ್ಷ್ಮೀಯ ಲೋಲ ವೆಂಕಟರಾಯನ ಮೂರು ಲೋಕದೊಡೆಯನ ಮುಕ್ತಿಯ ಕೊಡುವನ ಪಾಲಿಸಿ ಜಗವನುದ್ಧರಿಸಿದೆ ದೇವನ।।ಪ।। ಜಲದೊಳು ಪೊಕ್ಕು ವೇದವ ತಂದು ಅಜನಿಗಿತ್ತು। ಬಲುಗಿರಿ ಕುಸಿಯಲು ಬೆನ್ನಿನಿಂದಲಿ ತಳೆದು ನೆಲನ ಕದ್ದಸುರನ ಕೊಂದು ಕಂಬದಿ ನಿಂದು। ಬಲಿಯ ದಾನವ ಬೇಡಿ ಜಲಪರುಷವ ನೀಡಿ ಮತ್ತೆ ಮಾತೆಯ ಕಡಿದು ಛಲದಿ ರಾವಣನ ಸಂಹರಿಸಿ ಸೀತೆಯ ತರಿಸಿ। ಬಲುಸತಿಯರನಾಳಿ ಬೌದ್ಧ ರೂಪವು ತಾಳಿ ಅಲ್ಲದಶ್ವವೇರಿದ ಅತಿ ಚೆಲುವ ದೇವನ।।1।। ನಿಗಮ ಚೋರನ ಕೊಂದು ನೀರೊಳು ಮುಳುಗ್ಯಾಡಿ ನಗವ ಬೆನ್ನಲಿ ಪೊತ್ತು ಸುರರಿಗಮೃತವಿತ್ತು। ಬಗೆದು ಧಾರುಣಿಯನ್ನು (ಚೀರಿಹರಿಹಿ) ಹಿರಣ್ಯಕನ ಮಿಗಿಲಾದ ಬಲಿಯ ಮೆಟ್ಟಿ। ಸೊಗಸಿಂದ ಕಾಮಧೇನುವ ತಂದು ಕೌಸಲ್ಯಾ ಮಗನಾಗಿ ಹುಟ್ಟಿ ರಕ್ಕಸರನು ತರಿದೊಟ್ಟಿ। ವಿಗಡ ಮಾವನ ಕೊಂದು ಮತ್ತೆ ತ್ರಿಪುರರ ಗೆಲಿದು। ಜಗದೊಳುದ್ದಂಡ ರಾವುತನಾದ ದೇವನ।।2।। ಆದಿಪೊಳ(ಕು) ಕ್ಷೀರಾಂಬುಧಿ ಮಥನವ ಆಡಿ ಕೂರುಮನಾಗಿ ಮತ್ತ ಹಿರಣ್ಯಕನ ದಾಡೆಯಿಂದಲಿ ಸೀಳಿ ಜೋಡು ರೂಪವ ತಾಳಿ ಬೇಡಿ ಮೂರಡಿ ನೆಲವ ತೀಡಿ ಕ್ಷತ್ರಿಯರ ಸಂಹರಿಸಿ ಕಾಡೊಳು ಚರಿಸಿ। ಗಾಡಿಗಾತಿಯರ ಮನೆಯೊಳುಳ್ಯಾಡಿ ಸತಿಯರ ವ್ರತಗೇಡಿ ಭಕ್ತರಿಗೆ ಅಭಯವ ನೀಡಿ ಹೆಳವನಕಟ್ಟೆ ಕಾಡುಗಲಲ್ಲಿ ನಿಂತ ಕಲಿ ವೆಂಕಟೇಶನ।।3।।

ಆಸೆಯೆನಗಿಲ್ಲ ಸರ್ವೇಶ ನಿನ ಬಿಟ್ಟು

ಆಸೆಯೆನಗಿಲ್ಲ ಸರ್ವೇಶ ನಿನ ಬಿಟ್ಟು ವಾಸುಕೀಶಯನ ಜಗದೀಶ ನಿನ್ಹೊರತೆನಗೆ।।ಪ।। ನಿಗಮದಾಸಗೆ ಹೋಗಿ ನೀರೊಳಗೆ ಮುಳುಗಿ ನೀ ಸುಧೆಯ ಆಸೆಗೆ ಹೋಗಿ ಸುರರ ಕೈ ಸಿಕ್ಕು। ನೆಲದ ಆಸೆಗೆ ಹೋಗಿ ಮಣ್ಣು ಬಗೆದು ಶ್ರಮವನೆ ಬಟ್ಟು। ಕೊರಳ ಆಹಾರದ ಆಸೆ(ಗೆ) ಕರುಳ ಬಗೆವೊದೆ ಕಷ್ಟ।।1।। ಭೂಮಿಯಲಿ ಭಾಳಾಸೆ ಭುವನ ವ್ಯಾಪಿಸಿಕೊಂಡು। ಕಾಮಧೇನಿ(ನುವಿ?) ನ ಆಸೆ ಕಾರ್ತವೀರ್ಯಾರ್ಜುನನ ಕೊಂದು। ಸಿರಿಯ ಸೌಂದರ್ಯದಾಸೆ ಶಿವನೆಬಲ್ಲನು ನೆಗಹಿ ಉದರದಾಸಿಗೆ ಅಸುರೆಜಗಿದು ವಿಷಮೊಲೆನುಂಡಿ।।2।। ತ್ರಿಪುರ ಸತಿಯರ ಆಸೆಗ್ವಸನವಿಲ್ಲದೆ ತಿರುಗಿ। ಅಶ್ವದಲಿ ಆಸೆ ಅತಿ ಕಲಿಭಂಜನನೆನಿಸಿ। ಈಸುಪರಿ ಆಸೆ ಭೀಮೇಶ ಕೃಷ್ಣಗೆ ಇರಲು ನಾಶರಹಿತನೆ ನಿನ್ನ ನಾಮವಿದ್ದರೆ ಸಾಕು।।3।।

ಪ್ರಲಯ ಪಯೋಧಿ (ಅಷ್ಟಪದಿ) ರಾಗಮಾಲಿಕೆ

ಪ್ರಲಯ ಪಯೋಧಿ ಜಲೇ ಧೃತವಾನಸಿವೇದಂ। ವಿಹಿತ ವಹಿತ್ರ ಚರಿತ್ರ ಮಖೇದಮ್। ಕೇಶವ ಧೃತ ಮೀನಶರೀರ ಜಯ ಜಗದೀಶ ಹರೇ।।1।। ಕ್ಷಿತಿರತಿ ವಿಪುಲತರೇ ತವ ತಿಷ್ಠತಿ ಪೃಷ್ಠೇ। ಧರಣಿ ದರಣ ಕಿಣ ಚಕ್ರ ಗರಿಷ್ಠೇ। ಕೇಶವ ಧೃತ ಕಚ್ಛಪರೂಪ ಜಯ ಜಗದೀಶ ಹರೇ।।2।। ವಸತಿ ದಶನ ಶಿಖರೇ ಧರಣೀ ತವ ಲಗ್ನಾ। ಶಶಿನಿ ಕಲಂಕ ಕಲೇವ ನಿಮಗ್ನಾ। ಕೇಶವ ಧೃತ ಸೂಕರರೂಪ ಜಯ ಜಗದೀಶಹರೇ।।3।। ತವ ಕರಕಮಲವರೇ ನಖಮದ್ಭುತ ಶೃಂಗಂ। ದಲಿತ ಹಿರಣ್ಯಕಶಿಪು ತನು ಭೃಂಗಂ। ಕೇಶವ ಧೃತ ನರಹರಿರೂಪ ಜಯ ಜಗದೀಶ ಹರೇ।।4।। ಛಲಯಸಿ ವಿಕ್ರಮಣೇ ಬಲಿಮದ್ಭುತವಾಮನ। ಪದನಖನೀರಜನಿತ ಜನ ಪಾವನ। ಕೇಶವ ಧೃತ ವಾಮನ ರೂಪ ಜಯ ಜಗದೀಶ ಹರೇ।।5।। ಕ್ಷತ್ರಿಯರುಧಿರಮಯೇ ಜಗದಪಗತ ಪಾಪಂ। ಸ್ನಪಯಸಿ ಪಯಸಿ ಶಮಿತಭವತಾಪಂ। ಕೇಶವ ಧೃತ ಭೃಗುಪತಿರೂಪ ಜಯ ಜಗದೀಶಹರೇ।।6।। ವಿತರಸಿ ದಿಕ್ಷುರಣೇ ದಿಕ್ಪತಿ ಕಮನೀಯಂ। ದಶಮುಖ ಮೌಲಿಬಲಿಂ ರಮಣೀಯಮ್। ಕೇಶವ ಧೃತ-ರಘುಪತಿರೂಪ ಜಯ ಜಗದೀಶಹರೇ।।7।। ವಿಹಸಿ ವಪುಷಿ ವಿಶದೇ ವಸನಂ ಜಲದಾಭಂ। ಹಲಹತಿಭೀತಿ ಮಿಲಿತ ಯಮುನಾಭಂ ಕೇಶವ ಧೃತ ಹಲಧರರೂಪ ಜಯ ಜಗದೀಶಹರೇ।।8।। ನಿಂದಸಿ ಯಜ್ಞ ವಿದೇರಹಹ ಶ್ರುತಿಜಾತಮ್। ಸದಯ ಹೃದಯ ದರ್ಶಿತ ಪಶುಘಾತಮ್। ಕೇಶವ ಧೃತ ಬುದ್ಧಶರೀರ ಜಯ ಜಗದೀಶ ಹರೇ।।9।। ಮ್ಲೇಚ್ಛನಿವಹನಿಧನೇ ಕಲಯಸಿ ಕರವಾಲಂ। ಧೂಮಕೇತುಮಿವ ಕಿಮಪಿ ಕರಾಲಮ್। ಕೇಶವ ಧೃತ ಕಲ್ಕಿ ಶರೀರ ಜಯ

ಜಗದೀಶ ಹರೇ।।10।। ಶ್ರೀಜಯದೇವ ಕವೇರಿದಮುದಿತ ಮುದಾರಂ। ಶೃಣು ಸುಖದಂ ಶುಭದಂ ಭವಸಾರಮ್। ಕೇಶವ ಧೃತ ದಶವಿಧರೂಪಂ ಜಯ ಜಗದೀಶ ಹರೇ।।11।।

ನೀರೊಳು ಮುಳುಗಿ ಭಾರಪೊತ್ತು

ನೀರೊಳು ಮುಳುಗಿ ಭಾರಪೊತ್ತು ಧಾರುಣೀ ತಳವಗೆದು ಸಿಟ್ಟಿಲಿ ಕ್ರೂರನುದರವಸೀಳಿ ಕರುಳಿನ ಮಾಲೆ ಧರಿಸಿದರು ಪೋರವಿಪ್ರಕುಠಾರಿ ವನ ವನಚಾರಿ ಗೋಪ ದಿಗಂಬರಾಶ್ವವ ಏರಿ ಪೋದರು ಬಿಡೆನೊ ವೆಂಕಟ ಶೇಷಗಿರಿವಾಸನ।। ಜಯಜಯತು ಶಠಕೂರ್ಮರೂಪನೆ ಜಯಜಯತು ಕಿಟಿ ಸಿಂಹ ವಾಹನ ಜಯಜಯತು ಭೃುಗು ರಾಮ ರಘುಕುಲಸೋಮಶ್ರೀರಾಮ। ಜಯ ಜಯತು ಸಿರಿ ಯದುವರೇಣ್ಯನೆ ಜಯ ಜಯತು ಜನ ಮೋಹ ಬುದ್ಧನೆ। ಜಯಜಯತು ಕಲಿಕಲ್ಮಷಘ್ನನೆ ಕಲ್ಕಿನಾಮಕನೆ।।

ಮೀನ ಕೂರ್ಮ ವರಾಹ

ಮೀನ ಕೂರ್ಮ ವರಾಹ ನರಪಂಚಾ ನನಾಕುಳ ಶೌರ್ಯ ವಾಮನ। ರೇಣುಕಾತ್ಮಜ ರಾವಣಾದಿ ನಿಶಾಚರ ಧ್ವಂಸಿ। ಧೇನುಕಾಸುರ ಮಥನ ತ್ರಿಪುರವ ಹಾನಿಗೈಸಿದ ನಿಪುಣ ಕಲಿಮುಖ ದಾನವರ ಸಂಹರಿಸಿ ಧರ್ಮನಿ ಕಾಯ್ದ ಸುಜನರನು।। ವನಚರಾದ್ರಿ ಧರಾಧರನ ಜಯ ಮನುಜ ಮೃಗವರ ವೇಷ ಜಯ ವಾಮನ ತ್ರಿವಿಕ್ರಮದೇವ ಜಯ ಭೃಗುರಾಮ ಭೂಮಜಯ ಜನಕಜಾವಲ್ಲಭನೆಜಯ ರುಕ್ಮಿಣಿ ಮನೋರಥ ಸಿದ್ದಿದಾಯಕ ಜನ ವಿಮೋಚಕ ಕಲಿ ವಿದಾರಣ ಜಯಜಯಾರಮಣ।। ಮೀನಕೂರ್ಮಕ್ರೋಢ ನರಹರಿ ಮಾಣವಕ ಭೃಗುರಾಮ ದಶರಥ ಸೂನುಯಾದವ ಬುದ್ಧಕಲ್ಕೀಕಪಿಲವೈಕುಂಠ। ಶ್ರೀನಿವಾಸನು ವ್ಯಾಸಋುಷಭ ಹಯಾನನಾ ನಾರಾಯಣೀ ಹಂಸಾನಿರುದ್ದ ತ್ರಿವಿಕ್ರಮ ಶ್ರೀಧರ ಹೃಷೀಕೇಶ।।

ಆವನಂ ಪೂಜಿಸಲಿ ಶ್ರೀಹರಿಯೇ — ರಾಗ: ಕಾಮವರ್ಧಿನಿ

ಆವನಂ ಪೂಜಿಸಲಿ ಶ್ರೀಹರಿಯೇ। ಇನ್ನಾವನಂ ಪೂಜಿಸಲಿ ಆವನಂ ಭಜಿಸಲಿ। ಆವನಂ ಸ್ತುತಿಸಲಿ ಆವನಂ ಶ್ರೀ ವರಯಾದವ ದೇವ ದೇವೋತ್ತಮ।।ಪ।। ಮೀನವ ಪೂಜಿಸಲಾ। ಕಲ್ಲಾವಿಯ ನೀನೆಂದು ಪೂಜಿಸಲೆ। ಕಾನನ ಕ್ರೋಢನ ಧ್ಯಾನಮಾಡಲಾ। ಆ ನಾರಸಿಂಹನ ಸ್ಥಾನದಿ ಕಲ್ಪಿಸಿ।।1।। ವಟುವನ್ನು ಪೂಜಿಸಲಾ। ಪರಶುಧರ ಭಟನೆಂದು ಪೂಜಿಸಲೆ। ಅಟವಿಯೋಳ್ ಅಲೆದನ ದಿಟದಿ ಪೂಜಿಸಲೆ। ಹಟಮಾರಿ ಗೊಲ್ಲನ ಕಟಿಗೆ ದಾಮವ ಕಟ್ಟಿ।।2।। ಬತ್ತಲೆ ತಿರುಗುವನಾ। ಕುದುರೆಯನ್ನು ಹತ್ತಿ ಮೆರೆಯುವಾತನ। ನಿತ್ಯ ಪೂಜಿಸಲೇನು ಸತ್ಯದೇವರು ಎಂದು। ಪ್ರತ್ಯಕ್ಷ ಬಾ ಪ್ರತಿಭಾಂಕುರ ವಿಠಲಾ।।3।।

ಇಂಥಾವಗೆ ಹ್ಯಾಂಗೆ ಮನಸೋತೆ — ರಾಗ: ಅಭೇರಿ

ಇಂಥಾವಗೆ ಹ್ಯಾಂಗೆ ಮನಸೋತೇ। ಬಹು ಪಂಥವಾಡಿದೆ ಜಗನ್ಮಾತೆ।।ಪ।। ಸಂತತ ವ್ರಜದೊಳು ಪಾಲು ಬೆಣ್ಣೆಯಮೆದ್ದು। ಕಾಂತೆಯರ ಒಲಿಸಿದ ಕಂತು ಜನಕನಿಗೆ।।ಅ.ಪ।। ನೀರೊಳು ನಾರುವಮೈಯ್ಯ। ತೋರಿ ಬಿಚ್ಚಿ ನಡೆವ ಕಾಲುಕೈಯ್ಯ। ಕೋರೆಯ ಮಸೆಯುತ ಕೊಸರಿ ಕೊಂಡಸುರನ್ನ। ಉದರ ಬಗೆದಂಥ ಅದ್ಭುತ ಮಹಿಮಗೆ।।1।। ಬಡಬ್ರಾಹ್ಮಣನಾಗಿ ತಿರಿದ। ತನ್ನ ಹಡೆದ ತಾಯಿಯ ಶಿರತರಿದ। ಮಡದಿಗಾಗಿ ದೊಡ್ಡ ಅಡವಿಯೊಳ್ ಮನೆಕಟ್ಟಿ। ಬಿಡದೆ ಗೋಕುಲದೊಳು ಬೆಳೆಯುತಲಿದ್ದವಗೆ ।।2।। ಬೆತ್ತಲೆ ನಿಂತಿದ್ದನಾಗ। ತೇಜಿ ಹತ್ತಿ ಮೆರೆವನಿವಹಿಂಗ। ಉತ್ತಮ ಹೆಳವನ ಕಟ್ಟೆ ಶ್ರೀರಂಗನ। ಭಕ್ತವತ್ಸಲನೆಂದು ನೀ ಮರುಳಾದೆ।।3।।

ಬಿಡೆ ನಿನ್ನ ಪಾದವ ರಾಗ: ಕಲ್ಯಾಣಿ-ಅಟ್ಟತಾಳ

ಬಿಡೆ ನಿನ್ನ ಪಾದವ ಬಿಂಕವಿನ್ನೇಕೋ। ಕೊಡು ಮನದಿಷ್ಟವ ಕೋಪವಿದೇಕೋ।।ಪ।। ನೀರ ಪೊಕ್ಕರು ಬಿಡೆ ಬೆನ್ನಿನೊಳಗೆ ಬಹು। ಭಾರ ಪೊತ್ತೆನೆಂದರು ಬಿಡೆನು।। ಕೋರೆಯ ಮಸೆಯುತ ಕೊಸರಿಕೊಂಡರು ಬಿಡೆ। ಘೋರ ರೂಪವ ತಾಳಿ ಘುರಘುರಿಸಲು ನಾನು।।1।। ತಿರುಕನೆಂದರು ಬಿಡೆ। ತಿಳಿದು ತಾಯ ಕೊರಳ। ತರಿದೆನೆಂದರು ನಿನ್ನ ನಾ ಬಿಡೆನೊ।। ಪೊರೆಯೆ ಪಿತನ ವಾಕ್ಯ ಕಾಡ ಸೇರಲು ಬಿಡೆ। ಗರಳ ಮಡುವಿನಲ್ಲಿ ಧುಮುಕಿದರು ನಾನು।।2।। ಕಡು ಬತ್ತಲಾಗಿ ಕೈಲಿ ಕಾಸಿಲ್ಲೆಂದರು ಬಿಡೆ। ಒಡನೆ ಹಯವೇರಿ ಓಡಿದರು ಬಿಡೆನು। ಪೊಡವಿಯೊಳಗೆ ನಮ್ಮ ಪುರಂದರವಿಠಲನೆ। ಕಡೆ ಹಾಯಿಸುವ ಭಾರ ನಿನ್ನದದಕೆ ನಾನು।।3।।

ನೆಲದ ಮೇಲೆ ಈಸುವುದು ರಾಗ: ಕಲ್ಯಾಣಿ

ನೆಲದ ಮೇಲೆ ಈಸುವುದು ನೋಡಿದಿರಾ। ಮೀನಾವತಾರ ಮನುಕುಲೋದ್ಧಾರಕ ನನ್ನ ಕುವರ। ಬಯಲನ್ನೆಲ್ಲಾ ಬೆನ್ನಲಿ ಹೊತ್ತಿರುವುದು ನೋಡಿದಿರಾ। ಕೂರ್ಮಾವತಾರ। ವಂಶಾಧಾರಸ್ಥಂಭ ನನ್ನ ಕುವರ। ಮುಗಿಲನ್ನೇ ಮೊಗದಿಂದೆತ್ತಲು ಹವಣಿಸುವುದು ನೋಡಿದಿರಾ ವರಾಹಸ್ವಾಮಿ ಹೂಂಕರಿಸುವ ನನ್ನ ಕುವರ। ತನ್ನ ತಂದೆ ಬಸಿರನ್ನೇ ಬಗೆದು ಅವನ ಕರುಳಮಾಲೆಯನ್ನು ಧರಿಸುವ ವಿಚಿತ್ರ ನೃಸಿಂಹಸ್ವಾಮಿ ನೋಡಿದಿರಾ ಬಾಲಪ್ರಹ್ಲಾದ ನನ್ನ ಕುವರ।।1।। ತಾಯಿಯ ಮೇಲೆ ಕೈಎತ್ತಲು ಬಂದ ದಿಟ್ಟ ಪರಶುರಾಮನ ಕಂಡಿರಾ ಶಾಪಚಾಪ ಸವ್ಯಸಾಚಿ ನನ್ನ ಕುವರ। ಬೈರಾಗಿಗಳಲ್ಲಿ ರಾಗ ಹುಟ್ಟಿಸುವ ಭೋಗಿಗಳಿಗೆ ತ್ಯಾಗ ಬೋಧಿಸುವ ಕಂಡಿರಾ ನವೋನವ ಸುಂದರ ನನ್ನ ಕುವರ। ತಾಯಿತಂದೆಗಳ ಸೆರೆಬಿಡಿಸಿ ಗೀತೆಯ ಹಾಡುವ ಶ್ರೀಕೃಷ್ಣನ ಕಂಡಿರಾ ಲೀಲಾವತಾರಿ ನನ್ನ ಕುವರ।।2।। ಕಂಡಿರಾ ದಿಗಂಬರಮೂರ್ತಿ। ಬಾಲಬುದ್ಧದೇವ ಕೋಲಕುದುರೆಯನೇರುವ। ಕಲ್ಕಿಮ್ಲೇಚ್ಛ ಮೋಹವ ಕೊಂದು। ಪ್ರೇಮಧರ್ಮವ ಪ್ರತಿಷ್ಠಾಪಿಸುವ ನನ್ನ ಕುವರ।।3।।

ವಾರಿಧಿಯೊಳಗೆ ಓಡ್ಯಾಡಿ ನಾರುವುದೇನೋ (ಸುಳಾದಿ)

ವಾರಿಧಿಯೊಳಗೆ ಓಡ್ಯಾಡಿ ನಾರುವುದೇನೋ ಮಂದರವ ಹೊತ್ತು ನೀ ಧರನಾ (ಧರೆಯ?) ಹೊರುವುದೇನು ಊರು(ಉರ?) ಬಗೆದು ಕರುಳ್ಹಾರ ಹಾಕುವುದೇನು ದೂರ ಬೆಳೆದು ಸುಳ್ಳ (ಸುಳ್ಳೇ?) ಪೋರನೆನಿಪದೇನು ದೂರಾಗಿ ಜನನಿ ಕೊಂದ ಸ್ವಾರಸ್ಯಗಳೇನು ನಾರುಟ್ಯಾರಣ್ಯದಿ ನಾರಿ ಬಿಡುವುದೇನು ಅಪಾರ ಹೆಂಡರಿ ಸಂಸಾರ ಘೋರವಿದೇನು ಜಾರಾಗಿ ಜನಕೆ ಶರೀರ ತೋರುವುದೇನು ಕ್ರೂರ ಕಲಿಗಳ ನೀ ಸಂಹಾರ ಮಾಡುವುದೇನು ಧೀರ ನಮ್ಮೆದುರು ನಿಲ್ಲಬಾರದೇನು ಮಾರಜನಕ ಭೀಮೇಶಕೃಷ್ಣನೆ ಮರೆಯಾಗಿದ್ದರೇನೊ ಮರೆಯದಂತಿರೊ।।1।।

ಮೇಲುಕೋಟೆಯಲಿ ನೆಲಸಿರುವವನೆ ರಾಗ: ಮೋಹನ

ಮೇಲುಕೋಟೆಯಲಿ ನೆಲಸಿರುವವನೆ। ಮೋಹಕ ಚೆಲುವಿನ ಚಲುವರಾಯನೆ। ಕೌಸ್ತುಭಹಾರವ ಧರಿಸಿರುವವನೆ। ಶಂಖುಚಕ್ರಗಳ ಹಿಡಿದಿರುವವನೆ।। ರಂಗನಾಥನೇ ಸ್ವಾಮಿ ಜಯತು ಜಯನಿನಗೇ।।ಪ।। ಜಲಧಿಯೊಳಿಂದಾ ವೇದವ ಸಲಹೆ ಮತ್ಸ್ಯಾವತಾರವತಳೆದವನೇ। ದೇವದಾನವರು ಕಡಲಕಡೆಯೆ। ಕೂರ್ಮಾವತಾರಪಡೆದವನೇ।। ರಂಗನಾಥನೇ ಸ್ವಾಮಿ ಜಯತು ಜಯನಿನಗೇ।।1।। ಶ್ರೀಹರಿಕೇಶವ ಮುಕಂದ ಮಾಧವ। ಅಚ್ಚುತ ಅನಂತ ಗೋವಿಂದಾ। ರಕ್ಕಸ ನಿಂದಾ ಭೂಮಿಯ ಉಳಿಸೆ। ವರಾಹವೇಷದಿ ಬಂದವನೆ। ನಿನ್ನಿರುವಿಕೆಯೇ ಸುಳ್ಳೆಂದು ಖೂಳನ। ನಿಗ್ರಹಿಸಿದ ನರಸಿಂಹರೂಪನೆ।। ರಂಗನಾಥನೇ ಜಯನಿನಗೆ।।2।। ವಾಮನ ರೂಪವ ತಳೆದವನೆ। ಭೂಮ್ಯಾಕಾಶವ ಅಳೆದವನೇ। ಕ್ಷತ್ರಿಯರಾರ್ಭಟ ಅಳಿಸಿದ ವೀರನೆ। ಪರಶುಪಾಣಿಯ ಭಾರ್ಗವನೆ।।ರಂಗನಾಥನೇ... ಜಯನಿನಗೇ ।।3।। ಆಜ್ಞಾಪಾಲನೆ ಸಂಯಮ ತ್ಯಾಗಕೆ। ಆದರ್ಶ ನೆನಿಸಿಹ ರಘುರಾಮನೇ। ಗೀತೋಪದೇಶ ಜಗಕೆ ನೀಡಿದ। ಮಧುಸೂಧನನೇ ಮೇಘಶ್ಯಾಮನೆ।। ರಂಗನಾಥನೇ....ಜಯನಿನಗೇ।।4।। ಭ್ರಮೆಯನು ಗೆಲಿದ ಬುದ್ಧನಾದವನೆ। ಕಲ್ಕಿ

ಅವತಾರವತಳೆದವನೆ। ನಿನ್ನಯ ನಾಮವ ಜಪಿಸುವ ಭಕ್ತರ। ಸಕಲ ದುರಿತ ನಿವಾರಕನೇ।। ರಂಗನಾಥನೇ.... ಜಯನಿನಗೇ।।5।।

ಮತ್ಸ್ಯಾವತಾರನೇ ವೇದಗಳ ಪೊತ್ತವನೆ — ರಾಗ: ದುರ್ಗ

ಮತ್ಸ್ಯಾವತಾರನೇ ವೇದಗಳ ಪೊತ್ತವನೆ। ದೇವತೆಗಳ ಕಾಯ್ದನೇ ಭೂಪರೊಡೆಯಾ।।1।। ಕೂರ್ಮಾವತಾರನೇ। ಗಿರಿಯ ಪೊತ್ತವನೇ। ಶ್ರೇಷ್ಠರಾನಂದನೇ। ಸೃಷ್ಟಿಗೊಡೆಯಾ।।2।। ವರಾಹವತಾರನೇ। ಧರಣಿಜೆಯ ಕಾಯ್ದನೇ। ಕೋರದಾಡೆಯೊಳ್ ಸೀಳ್ದ। ಧೀರರೊಡೆಯಾ।।3।। ಕ್ರೂರ ನರಸಿಂಹನೇ। ಉದರವನು ಬಗೆದವನೇ। ಕಂದನ್ನಕಾಯ್ದನೇ। ಭಕ್ತರೊಡೆಯಾ।।4।। ವಾಮನಾವತಾರನೇ। ಭೂಮೀನೆ ಬೇಡ್ದವನೇ। ಬಲಿಯನ್ನು ತುಳಿದನೇ। ಪ್ರೀತಿಗೊಡೆಯಾ।।5।। ಬೌದ್ಧಾವತಾರನೇ। ಗಂಗೆಯಾ ತೀರದೊಳು। ವ್ರತಭಂಗಮಾಡ್ದನೇ ಬೆಟ್ಟದೊಡೆಯಾ।।6।। ರಾಮಾವತಾರನೇ। ರಾವಣನ ವಧಿಸಿದನೇ। ಕಾಂತೆಯಾ ಕಾಯ್ದನೇ। ಶಾಂತರೊಡೆಯಾ।।7।। ಕೃಷ್ಣಾವತಾರನೇ। ಕಂಸಮರ್ದನನೇ। ಭಕ್ತರನು ಕಾಯ್ದನೇ। ಮುಕ್ತಿಗೊಡೆಯಾ।।8।। ಭಾರ್ಗವತಾರನೇ ಕೊಡಲಿಯನು ಪಿಡಿದವನೇ। ತಾಯಿಯಾ ತರಿದನೇ। ಜಾಣರೊಡೆಯಾ।।9।। ಕಲ್ಕ್ಯಾವತಾರನೇ। ಹಯವನೇರಿದನೆ ರಾಹುತಾನಾದನೇ। ಶೂರರೊಡೆಯಾ।।10।। ನಿನ್ನ ಮಹಿಮೆಗಳನ್ನು ನೋಡಿ ಬೆರಗಾದೆ। ಸನ್ನುತಾಂಗನೆ ಸಿಟ್ಟು। ಮಾಡಲೀ ಬೇಡಾ। ಪ್ರೇಮದಲಿ ಸರಸ ತಾಂಬೂಲವನು ಕೊಡುವೇ। ಪಾಲಿಸೀ ಸ್ವೀಕರಿಸು ಗೋಪಾಲ ದೇವಕಿ ಬಾಲಾ।।11।।

ನೋಡಯ್ಯ ನಿನ್ನ ದಾಸರ ಮೇಲೆ — ರಾಗ: ಮೋಹನ

ನೋಡಯ್ಯ ನಿನ್ನ ದಾಸರ ಮೇಲೆ ಕೃಪೆಗಳನು। ಮಾಡಯ್ಯ ನಮ್ಮನಕೆ ಸಂತಸವನು।। ತೀಡಯ್ಯ ಭವಭಯದ ಪಾತಂಕಗಳದಾನ। ವಾಡದ ಗುಡ್ಡದ ತಿರುಮಲೇಶಿ ಸರ್ವೇಶ।।ಪ।।ಆದಿಯಲಿ ವೇದಗಳ ಕದ್ದು ಕೊಂಡೊಯ್ದವನ। ಸಾಧನಂಗೆಯ್ದನೆಂದಾಕ್ಷಣದೊಳ್। ಪೋದೆನೆನುತಶರ ನಿಧಿಯೊಳಗೆ ಪೊಕ್ಕು ಮತ್ತಾದಿತ್ಯನಕೊಂದು ತಿಕ್ಕಿಮುಕ್ಕಿ। ನೀದಯಪಾತ್ರವೆಂಬುದಕೇಳಿನಾನರಿತೆ। ಭೂಧರೆಯ ಸುರರ ನೀ ಸಲಹಲಾಗ। ಪೋದನಿಗಮಂಗಳನು ತಂದು ಸತಿರಕ್ಷಿಸೆ। ಆದಿ ಮತ್ಸ್ಯಾವತಾರಶರಣೆಂಬೆನು।।1।। ಅಮರ ದೈತ್ಯರು ಕೂಡಿ ಅಂಬುಧಿಯ ಕಡೆಯಲಿಕೇ ಕ್ರಮದಿ ಮಂದರಕೆ ಕಟ್ಟಿದ ಶೇಷನ। ತಮತಮಗೆ ಸಿಡಿದೆಳೆಯೆ ತಲ್ಲಣಿಸಿ ಫಣಿರಾಜ।ಸಮವಿಷವ ಕರ್ದೋಣೆಯನುಗುಳು ತಿರಲು। ಮಮಕಾರ ತತ್ವದಲಿ ಮತ್ತೊಂದು ರೂಪಾಗಿ। ಅಮಿತ ಗುಣಮೂರ್ತಿ ನೀನಂದು ಬೇರೆ।। ಸುಮತವನು ಬೆನ್ನಲ್ಲಿ ಸತೀ ಆತು ರಕ್ಷಿಸದೆ। ಕೂರ್ಮಮೂರುತಿ ನಿನಗೆ ಶರಣೆಂಬೆನು।।2।। ಚಿನ್ನಗಣ್ಣವನೆಂಬನೋರ್ವ ಖಳ ಭೂದೇವಿ। ಕನ್ನಿಕೆಯ ನೊಯ್ಯುತಿರೆ ಕದಲಿ ಮನದಿ।। ಇನ್ನು ಅವನನು ಸೆಣಸಿ ಜಯಿಸುವವರನುಕಾಣೆವೆನ್ನುತಲಿ ರೋಮಗಳನುಬ್ಬೆತ್ತುತ।। ತನ್ನ ಮುಂಗೋರೆಗಳ ಮಸೆದೊಡನೆ ರಕ್ಕಸನ ಬೆನ್ನಟ್ಟಿ ಬರಸೆಳೆದು ಸದೆದೊರಗಿಸಿ।। ಚೆನ್ನಾಗಿ ಧರಣಿಯನು ತಂದು ಸತಿರಕ್ಷಿಸಿದೆ। ಹನ್ನೆರಡು ಪೆಸರವನೆ ಶರಣೆಂಬೆನು।।3।। ಹೇಮ ಕಶ್ಯಪನೆಂಬ ನಾಮಜನ ಸುತನೋರ್ವ ನಾ ಮಹಾಫನವೆಂದು ನೆನೆಯುತಿರಲು।। ತಾಮಸದ ಬಳಿ ತನ್ನ ತನುಜನನು ಮಥಿಸುತಿರೆ। ರಾಮನನು ತೋರೆಂದು ಬಾಧಿಸುತಿರೆ। ಧೂಮಜ್ವಾತಿಗಳೊಡನೆ ಭುಗಿಭುಗಿಲು ಧಿಟಲೆನುತ। ಆ ಮಹಾರಕ್ಕಸನ ಪೊಡೆಯ ಸೀಳಿ।। ಪ್ರೇಮದಲಿ ಪ್ರಹ್ಲಾದಗೊಲಿದು ಪಟ್ಟಣವನಿತ್ತೆ। ಸಾಮಕಾರಿಯವದನ ಶರಣೆಂಬೆನು।।4।। ಬಲಿಯದ್ವಾರದ ಸಾಲೆಗೊಂದು ವೇಷವನಾಂತು। ಸಲೆಬಂದು ಧರೆಯ ಮೂರಡಿಯ ಬೇಟೆ।। ಒಲಿದು ಇತ್ತಪೆನೆನಲು ಧಾರೆಯನೆರೆಯಲಸುರ। ಕುಲಗುರುವು ಜುಳಿಗೆಯೊಳು ತಡೆದು ನಿಲಲು।। ಸಲಿಲವರ್ಜಿತ ನಯನನನು ಮಾಡಿ ಆಕಾರ ನೆಲವೆರಡು ಪಾದವನ್ನಳೆದ ಬಳಿಕ। ತಲೆಮೇಲೆ ಇರಿಸೆನಲು ತಳಕಿಳಿಸಿ ಅವನ ಬಾಗಿಲ ಕಾಯ್ದು ವಾಮನನೆ ಶರಣೆಂಬೆನು।।5।। ರೇಣುಕೆಯ ಬಸಿರಿನಲಿ ಜನಿಸಿ ಪಿತನಾಜ್ಞೆಯನು। ಮಾಣಬಾರದು ಎಂಬ ಮತವ ಪಿಡಿದು। ಕ್ಷಣವಿಲ್ಲದೆ ತಾಯ ಶಿರವರಿದು ತಂದೆಯನು। ಪ್ರಾಣಹತ್ಯವಮಾಡಿದವರ ಕುಲವನು। ಕ್ಷೇಣುಗೆರಗಿಸಿ ಕಾರ್ತವೀರ್ಯಾರ್ಜುನನಮಡುಹಿ।

ಜಾಣತನದಲ್ಲಿ ಭೂದಾನಗಳ ಭೂಸುರರ।। ಕಾಣುತಲೆ ಕರೆಕರೆದು ಕೊಟ್ಟೆಯ್ಯೆ ನೀನು ಪಬಾಣ ಜನಕನೆ ರಾಮ ಶರಣೆಂಬೆ।।6।। ಸೀತೆಯನ್ನು ಕದ್ದು ಒಯ್ದವನ ಕೊಲ್ಲುವ ಭರದಿ। ಭೂತಳದ ಕಪಿಗಳನ್ನು ಕೂಡಿಕೊಂಡು। ಸೇತುವೆಯ ಕಟ್ಟಿ ಶರನದಿ ದಾಟಿ ಬರಲಾಗ ಭೂತಸಂತತಿಯುನಡುನಡುಗುತಿರಲು।। ಚೇತನದ ರಾವಣೇಶ್ವರ ಕುಂಭಕರ್ಣ ಸತ್। ತ್ರಾತಿಶಯ ರಕ್ಕಸರ ಇರಿದೊರಗಿಸಿ।। ಮಾತು ಲಾಲಿಸಿ ವಿಭೀಷಣಗೆ ಪಟ್ಟವ ನಿತ್ತ ದಾತರಘುನಾಥನೇ ಶರಣೆಂಬೆನು।।7।। ಶಕಟ ಕುಕ್ಕಟ ಧೇನುಕಾಸುರರ ಪೂತನಿಯ। ಬಕವತ್ಸಹಕ ವೃಷಾಸುರಮುಖ್ಯರ। ಪ್ರಕಟದಿಂದರಿದು ಕರಿಯನು ಸೀಳಿ ತನಗೆ ಸಂಮುಖರಾದ ಮಲ್ಲರನ್ನು ಇರಿದೊರಗಿಸಿ।। ಮುಕುರದಂತ್ಯರ ಹರ್ಮ್ಯದೊಳಗಿಂದ ಕಂಸಕನ। ಪಕಪಕನೆ ತಿವಿದವನ ನಿರಿದೊರಗಿಸಿ। ಸಕಲವೆಸೆದಿರ್ದ ಮಥುರಾಪುರವ ಉಗ್ರಸೇನರಿಗಿತ್ತ ಕೃಷ್ಣನೇ ಶರಣೆಂಬೆನು।।8।। ಮೂರುಪುರದ ಸತಿಯರ ವ್ರತಗಳನೆ ಕೆಡಿಸಲಿಕ್ಕೆ। ಬೇರೊಂದು ಅಶ್ವತ್ಥವೃಕ್ಷವಾಗಿ।। ನಾರಿಯರ ವ್ರತಭಂಗಗೈಯಲಾದೆಸೆಯಿಂದ। ಊರುತ್ರಯವದು ತಿರುಗುವುದು ನಿಲ್ಲಲಾಗ।। ನೀರಮಸ್ತಕದಲ್ಲಿ ಧರಿಸಿದನ ಕರವಿಲ್ಲ। ನಾರಿಯೊಳು ನಾರಾಯಣಾಸ್ತ್ರವಾಗಿ। ಘೋರತನವೆತ್ತ ತ್ರಿಪುರದ ಕೀಲ ಪರಿದಮದ। ನಾರಿಸುಖ ಬುದ್ಧನೇ ಶರಣೆಂಬೆನು।।9।। ಮದವೆತ್ತ ರಕ್ಕಸರು ಮಹಿಯೊಳಗೆ ಹೆಚ್ಚಲು। ತ್ರಿದಶಾಂತ ಗಡಗಡನೆ ನಡಗುತಿರಲು। ಬೆದರ ಬೇಡೆನುತ ಅಭಯವನಿತ್ತು ಮುದದಿಂದ। ಸುಧೆಯೊಳಗೆ ಬಂದು ಜನಿಸಿ।। ಕುದುರೆವಾಹನನಾಗಿ ಕುಂಬನಿಯ ಮೇಲೆ ತನಗಿದಿರಾದ ರಾವುತರ ಸಿರಿದೊರಗಿಸಿ।। ಮೊದಲು ಭಾಕ್ಷಿಯನು ದಿವಿಜರಿಗಿತ್ತೆ ವೇಗದಲಿ। ಚದುರ ಕಲ್ಕ್ಯವತಾರ ಶರಣೆಂಬೆನು।।10।। ಇಂತುದಶ ಅವತಾರಗಳನೆತ್ತಿ ರಕ್ಕಸರ। ಸಂತತಿಯನೊರಸಿ ಭೂಭಾರವಿಳುಹಿ।। ಕಂತುಪಿತ ತಿರುವೆಂಗಳೇಶ ತಿರುಮಲೆಯೊಳಗೆ। ಚಿಂತಿಸುವ ಭಕ್ತರನು ಪಾಲಿಸುತಲಿ।। ದಂತಿರಾಜನ ಪೊರೆದು ದಾನವಾಡಿಗೆ ಬಂದು। ನಿಂತಾದಿಕೇಶವನೆ ಶರಣೆಂಬೆನು।।11।।

ವೇದತತಿಗಳ ಕದ್ದೊಯ್ದವನ ಕೊಂದು

ವೇದತತಿಗಳ ಕದ್ದೊಯ್ದವನ ಕೊಂದು ಪ್ರಳಯೋದಧಿಯೊಳಗೆ ಚರಿಸಿ। ಚರಿಸಿ ವೈವಸ್ವತನ ಕಾಯ್ದ ಮಹಾಮಹಿಮ ದಯವಾಗೊ।।1।। ಮಂದರಾದ್ರಿಯ ಧರಿಸಿ ಸಿಂಧುಮಥನವ ಮಾಡಿ ಬೃಂದಾರಕರಿಗೆ ಅಮೃತವ। ಅಮೃತವನುಣಿಸಿದ ಇಂದಿರಾರಾಧ್ಯ ದಯವಾಗೋ।।2।। ಸೋಮಪನ ನುಡಿಕೇಳಿ ಹೇಮಾಂಬಕನ ಕೊಂದು। ಭೂಮಿಯಾ ದಾಡಿಂದ ನೆಗಹಿದ ಸ್ವಾಮಿ ಭೂವರಹ ದಯವಾಗೊ।।3।।ಕಂದ ಕರೆಯಲು ಕಂಬದಿಂದುದಿಸಿ ರಕ್ಷಿಸಿದಿ ವಂದಿಸಿದ ಸುರರ ಸಲಹೀದಿ। ಸಲಹೀದಿ ನರಸಿಂಹ ತಂದೆ ನೀನೆಮಗೆ ದಯವಾಗೊ।।4।। ವೈರೋಚನಿಯ ಭೂಮಿ ಮೂರುಪಾದವ ಬೇಡಿ ಈರಡಿಯೋಳಗಳೆದ ಭೂ ವ್ಯೋಮ। ಭೂ ವ್ಯೋಮವಳೆದೆ ಭಾಗೀರಥಿಯ ಜನಕ ದಯವಾಗೊ।।5।। ಕುವಲಯಾಧೀಶ್ವರ ಬವರ ಮುಖದಲಿ ಕೊಂದೆ ಅವನಿಭಾರವ ನೀನಿಳುಹಿದೆ। ಇಳುಹಿದಾ ಸ್ವಾಮಿ ಭಾರ್ಗವರಾಮ ಎಮಗೆ ದಯವಾಗೊ।।6।। ಶತಧೃತಿಯ ನುಡಿಗೆ ದಶರಥನ ಗರ್ಭದಿ ಬಂದು ದಿತಿಜರನು ಸವರಿ ಸುಜನರ। ಸುಜನರ ಪೊರೆದ ರಘುಪತಿ ಎನಗೆ ದಯವಾಗೊ।।7।। ವಸುದೇವ ದೇವಕೀ ಬಸುರೀಲಿ ಜನಿಸಿದ ವಸುಧೆ ಭಾರವನು ಇಳಿಹಿದಿ। ಇಳುಹಿ ಪಾಂಡವರ ಕವಿಸಿದ ಶ್ರೀಕೃಷ್ಣ ದಯವಾಗೊ।।8।। ಜಿನನೆಂಬ ದನುಜ ಸಜ್ಜನ ಕರ್ಮವ ಮಾಡೆ ಜನಿಸಿ ಅವರಲ್ಲಿ ದುರ್ಬುದ್ಧಿ। ದುರ್ಬುದ್ಧಿ ಕವಿಸಿದ ವಿನುತ ಶ್ರೀ ಬುದ್ಧ ದಯವಾಗೊ।।9।। ಕಲಿ ವ್ಯಾಪಾರ ವೆಗ್ಗಳವಾಗೆ ತಿಳಿದು ಶಂಫಲಿ ಎಂಬ ಪುರದಿ ದ್ವಿಜನಲ್ಲಿ। ದ್ವಿಜನಲ್ಲಿ ಜನಿಸುವ ಕಲಿಮಲವ ಹರಿಸುವ ಕಲ್ಕಿ ದಯವಾಗೊ।।10।। ಧಾರುಣಿಯಲ್ಲಿ ಹತ್ತವತಾರದಲಿ ಸುಜನರ ರಕ್ಷಿಸಿದೆ ಜಗನ್ನಾಥ। ಜಗನ್ನಾಥವಿಠಲ ಮದ್ಭಾರ ನಿನ್ನದೊ ಮಧುವೈರಿ ।।11।।

ಇಂದು ನೋಡಿದೆ ಆನಂದತೀರ್ಥ

ಇಂದು ನೋಡಿದೆ ಆನಂದತೀರ್ಥಮು।ನೀಂದ್ರವಂದಿತ ಚರಣನಾ।।ಪ।। ವಂದಿಸುವ ಭಕುತರಿಗೆ ನಿತ್ಯಾ। ನಂದ ಫಲದ ಮುಕುಂದನಾ।।ಅ.ಪ।। ತಮನ ವೈರಿಯ ಮಂದಾರಾಪ್ರಿಯ ಕಮಠ ರೂಪದಿ ಪೊತ್ತನಾ ಕಮಲಸಂಭವ ಭವ ಹಿರಣ್ಯಕ

ದಮನ ವಾಮನ ಮೂರ್ತಿಯಾ॥1॥ ಭೂಮಿಪರ ಸಂಹರಿಸಿ ದಶರಥ ರಾಮನ ನಾಮದಿ ಮೆರೆದನಾ ಸೋಮಪಾಧಿಪ ಸುತನಿ ಗೊಂದು ಸಂಗ್ರಾಮದೊಳು ರಕ್ಷಿಸಿದನಾ॥2॥ ಬುದ್ಧ ರೂಪದಿ ತ್ರಿಪುರ ಸತಿಯರ ಬುದ್ಧಿ ಭೇದವ ಮಾಡ್ದಾನಾ ಯುದ್ಧದಲ್ಲಿ ಕಲಿ ಮುಖ್ಯ ದೈತ್ಯರ ಗೆದ್ದ ಗಾನವಿಲೋಲನ॥3॥ ದೇವಕಿ ವಸುದೇವ ತನಯನ ದೇವ ಗಣ ಸಂಸೇವ್ಯನ ಈ ವಸುಂಧರೆಯೊಳಗೆ ಮದ್ವಸ ರೋವರನಿವಾಸನಾ॥4॥ ಪೋತ ವೇಷನ ವೀತಶೋಕನ ಪೂತನಾದಿ ವಿಘಾತನ ಮಾತರೀಶ್ವಪ್ರಿಯ ಗುರು ಜಗನ್ನಾಥವಿಠ್ಠಲ ರಾಯನಾ॥5॥

ದೇವಿ ನಮ್ಮ ದ್ಯಾವರು ಬಂದವ್ರೆ

ದೇವಿ ನಮ್ಮ ದ್ಯಾವರು ಬಂದವ್ರೆ। ಬನ್ನಿರೆ ನೋಡ ಬನ್ನಿರೆ॥ಪ॥ ಕೆಂಗಣ್ಣ ಮೀನನಾಗಿ ನಮ್ಮ ರಂಗ। ಗುಂಗಾಡಿ ಸೋಮನ ಕೊಂದಾನ್ಮ್ಯಾಲ್॥ ಗುಂಗಾಡಿ ಸೋಮನ ಕೊಂದು। ವೇದವ ಬಂಗಾರದೊಡಲನಿಗಿತ್ತಾನ್ಮ್ಯಾಲ್॥1॥ ದೊಡ್ಡ ಮಡುವಿನೊಳಗೆ ನಮ್ಮ ರಂಗ।ಗುಡ್ಡದ ಹೊತ್ತುಕೊಂಡು ನಿಂತಾನ್ಮ್ಯಾಲ್। ಗುಡ್ಡವ ಹೊತ್ತುಕೊಂಡು ನಿಂತು। ಸುರರನ್ನು ದೊಡ್ಡವರನ್ನಾಗಿ ಮಾಡ್ಯಾನ್ಮ್ಯಾಲ್॥2॥ ಚೆನ್ನ ಕಾಡಿನ ಹಂದಿಯಾಗಿ ನಮ್ಮ ರಂಗ। ಚಿನ್ನದ ಕಣ್ಣಿನ ಕೊಂದಾನ್ಮ್ಯಾಲ್। ಚಿನ್ನದ ಕಣ್ಣಿನ ಕೊಂದುಭೂಮಿಯ। ವನಜ ಸಂಭನಿಗೆ ಇತ್ತಾನ್ಮ್ಯಾಲ್॥3॥ ಸಿಟ್ಟಲಿ ಸಿಂಹನಾಗಿ ನಮ್ಮ ರಂಗ। ಹೊಟ್ಟೆಯ ಕರುಳ ಬಗಿದಾನ್ಮ್ಯಾಲ್। ಹೊಟ್ಟೆಯ ಕರುಳ ಬಗಿದು ನಮ್ಮ ರಂಗ ಪುಟ್ಟಗೆ ವರವ ಕೊಟ್ಟಾನ್ಮ್ಯಾಲ್॥4॥ ಹುಡುಗ ಹಾರವನಾಗಿ ನಮ್ಮ ರಂಗ। ಬೆಡಗಿನ ಮುಗಿಲಿಗೆ ಬೆಳೆದಾನ್ಮ್ಯಾಲ್। ಬೆಡಗಿನ ಮುಗಿಲಿಗೆ ಬೆಳೆದು ಬಲಿಯನ್ನು ಅಡಿಯಿಂದ ಪಾತಾಳಕೊತ್ತಾನ್ಮ್ಯಾಲ್॥5॥ ತಾಯಿ ಮಾತನು ಕೇಳಿ ಸಾಸಿರ ತೋಳಿನ। ಆವಿನ ಕಳ್ಳನ ಕೊಂದನ್ಮ್ಯಾಲ್। ಆವಿನ ಕಳ್ಳನ ಕೊಂದು ನಮ್ಮ ರಂಗ। ಅವನಿ ಸುರರಿಗೆ ಇತ್ತಾನ್ಮ್ಯಾಲ್॥6॥ ಪಿಂಗಳ ಕಣ್ಣಿನ ಕೊಂಗಗಳ ಕೂಡಿ। ಛಂಗನೆ ಲಂಕೆಗೆ ಪೋದಾನ್ಮ್ಯಾಲ್। ಛಂಗನೆ ಲಂಕೆಗೆ ಪೋಗಿ ನಮ್ಮ ರಂಗ। ಹೆಂಗಸು ಕಳ್ಳನ ಕೊಂದನ್ಮ್ಯಾಲ್॥7॥ ಕರಿಯ ಹೊಳೆಯಯಲ್ಲಿ ತುರುಗವ ಕಾಯುತ। ಉರಗನ ಮಡುವ ಧುಮುಕ್ಯಾನ್ಮ್ಯಾಲ್। ಉರಗನ ಹೆಡೆಮೇಲೆ ಹಾರ್‍ಯಾರಿ ಕುಣಿವಾಗ। ಯಾರ್‍ಯಾರಿಗೇನೋ ಇತ್ತಾನ್ಮ್ಯಾಲ್॥8॥ ಭಂಡನಂದದಿ ಪುಂಡರೀಕಾಕ್ಷನು ಕಂಡ ಕಂಡಲ್ಲೇ ತಿರುಗ್ಯಾನ್ಮ್ಯಾಲ್। ಕಂಡ ಕಂಡಲ್ಲೇ ತಿರುಗಿ ತ್ರಿಪುರರ ಹೆಂಡಿರನೆಲ್ಲಾ ಕೆಡಿಸ್ಯಾನ್ಮ್ಯಾಲ್ ॥9॥ ಚೆಲುವ ಹೆಂಡತಿಯ ಕುದುರೆಯ ಮಾಡಿ। ಒಳ್ಳೇ ರಾವುತ ನಾದಾನ್ಮ್ಯಾಲ್। ಒಳ್ಳೆ ರಾವುತನಾಗಿ ಯವನರ। ಡೊಳ್ಳು ಹೊಟ್ಟೆಯ ಮೇಲೆ ಒದ್ದಾನ್ಮ್ಯಾಲ್ ॥10॥ ಡೊಳ್ಳಿನ ಮೇಲಕ್ಕೆ ಭರಮಪ್ಪ ಹಾಕ್ಯಾನ। ತಾಳವ ಶಿವಪ್ಪ ತಟ್ಟ್ಯಾನ್ಮ್ಯಾಲ್। ಒಳ್ಳೊಳ್ಳೆ ಪದಗಳ ಹನುಮಪ್ಪ ಹಾಡ್ಯಾನ। ಚೆಲುವ ಕನಕಪ್ಪ ಕುಣಿದಾನ್ಮ್ಯಾಲ್ ॥11॥

ಸೋಮಾಸುರನೆಂಬ ದೈತ್ಯ

ರಾಗ: ರೇವತಿ

ಸೋಮಾಸುರನೆಂಬ ದೈತ್ಯ। ನಾಮಕ ವೇದವನೊಯ್ಯಲಮ್ಮ। ಸೋಮಾಸುರನನ್ನು ಕೊಂದು। ಸಾಮಕವೇದವ ತಂದನಮ್ಮ॥1॥ ಗುಡ್ಡವು ಮುಳುಗಿ ಪೋಗಲು ನಮ್ಮ ದೇವ। ಗುಡ್ಡವ ಬೆನ್ನಲಿ ಪೊತ್ತನಮ್ಮ। ಗುಡ್ಡದಂತೆ ಅಸುರರನೆಲ್ಲ। ಅಡ್ಡಗೆಡಹಿ ಬಿಸುಟನಮ್ಮ॥2॥ ಚಿನ್ನಗಣ್ಣಿನವನು ಬಂದು। ಕನ್ನೆ ಹೆಣ್ಣನೊಯ್ಯಲಮ್ಮ॥ ವರ್ಣ ರೂಪವ ತಾಳಿ ಅಸುರನ। ಭಿನ್ನ ಭಿನ್ನವ ಬಗಿದನಮ್ಮ॥3॥ ಕಂಭದಿಂದಲಿ ಉದಿಸಿ ನಮ್ಮ ದೇವ। ಜಂಭದಸುರನ ಬಗಿದನಮ್ಮ॥ ನಂಬಿದ ಪ್ರಹ್ಲಾದನ ಕಾಯ್ದ। ಅಂಬುಜನಾಭ ನೃಸಿಂಹನಮ್ಮ॥4॥ ಬಲು ಮುರಡನ್ನಾಗಿ ಭೂಮಿಯ ಬಲಿಯ। ದಾನವ ಬೇಡಿದನಮ್ಮ ಇಳೆಯ ಈರಡಿ ಮಾಡಿ। ಬಲಿಯ ಪಾತಾಳಕ್ಕೊತ್ತಿದನಮ್ಮ॥5॥ ಕೊಡಲಿಯನ್ನು ಪಿಡಿದು ನಮ್ಮ ದೇವ। ಕಡಿದ ಕ್ಷತ್ರಿಯರನು। ಪಡೆದ ತಾಯ ಶಿರವ ತರಿದು। ಪಡೆದನಾಕೆಯ ಪ್ರಾಣನಮ್ಮ॥6॥ ಎಂಟೆರಡು ತಲೆಯಾದ ಸುರನ। ಕಂಠವಭೇದಿಸಿ ಬಿಸುಟನಮ್ಮ। ಒಂಟಿ ರೂಪವತಾಳಿ ಲಂಕೆಯ। ಬಂಟ ವಿಭೀಷಣ ಗಿತ್ತನಮ್ಮ॥7।ಸೋಳ ಸಾಸಿರ ಗೋಪಿಯರೊಡನೆ। ಕೇಳಿ ಮೇಳದೊಳಿಪ್ಪನಮ್ಮ। ಬಾಲಕನಾಗಿ ತನ್ನ ರೂಪದಲಿ ಶ್ರೀಲೋಲ ಲಕ್ಷುಮಿರಮಣ ನಮ್ಮ॥8॥ ಒಪ್ಪದಿಂದಲಿ ಬಂದು ನಮ್ಮ ದೇವ। ಇಪ್ಪೆವನದೊಳಗಿಪ್ಪನಮ್ಮ।

ಸರ್ಪಶರನ್ನಾಗಿ ಪೋಗಿ। ತ್ರಿಪುರ ಸಂಹಾರ ಮಾಡಿದ ನಮ್ಮ ।।9।। ಯಲಮ ಯಲಮ ಯಲಮ ದೇವ ಬಲ್ಲಿದ ಕಲ್ಕ್ಯಾವತಾರನಮ್ಮ। ಇಳೆಯ ಸ್ವರ್ಗ ಪಾತಾಳಕೊಡೆಯ ಚೆಲುವ ಶ್ರೀ ಹಯವದನನಮ್ಮ ।।10।।

ಕೋಲು ಕೋಲೆನ್ನ ಕೋಲೆ (ಕೋಲಾಟ) ರಾಗ: ಶುದ್ಧಸಾವೇರಿ

ಕೋಲು ಕೋಲೆನ್ನ ಕೋಲೆ। ಕೋಲು ಕೋಲೆನ್ನ ಕೋಲೇ। ಕೋಲು ಶ್ರೀ ಹರಿಯ ಬಲಗೊಂಡು ಕೋಲೆ।।ಪ।। ಶಿಕ್ಷಿಸಿ ನಿಗಮ ಚೋರ ರಾಕ್ಷಸನ ಕೊಂದು ರಕ್ಷಿಸಿ ವೇದವನುಳುಹಿದ ಕೋಲೆ ರಕ್ಷಿಸಿ ವೇದವನುಳುಹಿದ ಕ್ಷಿತಿಯೊಳು ಮತ್ಸ್ಯಾವತಾರನ ಬಲಗೊಂಬೆ ಕೋಲೆ।।1।। ಧರ್ಮ ನಡೆಯಲಾಗಿ ಮರ್ಮವ ತಾಳಿದ ಕರ್ಮ ಹರ ಶ್ರೀ ಮೂರ್ತಿಯ ಕೋಲೆ। ಕರ್ಮಹರ ಶ್ರೀ ಮೂರ್ತಿಯ ಧರೆಪೊತ್ತ ಕೂರ್ಮಾವತಾರನ ಬಲಗೊಂಬೆ ಕೋಲೆ।।2।। ಧರೆಯ ಕದ್ದ ನರನ ಕೋರೆದಾಡಿಂದ ಸೀಳಿ ಹೊರೆ ಹೊಯ್ದಾಡಿದಾ ನರಹರಿ ಕೋಲೆ। ಹೊರೆ ಹೊಯ್ದಾಡಿದಾ ನರಹರಿ ಧರೆಗೆದ್ದ ವರಾಹಾವತಾರನ ಬಲಗೊಂಬೆ ಕೋಲೆ।।3।। ತರಳ ಪ್ರಹ್ಲಾದಗಾಗಿ ದುರುಳ ದೈತ್ಯನ ಕೊಂದು ಕರುಳು ವನಮಾಲೆಯ ಧರಿಸಿದ ಕೋಲೆ। ಕರುಳು ವನಮಾಲೆಯ ಧರಿಸಿದ ನರಹರಿ ನರಸಿಂಹಾವತಾರನ ಬಲಗೊಂಬೆ ಕೋಲೆ।।4।। ನೇಮಿಸಿ ಮೂರು ಪಾದ ಭೂಮಿಯ ಬೇಡಿದ ಹೆಮ್ಮೆಯ ತಾ ಪರಿಹರಿಸಿದ ಕೋಲೆ। ಹೆಮ್ಮೆಯ ತಾ ಪರಿಹರಿಸಿದ ಬ್ರಾಹ್ಮಣನಾಗಿ ವಾಮನವತಾರನ ಬಲಗೊಂಬೆ ಕೋಲೆ।।5।। ಆಜ್ಞೆಯ ಮೀರದೆ ಜನನಿಯಾ ಶಿರ ಶೀಘ್ರದಿಂದಲಿ ಇಳುಹಿದ ಕೋಲೆ। ಶೀಘ್ರದಿಂದಲಿ ಇಳುಹಿದ ಶಿರವನು ಭಾರ್ಗವ ರಾಮನ ಬಲಗೊಂಬೆ ಕೋಲೆ।।6।। ಕಾಮದಿ ಸೀತೆಯನೊಯ್ದ ತಾಮಸದವನ ಕೊಂದು ನೇಮವ ಸ್ಥಾಪಿಸಿದಾ ಇಳೆಯೊಳು ಕೋಲೆ। ನೇಮ ಸ್ಥಾಪಿಸಿದ ಇಳೆಯೊಳು ಶ್ಯಾಮವರ್ಣ ರಾಮಾವತಾರನ ಬಲಗೊಂಬೆ ಕೋಲೆ।।7।। ದುಷ್ಟ ದೈತ್ಯರನೆಲ್ಲ ಕುಟ್ಟಿ ಮಡುಹಿದ ನೆಟ್ಟನೆ ಎತ್ತಿದ ಗಿರಿಯನು ಕೋಲೆ। ನೆಟ್ಟನೆ ಎತ್ತಿದ ಗಿರಿಯನು ಬೆಟ್ಟಲಿ ಕೃಷ್ಣಾವತಾರನ ಬಲಗೊಂಬೆ ಕೋಲೆ।।8।। ಕದ್ದು ತ್ರಿಪುರವ ಪೊಕ್ಕು ಇದ್ದ ಸತಿಯರ ವ್ರತಸಿದ್ಧಿಯ ತಾನು ಅಳಿದನು ಕೋಲೆ। ಸಿದ್ಧಿಯ ತಾನು ಅಳಿದನು ಭುವಿಯಲಿ ಬೌದ್ಧಾವತಾರನ ಬಲಗೊಂಬೆ ಕೋಲೆ।।9।। ಮಲ್ಲ ಮಾನ್ಯರನೆಲ್ಲ ಹಲ್ಲು ಮುರಿಯಲಾಗಿ ನಲ್ಲಾ ತೇಜಿಯನೇರಿದಾ ಕೋಲೆ। ನಲ್ಲಾ ತೇಜಿಯನೇರಿದ ಬಾಲ್ಯನಾಗಿ ಕಲ್ಕ್ಯಾವತಾರ ಬಲಗೊಂಬೆ ಕೋಲೆ।।10।। ವಸ್ತು ಪರಾತ್ಪರ ವಿಸ್ತಾರ ತೋರಲಾಗಿ। ಹತ್ತಾವತಾರ ಧರಿಸಿದ ಕೋಲೆ। ಹತ್ತವಾತಾರ ಧರಿಸಿದ ಮಹೀಪತಿ। ಅಂತರಾತ್ಮನ ಬಲಗೊಂಬೆ ಕೋಲೆ।।11।।

ಶೋಭಾನವೆನ್ನಿರೆ ಸರ್ವಜ್ಞ ಹರಿಗೆ

ಶೋಭಾನವೆನ್ನಿರೆ ಸರ್ವಜ್ಞ ಹರಿಗೆ। ಶೋಭಾನವೆನ್ನಿ ಸಕಲಗುಣನಿಧಿಗೆ।। ಶೋಭಾನವೆನ್ನಿ ಸಮೀರನ ಪಿತನಿಗೆ। ಶೋಭಾನ ವೇನ್ನಿಸರೋಜ ಸದನೆಯ ಮನೋಭಿರಾಮನಿಗೆ ಶುಭವೆನ್ನಿ।।ಪ।। ಶಬರವೇಷದವಗೆ ಕಪಟಕಮಠನಿಗೆ। ತಪನಿಯಾಂಬಕನ ಅಪಹರಿಸಿದವಗೆ। ಕೃಪಣಪ್ರಹ್ಲಾದನ ವಿಪದಕಳೆದಗೆ-ಶಿಬಿಯಕರದಿ ಬಲು ವಪುವ ಬಿಗಿಸಿದಗೆ। ಚಪಲಾಕ್ಷೇರಾರುತೀ ಬೆಳಗೀರೇ।।1।। ಕೊಡಲಿಕೋದಂಡವಪಿಡಿದ ಪಂಡಿತಗೇ। ಕಡಲಕಟ್ಟಿಸಿ ಖಳರೊಡಲ ಬಗೆದಗೆ। ಮಡುವಿನೊಳಗೆ ಫಣಿಪೆಡೆಯ ತುಳಿದಗೆ। ಮೃಡನ ಗೆಲಿಸಿಕೀರ್ತಿ ಒಡನೆ ತಂದಿತ್ತಗೆ।।2।। ಹರಿಗೆ ಸುರಿಗಿ ಪಿಡಿದರವಿಂದಾಂಬಕಗೆ -ಶರಧಿಯೊಳಾದ್ಗೆಗೆ ಗಿರಿಮಹಿಧರಗೆ ನರಹರಿರೂಪಗೆ। ಧರಣಿಯಾಳ್ದಗೆ ಧುರದೋಳುರಾಯರ ತರಿದ ಸಮರ್ಥಗೆ। ಹರದೇರಾರತಿಯ ಬೆಳಗಿರೆ।।3।। ದಶರಥ ತನಯಗೆ ವಸುದೇವ ಸುತಗೆ-ವಸನ ವಿಹೀನಗೆ ಅಸುರ ಭಂಜನಗೆ। ಝುಷಕೂರ್ಮರೂಪಿಗೆ ವಸುಧಿ ವಾಹಕಗೆ ಋಷಿಮುನಿಕಶ್ಯಪಗೆ ಹೆಬ್ಬಸುರ ಬಗೆದವಗೆ। ಶಶಿಮುಖಿಯರಾರುತಿಯ ಬೆಳಗಿರೆ।।4।। ವಟು ಭೃಗುರಾಮಗೆ ಜಟಿಲಮಸ್ತಕಗೆ-ಕಠಿಣಕಂಸನತಳ ಪಟವ ಮಾಡಿದಗೆ। ವಟಪತ್ರಶಯನ ನಿಷ್ಕುಟಿಲ ಜಗನ್ನಾಥವಿಠಲಾಗಾರುತಿಯ ಬೆಳಗಿರೆ।।ಶೋಭಾನವೆನ್ನಿರೆ ಸರ್ವಜ್ಞಹರಿಗೆ।।5।।

ಸಂವಾದ

ಹರನ ರಾಣಿ ಒಂದು ದಿವಸ ಪರಮ ರಾಗ: ಶಂಕರಾಭರಣ

ಹರನ ರಾಣಿ ಒಂದು ದಿವಸ ಪರಮ ಹರುಷದಿ। ಹರಿಯಸತಿಯ ದರುಶನಕೆ ಬಂದಳಾಗಲೇ। ಕರೆದು ತಂದು ಸಿಂಹಾಸನದ ಮೇಲೆ ಕುಳ್ಳಿರಿಸಿ। ಮಧುರವಾಕ್ಯದಿಂದ ಮಾತನಾಡುತಿದ್ದರು॥1॥ ಭಾಮಕಿನ್ನರಳೆ ಕಪ್ಪಿನ ಮೈಯವನ್ಯಾತರ ಚೆಲುವನೆ। ಮೂರು ಜಟೆಯ ಜಂಗಮಕಿಂತ ಉತ್ತಮನಲ್ಲವೆ॥2॥ ಮುದ್ರೆಯನ್ನು ಫಣೆಯ ಮೇಲೆ ಹೇಗೆ ಇಡುವಿರೆ। ಮೂರು ಬೆರಳ ಬೂದಿಯನ್ನು ಹೇಗೆ ಬಳಿವಿರೆ॥3॥ (ಮತ್ಸ್ಯ) ಶರಧಿಯಲ್ಲಿ ವಾಸನಿಮಗೆ ಮನೆಗಳಿಲ್ಲವೆ। ಅಡವಿ ಅಡವಿ ತಿರುಗೋದಕ್ಕಿಂತ ಲೇಸು ಅಲ್ಲವೇ॥4॥ (ಕೂರ್ಮ) ಬೆಟ್ಟವನು ಬೆನ್ನಿನ ಮೇಲೆ ಹೇಗೆ ಇಡುವಿರೇ। ಶಿರಸಿನಲ್ಲಿ ಗಂಗೆ ಪೊತ್ತು ಹೇಗೆ ಬಾಳುವಿರೆ॥5॥ (ವರಾಹ) ಘೋರಕರಡಿ ವರಾಹ ನಿಮಗೆ ಬಂಧುಗಳಲ್ಲವೇ। ಕೂಡೆತಿರುಗುವ ಭೂತಗಣಗಳು ನಿಮ್ಮ ನೆಂಟರಲ್ಲವೆ॥6॥ (ನರಸಿಂಹ) ಮುತ್ತಿನ ಮಾಲೆಗಿಂತ ಕರುಳು ಮಾಲೆ ಚೆಂದವೆ। ಒಪ್ಪುವ ದೇನೆ ರುಂಡಮಾಲೆ ಯಾವದಂದವೆ॥7॥ (ವಾಮನ) ಮೂರು ಹೆಜ್ಜೆ ಭೂಮಿಯನ್ನು ಹೇಗೆ ಬೇಡುವಿರೇ। ಹೇಳಬಾರದ ಭೂಮಿಮೇಲೆ ಹೇಗೆ ಬಾಳುವಿರೆ॥8॥ (ಪರಶುರಾಮ) ಹೆತ್ತ ತಾಯಿಯ ಶಿರವನ್ನು ಹೇಗೆ ತರಿವಿರೇ। ಹೆತ್ತ ಮಕ್ಕಳು ತಂದೆ ಮುನಿವೋದ್ಯಾವುದಂದವೆ॥9॥ (ರಾಮ) ಅಡವಿಯಲ್ಲಿ ಹಣ್ಣ ಹಂಪಲು ಹೇಗೆ ಮೆಲುವಿರೆ। ತಲೆಯ ಓಡಿನಲ್ಲಿ ಭಿಕ್ಷೆ ಹೇಗೆ ಬೇಡುವಿರೆ॥10॥ (ಕೃಷ್ಣ) ಗೋಕುಲದಲ್ಲಿ ಬೆಣ್ಣೆಯನ್ನು ಹೇಗೆ ಕದಿವಿರೆ। ಕದ್ದ ಕಳ್ಳಗೆ ಶರಣೆಂದು ಕೈಯ್ಯ ಮುಗಿವಿರೆ॥11॥ (ಬೌದ್ಧ) ಬೆತ್ತಲೆಯಾಗಿ ಇರಲಿಕ್ಕೆ ನಾಚಿಕೆ ಇಲ್ಲವೇ। ಸತ್ತ ಹುಲಿಯ ಚರ್ಮ ಹೊದಿಲಿಕ್ಹೇಸಿಗೆ ಇಲ್ಲವೇ॥12॥ (ಕಲ್ಕಿ) ಉತ್ತಮ ತೇಜಿ ಇರಲು ಹದ್ದನೇರುವಿರೆ। ಉಳುವ ಎತ್ತಿನ ಮೇಲೆ ಕುಳಿತು ಹೇಗೆ ಬಾಳುವಿರೇ॥13॥ ಹರಿಯುಹರನು ಸಮನೆಂದು ತಿಳಿಯಬೇಡಿರೆ। ಹರನಿಗಿಂತ ಪುರಂದರವಿಠಲ ಅಧಿಕನಲ್ಲವೇ॥15॥

ಮೂರು ಜಗವ ಕುಣಿಸುವಂಥ ಗಾರುಡಿಗ

ಮೂರು ಜಗವ ಕುಣಿಸುವಂಥ ಗಾರುಡಿಗ ಇವ ದಾರಕ್ಕ ನಾರಾಯಣನಲ್ಲವೇನೆ ಕೇಳೆ ತಂಗಿ॥ಪ॥ ವಾರಿಧಿಯೊಳಾಡುವ ವಿಚಾರ ಮಾಡೆ ಅಕ್ಕ। ಧೀರ ಬಲುಗಂಭೀರ ಮತ್ಸ್ಯವತಾರ ಕಾಣೆತಂಗಿ॥1॥ ಹತ್ತೂ ನಾಲ್ಕು ರತ್ನವ ತೆಗೆದು ಮತ್ತೆ ಇವ ದಾರಕ್ಕ। ರತ್ನಕುಂಚದ ಹೇಮಗಿರಿಯನೆತ್ತಿದ ಕೂರ್ಮ ಕಾಣೆ ತಂಗಿ॥2॥ ಧರಣೆಯ ಸುರುಳಿ ಸುತ್ತಿದಂಥ ಅರಸ ಇವ ದಾರಕ್ಕ। ಅರಿಯದ ಭಕ್ತರ ಮೊರೆಗೊಡುವ ವರಾಹ ಕಾಣೆ ತಂಗಿ॥3॥ ನಂಬಿದವರ ಕಂಬದೊಳು ಎಂಬೆ ಇವ ದಾರಕ್ಕ। ರಂಭೆ ಹೇಮದ ಬೊಂಬೆ ನರಸಿಂಹ ಕಾಣೆ ತಂಗಿ॥4॥ ಕದ್ದು ಅಡ್ಡಬಿದ್ದನ ಕಣ್ಣ ಇರಿದ ಇವ ದಾರಕ್ಕ। ಮುದ್ದು ಮುಖದ ಪ್ರಸನ್ನನಾದ ವಾಮನ ಕಾಣೆ ತಂಗಿ॥5॥ ಆ ಮಾತೃ ದ್ರೋಹವ ಮಾಡಿದವ ಇವ ದಾರಕ್ಕ ಶಾಮ ಸಾರ್ವಭೌಮ ಪರಶುರಾಮ ಕಾಣೆ ತಂಗಿ॥6॥ ಕಾಮಿನಿಯ ಪೋಗಿ ತಂದ ಭೀಮ ಇವ ದಾರಕ್ಕ। ಕಾಮಿತಾರ್ಥವನೀವ ಶ್ರೀರಾಮ ಕಾಣೆತಂಗಿ॥7॥ ಗೊಲ್ಲತೇರ ಗಲ್ಲವ ಪಿಡಿದು ಚೆಲುವ ಇವದಾರಕ್ಕ। ಬಲ್ಲಿದ ಮಲ್ಲರ ಮರ್ದಿಸಿದಂಥ ಕಳ್ಳ ಕೃಷ್ಣ ಕಾಣೆ ತಂಗಿ॥8॥ ತ್ರಿಪುರದೊಳು ಚಪಲಾಕ್ಷಿಯರ ವಿಪರೀತವ ಮಾಡಿದನಕ್ಕ ಅಪರಿಮಿತ ಮಹಿಮನಿವ ಚಪಲ ಬೌದ್ಧ ಕಾಣೆ ತಂಗಿ॥9॥ ಕುದುರೆಯೇರಿ ಎದುರಿಗೆ ಬರುವ ಚದುರ ಇವ ದಾರಕ್ಕ। ಮಧುವನಿಕ್ಕಿದ ಮಧುರಾ ಪುರದ ಚದುರ ಕಲ್ಕಿ ಕಾಣೆ ತಂಗಿ॥10॥ ಇಂದುವದನ ಮೂರ್ತಿ ಗೋವಿಂದ ಇವದಾರಕ್ಕ। ನಂದನ ಕಂದ ಹೆಳವನ ಕಟ್ಟೆ ರಂಗ ಕಾಣೆತಂಗಿ॥11॥

ನಾರಾಯಣ ನಾರಾಯಣ.. ನಾರಾಯಣನ್ಯಾರೇ ಪೇಳೇ ರಾಗ: ಮೋಹನ-ಆದಿತಾಳ

ನಾರಾಯಣ ನಾರಾಯಣ ನಾರಾಯಣ ನಾರಾಯಣ। ನಾರಾಯಣನ್ಯಾರೇ ಪೇಳೇ ಸಖೀ(2)॥ಪ॥ ಕ್ಷೀರಸಾಗರದಲ್ಲಿ ಶಯನವ ಮಾಡಿದ। ಆದಿನಾರಾಯಣನ ನೋಡೆ ಸಖೀ। ಆಹಾ ಆದಿನಾರಾಯಣ ಚಂದ್ರಮುಖೀ॥ಅ.ಪ॥ ಕಾಲಿಲ್ಲದಲೆ ಓಡಿ ಎವೆಯಿಕ್ಕದಲೇ ನೋಡಿ। ಮಿಂಚಿನಂತ್ಹೊಳೆಯುವನ್ಯಾರೇ ಸಖೀ। ವೇದವ ತಂದು ಸುರರಿಗೆ

ಕೊಟ್ಟಂಥ। ಮತ್ಸ್ಯಾವತಾರನ್ನ ನೋಡೇ ಸಖೀ। ಆಹಾ ಮತ್ಸ್ಯಾವತಾರನೇ ಇಂದುಮುಖೀ॥1॥ ತಲೆಯ ತಗ್ಗಿಸುವೆನು ಕಡಲೊಳು ಆಡುವೆ। ಕಡೆದರೆ ಕಡಗೋಲನ್ಯಾರೇ ಸಖೀ। ಸುರರು ದೈತ್ಯರು ಕೂಡಿ ಶರಧಿಯ ಮಥಿಸಲು। ಕೂರ್ಮಾವತಾರಾನೆ ಇಂದುಮುಖಿ...॥2॥ ಮೋರೆತಗ್ಗಿಸುವೆನು ವೇದವನೋದುವೆ। ಕೋರೆ ದಾಡೆಯವನ್ಯಾರೇ ಹೇಳೇ ಸಖಿ। ದುರುಳನ್ನ ಕೊಂದು ಧರಣಿಯ ತಂದಂಥ। ವರಾಹಾವತಾರನೇ ವಾರಿಜಾಕ್ಷಿ...॥3।. ಕಂಬದಿಂದಲಿ ಬಂದು ಕರುಳನ್ನು ಬಗೆದು। ಕೊರಳೊಳು ಹಾಕಿದವನ್ಯಾರೇ ಸಖೀ। ನರಮೃಗರೂಪದಿ ಉದರವ ಸೀಳಿದ। ನಾರಸಿಂಹನ ರೂಪ ನೋಡೇ ಸಖೀ॥4॥ ಪುಟ್ಟ ಪಾದದಿಂದ ಸೃಷ್ಟಿಯನಳೆದ। ದಿಟ್ಟ ಬ್ರಹ್ಮಚಾರಿ ಯಾರೇ ಸಖೀ। ಕೊಟ್ಟಿದ್ದು ಸಾಲದೆ ಮೆಟ್ಟಿದ ಶಿರವನ್ನು। ಪುಟ್ಟ ವಾಮನ ರೂಪ ನೋಡೇಸಖೀ॥5॥ ಕೋಪದಿಂದಲಿ ಬಂದು ಕೊಡಲಿಯನ್ನೇಪಿಡಿದು। ಕುಲವನ್ನೇ ಸವರಿದವನ್ಯಾರೇ ಸಖೀ। ರಕ್ತದೊಳಗೆ ಸ್ನಾನ-ತರ್ಪಣ ಮಾಡಿದ। ವಿಪ್ರಭಾರ್ಗವ ರಾಮ ನೋಡೇಸಖೀ॥6॥ ಶೀಘ್ರದಿಂದಲೀ ಬಂದು ಶಬರಿಯಂಜಲನುಂಡು। ಸೇತುವೆ ಕಟ್ಟಿದವನ್ಯಾರೇ ಸಖೀ । ಕೌಸಲ್ಯೆಯುದರದಿ ಶಿಶುವಾಗಿ ಜನಿಸಿದ। ದಶರಥರಾಮನ್ನ ನೋಡೇಸಖೀ। ಆಹಾ ಶ್ರೀರಾಮಾವತಾರ ಚಂದ್ರಮುಖೀ ॥7॥ ಬ್ರಹ್ಮಾಂಡದೊಳಗೆಲ್ಲ ಬಂಡಿಯ ಹೊಡೆದೋನು। ಪಾರ್ಥಸಾರಥಿ ಇವನ್ಯಾರೇ ಸಖೀ। ಮಥುರೆಯಲ್ಲಿ ಹುಟ್ಟಿ ಗೋಕುಲದಿ ಬೆಳೆದ। ಗೋಪಾಲಕೃಷ್ಣನ ನೋಡೇ ಸಖೀ। ಆಹಾ ಕೃಷ್ಣಾವತಾರ ಚಂದ್ರಮುಖೀ॥8॥ ಮರೆಯೊಳಗೆ ನಿಂತು ಮಾನವ ಕಾಯ್ದಂಥಾ। ಮಾಧವ ಇವನ್ಯಾರೇ ಹೇಳೇಸಖಿ। ತ್ರಿಪುರರ ಸತಿಯರ ವ್ರತಭಂಗ ಮಾಡಿದ। ಬೌದ್ಧಾವತಾರನೇ ಚಂದ್ರಮುಖೀ॥9॥ ಹಯವನೇರಿ ಬಂದು ಧರಣಿಯೆಲ್ಲಾ ತಿರುಗಿ। ಗಿರಿಯಲ್ಲಿ ನಿಂತವನ್ಯಾರೇ ಸಖೀ। ವೇದಾಂತ ವೇದ್ಯ ಶ್ರೀಪುರಂದರ ವಿಠಲನ್ನ। ಲಕ್ಷ್ಮೀರಮಣನ್ನ ನೋಡೇ ಸಖೀ॥10॥

ನೀಲವರ್ಣ ನಿರುಪಮ — ರಾಗ: ಮೋಹನ

ನೀಲವರ್ಣ ನಿರುಪಮ ಶ್ರೀಲೋಲನಲ್ಲೆ ಭಾಮೆ। ಅವಲೋಲನಲ್ಲೆ ಭಾಮೆ॥ ಲೋಲನೋ ಬಾಲನೋ ಗೋಪಾಲನೋ ನಾನರಿಯೆ॥ಪ॥ ಇಂದು ತಮವ ಕೊಂದು ವೇದವ ತಂದನಲ್ಲೇ ಭಾಮೆ। ಅವ ತಂದನಲ್ಲೇ ಭಾಮೆ। ತಂದವನೋ ಬಂದವನೋ। ಆದರಂದವನು ನಾನರಿಯೇ॥1॥ ಅರ್ಥಿಯಿಂದಲಿ ಗಿರಿಯ ಬೆನ್ನಲಿ ಪೊತ್ತವನಲ್ಲೆ ಭಾಮೆ। ಅವ ಪೊತ್ತವನಲ್ಲೆ ಭಾಮೆ। ಪೊತ್ತವನೋ ಲೆತ್ತವನೋ ಆದರರ್ಥವನು ನಾನರಿಯೇ॥2॥ ಭೂಮಿ ಚೋರನ ಕೊಂದ ವರಾಹಸ್ವಾಮಿಯಲ್ಲೆ ಭಾಮೆ ಅವ ಸ್ವಾಮಿಯಲ್ಲೆ ಭಾಮೆ। ಸ್ವಾಮಿಯೋ ಪ್ರೇಮಿಯೋ ಬಹು ಕಾಮಿಯೋ ನಾನರಿಯೇ॥3॥ ತರಳ ಪ್ರಹ್ಲಾದನಿಗೊಲಿದ ನರಹರಿಯಲ್ಲೇ ಭಾಮೆ। ಅವ ನರಹರಿಯಲ್ಲೇ ಭಾಮೆ। ನರಹರಿಯೋ ಆರಿದೊರೆಯೇ, ಆಮೆರವಣಿಗೆಯ ನಾನರಿಯೆ॥4॥ ನೆಲವ ಈರಡಿ ಮಾಡಿ ಅಳೆದ ಚೆಲುವನಲ್ಲೆ ಭಾಮೆ। ಅವ ಚೆಲುವನಲ್ಲೇ ಭಾಮೆ। ಚೆಲುವನೋ, ಮಲೆವನೋ ಅಂಡಲೆವನೋ ನಾನರಿಯೇ॥5॥ ಕೊಡಲಿಯ ಮಸೆದು ರಾಯರನ್ನೆಲ್ಲ ಕೆಡಹಿದನಲ್ಲೆ ಭಾಮೆ। ಅವ ಕೆಡಹಿದನಲ್ಲೆ ಭಾಮೆ। ಕೆಡಹಿದನೋ ಮಡುಹಿದನೋ ಆ ಮೋದವನು ನಾನರಿಯೆ॥6॥ ಸೀತಾಚೋರನ ಕೊಂದ ರಘುನಾಥನಲ್ಲೆ ಭಾಮೆ। ಅವನಾಥನಲ್ಲೆ ಭಾಮೆ। ನಾಥನೋ ಖ್ಯಾತನೋ ಆ ಮಾತನೊ ನಾನರಿಯೇ...॥7॥ ಮಾವನ ಕೊಲ್ಲಲ್ಲು ಮಥುರೆಗೆ ಪೋದ ದೇವನಲ್ಲೆ ಭಾಮೆ। ಅವ ದೇವನಲ್ಲೇ ಭಾಮೇ। ದೇವನೋ ಭಾವನೋ ಗೋಕಾವನೋ ನಾನರಿಯೇ॥8॥ ತ್ರಿಪುರಾಂಗನೆಯರ ವ್ರತಳಿವನದ ಚಪಳನಲ್ಲೆ ಭಾಮೆ। ಅವ ಚಪಳನಲ್ಲೇ ಭಾಮೆ। ಚಪಳನೋ ವಿಪ್ರಳನೋ ಆ ವಿಪರೀತವ ನಾನರಿಯೇ॥9॥ ಓಜಿಯಿಂದ ತೇಜಿಯನೇರಿದ ರಾಜನಲ್ಲೇ ಭಾಮೆ। ಅವ ರಾಜನಲ್ಲೇ ಭಾಮೆ। ರಾಜನೋ ಭೋಜನೋ, ಆ ಸೋಜಿಗವ ನಾನರಿಯೇ॥10॥ ಸೃಷ್ಟಿಗೆ ಕರ್ತನು ವಿಜಯ ವಿಠ್ಠಲನಲ್ಲೇ ಭಾಮೆ। ಅವ ವಿಠಲನಲ್ಲೇ ಭಾಮೆ। ವಿಠಲನಾದರೆ ಇಷ್ಟೊಂದ್ಯಾತಕೆ ದಟ್ಟಡಿಗಳಿಗೆ ಬಂಧಿಸುವೆ॥11॥

ಬಾಗಿಲ ತೆರೆಯೇ ರಾಧಿಕೇ (ಸಂಭಾಷಣಾ ಗೀತೆ)

ಕೃಷ್ಣ : ಬಾಗಿಲ ತೆರೆಯೇ ರಾಧಿಕೇ ನಿದ್ರಾಘನವಾಗಿದೆ ರಾಧಿಕೆ। ನಾಗಮಂಚದಲಿ ರಾಧಿಕೆ। ನಾ ಹೋಗಿ ಮಲಗುವೆನು

ರಾಧಿಕೆ।।

ರಾಧ : ಆರು ಪೇಳಲೋ ಗೋವಳಾ। ಈ ಕಾರು ಮುಸುಕಿದೆ ಕಾವಳಾ। ನಾರಿ ಓರ್ವಳಿಹೆ ಕೇವಲಾ ಮತ್ತಾರು ಮಂದಿ ಮನೆಯಲಿಲ್ಲ।।

ಕೃಷ್ಣ : ಜಲಧಿಯ ನೀಸುತ ಬಂದೆನೇ। ತಾ ಕುಲಗಿರಿ ಬೆನ್ನಿಲಿ ತಂದೆನೇ। ಪ್ರಳಯಕಾಲದಲಿ ನಿಂದೆನೆ। ನಾ ತಳುವದೆ ಕದ ತೆರೆಯೆಂದೆನೆ।।

ರಾಧ: ಜಲಚರವೇನೀ ಹೋಗೆಲೋ। ಇದು ನಿಲಯ ನೀರಿಲ್ಲ ಸಾಗೆಲೋ ಕುಲಗಿರಿ ಸರಿಸುವದ್ದೇಗೆಲೋ ದುರ್ಬಲಳಲ್ಲವೆ ನೀ ಸಾಗೆಲೋ।।

ಕೃಷ್ಣ : ಕೋರೆ ಮಸೆದು ಹದ ಮಾಡಿದೆ। ನಾ ಧಾರುಣಿಗಭಯವ ನೀಡಿದೆ। ಕ್ರೂರ ದೈತ್ಯರನು ಕಾಡಿದೆ। ದಣಿವಾರಿಸಿಕೊಳ್ಳುವೆ ಗಾಢದೆ।।

ರಾಧ: ಹಲ್ಲು ಮಸೆಯುವ ಕ್ರೋಢಿಯೇ। ಮನೆಯಲ್ಲಿ ಕೊಳ್ಳುವಾ ಮೂಢೆಯೇ। ಬಲ್ಲಿದ
ಕಾಶ್ಯಪ ಜೋಡಿಯೇ। ಆಸುವೆಲ್ಲ ಪೀರ್ದೆ ಹಗಲ್ಹಾಡಿಯೇ।।

ಕೃಷ್ಣ: ಬಡವ ರಾಹುವನೆ ಸುಂದರಿ। ನಾ ಕೊಡಲಿಯೆ ಪಿಡಿದು ಬಂದಿರೆ। ದಡೆನರೇನೆ ಕದ ಬಂಧುರೆ। ಇದು ನಡತೆಯಲ್ಲಿ ತೆರೆ ಕಣ್ದೆರೆ।।

ರಾಧ: ಬಡವನ ಭಿಕ್ಷೆಯ ಬೇಡೆಲೋ। ನೀ ಕೊಡುವನು ತುಳಿಯುವ ಮೂಢೆಲೋ। ಕೊಡಲಿಯು ಕೈಲಿರೆ ಕೇಡೆಲೋ। ಇದಕ್ಹಡೆದಳೆ ಸಾಕ್ಷಿಯ ನೋಡೆಲೊ।

ಕೃಷ್ಣ: ವನಿತೆಯನಗಲಿದೆ ರನ್ನೆಯೆ। ನಾ ವನವನಚರಿಸಿದೆ ಚನ್ನೆಯೆ। ಧನಿ ಗೋಪಾಲನು ಮಾನ್ಯನೇ। ನಾ ಕೆನೆಹಾಲ್ ಕುಡಿಯುವ ಪ್ರಾಣಿಯೆ।

ರಾಧ: ಕರಡಿ ಕಪಿಗಳಿಗೆ ಹೇಳೆಲೋ। ನಿ ಪಿರಿಪಿರಿ ತಿರುಗುವ ಚಾಳೆಲೊ। ತುರುಗಳ ಕಾಯುತ್ತೇಳೆಲೋ। ನೀ ಕರಿಯ ಕಾಮಿನಿಯ ತಾಳೆಲೊ।।

ಕೃಷ್ಣ: ಅರಿವೆ ಇಲ್ಲವೇ ಮೈಮೇಲೆ। ನಾ ತುರಗವೇರಿ ನಿಂತಿಹೆ ನಿಲ್ಲೆ। ತೆರೆಯೆ ಕದವ ಬೇಗನೆ ನಲ್ಲೆ। ಶ್ರೀಹರಿಯು ನಾನು ಕೇಳೆಲೆ ಬಾಲೆ।।

ರಾಧ: ಬತ್ತಲೆ ಇರೆ ಕಲೆಯಲು ಜೀಯೊ। ಮೈ ಸುತ್ತರವಿರೆ ಒಳ ಬಾ ಪ್ರಿಯಾ। ಇತ್ತ ಕಟ್ಟು ತುರಗವ ರಾಯಾ। ನೀ ಸತ್ಯ ನುಡಿದೆ ಇನ್ನಿಲ್ಲ ಭಯ।।

ಕೃಷ್ಣ: ಇಂದೇ ಮಂಗಳಕರ ದಿನವು। ಕೇಳಿಂದೆ ಸಮ್ಮೇಲನ ದಿನವು। ಇಂದೇ ನೀ ಕ್ಷಮಿಸುವ ದಿನವು। ನೆನೆಯೆಂದೆ ಪ್ರತಿಭಾಂಕುರನ ದಿನವು।।

ನೀರೊಳು ಮುಳುಗಿ ನಿಗಮ ಚೋರನ

ಕೃಷ್ಣ:- ನೀರೋಳು ಮುಳುಗಿ ನಿಗಮ ಚೋರನ ಗೆದ್ದ ನೀರಜಾಕ್ಷನೆ ಭಾಮೆ ನಾ। ನೀರಜಾಕ್ಷನೇ ಭಾಮೆ।।

ಭಾಮೆ:- ನಾರುವ ಮೈಯ್ಯನು ನೀನೆಲ್ಲಿ ತೋರಿದೆ ಸಾರುಸಾರುನಿ ದೂರ ರಂಗ। ಸಾರುಸಾರು ನೀ ದೂರ।।1।।

ಕೃಷ್ಣ:- ಮಂದರಗಿರಿಯನು ಬೆನ್ನಲಿ ಪೊತ್ತಂಥ ಇಂದಿರೆಯರಸನೆ ಭಾಮೆನಾ। ಇಂದಿರೆಯರಸನೆ ಭಾಮೆ।।

ಭಾಮೆ:- ಇಂದು ನಿನಗೆ ತಕ್ಕ ಭಾರಗಳಿಲ್ಲವೊ ಸಿಂಧುವಿನೊಳಗೆ ಪೋಗೈರಂಗ। ಸಿಂಧುವಿನೊಳಗೆ ಪೋಗೈ।।2।।

ಕೃಷ್ಣ:- ಧರಣಿಗೆ ಸುಖವನು ತೋರಿದ ಸೂಕರ ಪರಮ ಪುರುಷನು ಭಾಮೆನಾ। ಪರಮ ಪುರುಷನು ಭಾಮೆ।।

ಭಾಮೆ:- ವರಾಹರೂಪದ ನಿನ್ನ ಘುರುಘುರು ಶಬ್ದವ ಅರಿದಳಲ್ಲವೋ ನೀ ಪೋಗೈರಂಗ। ಅರಿದಳಲ್ಲವೋ ನೀ ಪೋಗೈ ರಂಗ।।3।।

ಕೃಷ್ಣ:- ಬಾಲನ ತಾಪವ ಕೋಪದಿ ತರಿದ ನಾರಸಿಂಹನು ನೋಡೆ ಭಾಮೆ ನಾ। ನಾರಸಿಂಹನ ನೋಡೆ ಭಾಮೆ॥

ಭಾಮೆ: ಮೇಲಿನ ವದನವ ಕ್ರೂರಕಾರ್ಯಂಗಳ ಕೇಳಿ ಅಂಜುವಳಲ್ಲ ಪೋಗೈ ರಂಗ। ಕೇಳಿ ಅಂಜುವಳಲ್ಲ ಪೋಗೈ ರಂಗ॥4॥

ಕೃಷ್ಣ:- ವಾಸವನನುಜನೇ ವಾಮನ ರೂಪನೆ ನಾಶರಹಿತನೆ ಭಾಮೆ ನಾ। ನಾಶರಹಿತನೆ ಭಾಮೆ।

ಭಾಮೆ:- ಕೂಸಿನ ರೂಪದಿ ಮೋಸವ ಮಾಡಿದವಗೆ ದಾಸಿಯೊಬ್ಬಳು ಬೇಕೇ ಪೋಗೈ ರಂಗ। ದಾಸಿಯೊಬ್ಬಳು ಬೇಕೇ ಪೋಗೈ॥5॥

ಕೃಷ್ಣ:- ತಾತನ ಮಾತಿಗೆ ಮಾತೆಯನಳಿದ ಖ್ಯಾತ ಭಾರ್ಗವನೆ ಭಾಮೆನಾ। ಖ್ಯಾತಭಾರ್ಗವನೆ ಭಾಮೆ॥

ಭಾಮೆ:- ಮಾತೆಯನಳಿದ ಘಾತುಕ ನಿನಗೆ ದೂತಿಯೊಬ್ಬಳು ಬೇಕೆ ಪೋಗೈ ರಂಗ। ದೂತಿಯೊಬ್ಬಳು ಬೇಕೆ ಪೋಗೈ॥6॥

ಕೃಷ್ಣ:- ದಶರಥನಂದನ ದಶಮುಖಭಂಜನ ಪಶುಪತಿ ವಂದ್ಯನೆ ಭಾಮೆನಾ। ಪಶುಪತಿ ವಂದ್ಯನೆ ಭಾಮೆ॥

ಭಾಮೆ:- ಹಸನಾದ ಏಕಪತ್ನಿ ವ್ರತನಿಗೆ ಪರಸತಿಯೊಬ್ಬಳು ಬೇಕೇ ಪೋಗೈರಂಗ। ಪರಸತಿಯೊಬ್ಬಳು ಬೇಕೆ॥7॥

ಕೃಷ್ಣ:- ಹದಿನಾರು ಸಾಸಿರ ನೂರೆಂಟು ಸುದತೇರ ಬದಿಯಲ್ಲಿಟ್ಟವನೆ ಭಾಮೆ ನಾ। ಬದಿಯಲ್ಲಿಟ್ಟವನೆ ಭಾಮೆ॥

ಭಾಮೆ:- ಹದನಕೆ ಬಾರದ ಮಾರ್ಗಂಗಳ್ಯಾತಕೆ ವದನ ಮುಚ್ಚಿಕೊಂಡು ಪೋಗೈ ರಂಗ। ವದನಮುಚ್ಚಿಕೊಂಡು ಪೋಗೈ ರಂಗ॥8॥

ಕೃಷ್ಣ:- ಬೌದ್ಧರ ಕುಲದಲ್ಲಿ ಹುಟ್ಟಿ ಅದರಂತೆ ಮುಗ್ದರ ಮಾಡಿದೆ ಭಾಮೆನಾ। ಮುಗ್ದರ ಮಾಡಿದೆ ಭಾಮೆ॥

ಭಾಮೆ:- ಶುದ್ಧ ಗುಣಗಳೆಲ್ಲ ಇದ್ದಲ್ಲಿಗೆ ಪೇಳೆ ವೃದ್ಧಳು ನಾನಲ್ಲ ಪೋಗೈ ರಂಗವೃದ್ಧಳು ನಾನಲ್ಲ ಪೋಗೈ॥9॥

ಕೃಷ್ಣ:- ಧರತುರಗವನೇರಿ ಧರೆಯಲ್ಲಿ ಚರಿಸಿದ ದೊರೆ ವೀರನು ನೋಡೆ ಭಾಮೆನಾ। ದೊರೆ ವೀರನು ನೋಡೆ ಭಾಮೆ॥

ಭಾಮೆ:- ತುರುಗದ ಚಾಕರಿಯೊಳಗಿರುವಗೆ ಒಬ್ಬ ತರುಣಿಯ ಭೋಗವು ಬೇಕೆ ರಂಗಾ। ತರುಣಿಯ ಭೋಗವು ಬೇಕೇ॥10॥

ಕೃಷ್ಣ:- ಸರುವ ಪ್ರಾಣಿಗಳ ಉದರದೊಳಿಟ್ಟು ಶರಧಿಯೊಳ್ ಮಲಗಿದೆ ಭಾಮೆ ನಾ। ಶರಧಿಯೊಳ್ ಮಲಗಿದೆ ಭಾಮೆ॥

ಭಾಮೆ:- ದೊರೆ ಹಯವದನನ ಚರಣಕ್ಕೆರಗುತ ತೆರೆದಳು ಬಾಗಿಲ ಭಾಮೆ ಆಗ। ತೆರೆದಳು ಬಾಗಿಲ ಭಾಮೆ॥11॥

ಶ್ರೀಕಾಂತ ನೀನು ಚೈಕೊನು ವಚ್ಚಿತಿ

ಶ್ರೀಕಾಂತ ನೀನು ಚೈಕೊನು ವಚ್ಚಿತಿ। ವಾಕಲಿತೀಯವೆ ಭಾಮ ಇಂಟಿವಾಕಿಲತೀಯವೆ ಭಾಮ॥ ಚೀಗಡಿವೇಳೆಲೊ ವಾಕಿಲತೀಯೆನು ಶ್ರೀಕರ ನೀವೆವಡೋಯಿ॥1॥ ಜಾಣೆ ನಿಗಮಗಳ ಮಾಣದೆ ತಂದಿಹೆ ಮೀನ ಶರೀರನೆ ಮಡದಿ ನಾನು ಮೀನ ಶರೀರಗೆ॥ ಮೀನ ಶರೀರ ನೀನಾದೊಡೆ ಕಡಲನು ಕಾಣದೆ ಬರುವರೆ ಹೀಗೆ॥2॥ ಅಮರಾಶಿ ಅಮರುತಾ ಸಮಜು ನಿದಿದಲೊ ಕಮಟವತ್ತಾರಮೆ ನಜಾನಿಭಮ್ಮ॥ ತಮಟಜ ಹೊಲೆತರೆ ವಿಮಲ ಮುಖಾಂಬುಜ ಅಮಿಖ ಸಪಾಹೋ ಜಾಹೋ॥3॥ ಹಿರಣ್ಯ ಕಶಿಪುವಂ ಪರಿಹಂಪಣ್ಣೆನ ನರಹರಿ ನಾನಡಿ ಚಿರಿಟೆಲಕ್ಷ್ಮಿ॥ ನರಹರಿಯಾನಾಲ್ ವರ್ ಭಯಮಾಹುದು ತಿರುಂಬಿ ನೀಪಿನ್ನಿಕಿ ಪೋಡಾ।ಏಂಡಾ ತಿರುಂಬಿ ಪಿನ್ನಿಕಿ ಪೋ॥4॥ ಭೂಮಿರೆಂಡಡಗಲು ಪ್ರೇಮತೊ ಚೇಸಿನ ವಾಮನ ರೂಪುಡೆ ವನಿತಾನೇನು। ವಾಮನುಡೈ ತೇ ನೇಮಸ್ಸಮಗುನ ಸ್ವಾಮಿ ನೀ ನಮ್ಮುದುಡಟಾರಾನೀ॥5॥ ಸುಗುಣೇ ಕೇಳ್ ಬಹುಭುಜರುಗಳಿಗೆ ಸವರಿದ ಭೃಗಪತಿರೂಪನೆ ಲಲನೇನಾನೆ। ಭೃಗಪತಿಯಾದೊಡೆ ಮೊಗವನೆ ನೋಳ್ಪರೆ ಅಗಜನನಿಗೆ ನೀ ಪೋಗೈ॥6॥ ತಾಮಸ ರಾವಣ ಸಾನುಜ ಕೇಸರಿ ರಾಮ ರಘೋದ್ಭವ ಮೀಗೆ ಸಖಿ। ರಾಮಜ ಹೋಲಿತರೆ ನೇನು ಪತ್ನಿವ್ರತ ಕಾಮಾತುರನವೆ ಜಾರೇ ತುಮಹೀ॥7॥ ವಸುದೇವಾತ್ಮಜ ವಸುಧಾ ಪರವರ ಕಿಸನರೂಪ ಮೈ ನಾರಿ ದಿವ್ಯ ಕಿಸನ ರೂಪ। ಕಿಸನ ಹುಯೇತು ಬಸ್‌ಕರ ಚೋರೀ

ದುಸುರೇ ಜಾರೇ ತುಮ್ ಹೇ ಜೀ।।8।। ಕಪಟವೇಷಂಪೋಟು ತ್ರಿಪುರರ ಸಾಧಿಚ್ಚು ನಿಪುಣ ಬಹುದ್ವರಿ ನಾಪಣ್ಣೀನ್ ಕೇಳ್, ನಿಪುಣ ಬಹುದ್ವಂ ಆನಾಲ್ ಚಪಲಾಕ್ಷಿಯ ಸ್ವಪಿನತಲೇ ಪಾರ್ ಪಾರಾ ವಾರ್ ಅಮ್ ಸ್ವಪಿನತಿಲೇ ಪಾರ್ಪಾರಾವಾ।।9।। ಕಲ್ಕಿ ..... ಗುರ್ರಂಮು ಸಿಕ್ಕಿ ಕಲ್ಕಿನ ಗೆಲ್ಕಿನ ಕಲ್ಕಿ ಸ್ವರೂಪುಡೇ ಕಾಂತಾ ನೇನು ಕಲ್ಕಿ ಸ್ವರೂಪುಡೆ ಕಾಂತ। ಕಲ್ಕಿ ಸ್ವರೂಪಮುಲ ಪಲ್ಕುಗ ನನ್ನುವೇ ಕಲ್ಕಿತನ ಮುಜುವ ಪೋಯೀ।।10।। ವರಕಾದ್ರಿ ನರಹರಿ ನೇಗಾಗಲ್ ಸರಮುಗ ದೆಲಿಯವೆ ಚಿಲಿಯಾನೇನು। ನರಹರಿಯ್ಯೆತೇ ವರಮುಲೊಸಗ ಮನಿತೆರೆಪೆನು ವಾಗಿಲ ಲಕ್ಷ್ಮಿ।।11।।

ಲಾಲಿ

ಬಾರೆ ಗೋಪೆಮ್ಮ ನಿಮ್ಮ ಬಾಲಯ್ಯನಳುತಾನೆ **ರಾಗ: ದುರ್ಗ-ಆದಿತಾಳ**

ಬಾರೆ ಗೋಪೆಮ್ಮ ನಿಮ್ಮ ಬಾಲಯ್ಯನಳುತಾನೆ।।ಪ।। ಆರು ತೂಗಿದರು ಮಲಗನು ಮುರವೈರಿ। ಬಾರೆ ಗೋಪೆಮ್ಮ।।ಅ.ಪ।। ನೀರೊಳು ಮುಳುಗಿ ಮೈ ಒರೆಸೆಂದಳುತಾನೆ। ಮೇರುವ ಹೊತ್ತು ಮೈ ಭಾರವೆಂದಳುತಾನೆ। ಧರಣಿ ಕೋರೆಯಲಿಟ್ಟು ದವಡೆನೊಂದಳುತಾನೆ। ದುರುಳ ರಕ್ಕಸನ ಕರುಳ ಕಂಡಳುತಾನೆ।।1।। ನೆಲವನಳೆದು ಪುಟ್ಟ ಬೆರಳು ನೊಂದಳುತಾನೆ। ಛಲದಿಂದ ಕೊಡಲಿಯ ಪಿಡಿದೇನೆಂದಳುತಾನೆ। ಬಲುಸೈನ್ಯ ಕಪಿಗಳ ನೋಡೆನೆಂದಳುತಾನೆ। ನೆಲುವಿನ ಬೆಣ್ಣೆಯು ನಿಲುಕದೆಂದಳುತಾನೆ।।2।। ಬತ್ತಲೆ ನಿಂತವನ ಎತ್ತಿಕೊ ಎಂದಳುತಾನೆ। ಉತ್ತಮ ತೇಜಿಯ ಹತ್ತೇನೆಂದಳುತಾನೆ। ತೊಟ್ಟಿಲೊಳಗೆ ಮಲಗಲೊಲ್ಲನು ಮುರವೈರಿ। ದಿಟ್ಟ ಶ್ರೀ ಪುರಂದರವಿಠಲಗೆ ಮೊಲೆ ಕೊಡುಬಾರೆ ಗೋಪೆಮ್ಮ।।3।।

ಆಶ್ಚರ್ಯಜನಕನಾಗಿ **ರಾಗ: ಕುರಂಜಿ**

ಆಶ್ಚರ್ಯಜನಕನಾಗಿ। ನಿರ್ಮಿಸಿದ ಪಚ್ಚೆಯತೊಟ್ಟಿಲಲ್ಲಿ। ಅಚ್ಯುತಾನಂತನಿರಲು। ತೂಗಿದರು ಮತ್ಸ್ಯಾವತಾರ ಹರಿಯಾ ಜೋಜೋ।।1।। ಧರ್ಮಸಂಸ್ಥಾಪಕನೆಂದು ನಿರವಧಿಕ ನಿರ್ಮಲಾಚಿತ್ತನೆಂದು ಮರ್ಮ ಕರ್ಮಗಳ ತಿಳಿದು। ತೂಗಿದರು ಕೂರ್ಮಾವತಾರ ಹರಿಯಾಜೋಜೋ।।2।। ಸರಸಿಜಾಕ್ಷಿಯರೆಲ್ಲರೂ। ಜನವಶೀಕರ ದಿವ್ಯರೂಪನಿವನೆಂದು। ಪರಮ ಹರುಷದಿಂದಲೀ ಪಾಡಿ ತೂಗಿದರು "ವರಾಹಾವತಾರ" ಹರಿಯಾ ಜೋಜೋ।।3।। ಕರಿಕುಂಭಗಳು ಪೋಲುವ। ಕುಚದ ಮೇಲೆ ಹಾರ ಪದಕಗಳು। ಹೊಳೆಯೆ ವರರನ್ನೇಯರು ಪಾಡಿ ತೂಗಿದರು "ನರಸಿಂಹಾವತಾರ" ಹರಿಯಾ ತೂಗಿದರು ಜೋಜೋ।।4।। ಭಾಮಾಮಣಿಯ ರೆಲ್ಲರೂ। ಯದುವಂಶ ಸೋಮನಿವನೆಂದು। ಪೊಗಳಿ ವಾಮನೇತ್ರೇಯರು ಪಾಡಿ ತೂಗಿದರು"ವಾಮನಾವತಾರ" ಹರಿಯ ಜೋಜೋ।।5।। ಸಾಮಜವರದನೆಂದು ಅತುಳ "ಭೃಗುರಾಮಾವ"ತಾರನ। ಶ್ರೀಮದಾನಂದನೆಂದು ತೂಗಿದರು। ಪ್ರೇಮಾತಿಶಯದಿಂದಾ ಜೋಜೋ।।6।। ಕಾಮನಿಗೆ ಕಾಮನೆಂದು ಸುರಸಾರ್ವಭೌಮ ಗುಣಧಾಮನೆಂದು। ನೇಮದಿಂದಲಿ ಪಾಡುತಾ ತೂಗಿದರು "ರಾಮಾವತಾರ" ಹರಿಯಾ ಜೋಜೋ।।7।। ಸೃಷ್ಟಿಯ ಕರ್ತನೆಂದು। ಜಗದೊಳಗೆ ಶಿಷ್ಟಸಂತುಷ್ಟನೆಂದು। ದುಷ್ಟಾಂತಕಾರ ಹಿತನೆಂದು ತೂಗಿದರು "ಕೃಷ್ಣಾವತಾರ" ಹರಿಯ ಜೋಜೋ।।8।। ಮುದ್ದು ನಾರಿಯರೆಲ್ಲರೂ ಜಗದೊಳಗೆ ಪ್ರಬುದ್ಧನೆಂದು ಪೊಗಳಿ। ಬದ್ಧಾನುರಾಗದಿಂದಾ। ತೂಗಿದರು "ಬೌದ್ಧಾವತಾರ" ಹರಿಯಾ।। ಜೋಜೋ।।9।। ಥಳಥಳಾತ್ಕಾರದಿಂದ। ರಂಜಿಸುವ। ಮಲಯಜಾ ಲೇಪದಿಂದಲಿ। ಜಲಜಗಂಧಿಯರು ಪಾಡಿ ತೂಗಿದರು। "ಕಲ್ಕ್ಯಾವತಾರ" ಹರಿಯಾ ಜೋಜೋ।।10।। ನೀಲಘನನೀಲ ಜೋಜೋ। ಶ್ರೀಕೃಷ್ಣ ಬಾಲಗೋಪಾಲ ಜೋಜೋ। ನೀಲಾವತಾರ ಜೋಜೋ। ಪರಮಾತ್ಮ ಬಾಲಗೋಪಾಲ ಜೋಜೋ।।11।। ಇಂದುಧರ ಮಿತ್ರ ಜೋಜೋ ಶ್ರೀ ಕೃಷ್ಣ ಇಂದುರವಿನೇತ್ರ। ಜೋಜೋ।। ಇಂದುಕುಲರನ್ನ ಜೋಜೋ। ಶ್ರೀಕೃಷ್ಣ ಇಂದಿರೇರಮಣ ಜೋಜೋ।।12।। ವೃಷಧರನೆ ಕಲ್ಕಿ ಜೋಜೋ।। ಪ್ರೀತಿಯಲಿ ವಿಷವುಂಡವನೆ ಜೋಜೋ।। ವಟಶಯನ ಕೃಷ್ಣ ಜೋಜೋ। ಕರುಣಾಂತ ರಂಗವಿಠಲ ಜೋಜೋ।।13।।

ನಂದಯಶೋದೆ ರಾಗ: ಕುರಂಜಿ

ನಂದಯಶೋದೆ ಬಾಲ ಲೀಲ ಲಾಲಿ। ಇಂದೀರೇಮನೋಹರ ಗೋವಿಂದಲಾಲಿ।। ಮುತ್ತಿನ ಮುಡಿಗಳ ಕೆತ್ತಿಸಿ ದಾತ್ರಿಮರ್ತ್ಯನ ಲಾಲಿ। ಎತ್ತಿದ ಗಿರಿಯನು ಬೆನ್ನಪೊತ್ತ ಕೂರ್ಮಲಾಲಿ।। ಮೇದಿನಿಯನ್ನು ಛೇದಿಸಿದಾವರಾಹ ಲಾಲಿ।। ಪ್ರಹ್ಲಾದಾನ ಬಾಧೆ ಬಿಡಿಸಿದ ನಾರಸಿಂಹ ಲಾಲಿ।। ಬಲಿಯದಾನವ ಬೇಡಿದ ವಾಮನನೇ ಲಾಲಿ।। ತಲೆಯನಿಳುಹಿದಾ ತಾಯಿ ಪರಶುರಾಮ ಲಾಲಿ।। ಅಂಬುಧಿಯನ್ನು ಭಂಜಿಸಿ ಸೀತೆ ತಂದಲಾಲಿ।। ಗೋಕುಲಾಬೃಂದಾವನದಲ್ಲಿರುವ ಗೋವಿಂದಲಾಲಿ।। ತ್ರಿಪುರಾಸತಿಯರ ವ್ರತಗಳಾನಳಿದ ಶ್ರೀಪತಿಯೇ ಲಾಲಿ।। ಚಪಲರಾಹುತೇಜಿಯೇರಿದ ಕಲ್ಕಿಲಾಲಿ।।

ನಗೆಮುಖದ ಚೆಲುವನೇ ನೋಡುತಾ ರಾಗ: ಕುರಂಜಿ

ನಗೆಮುಖದ ಚೆಲುವನೇ ನೋಡುತಾ ಪರಿಪರಿಯಲಿ ಸರಪಣಿಯಂ ಪಿಡಿದು ತೂಗಿಪಾಡುತಾ ದೊರೆಕಾದು ಜನರ ಶಾಪಹರಿಸುವಂತಾ ಹರಿಯಾ ನಂಬಿ। ಪಾಡಿ ತೂಗುತಲಿದ್ದಳು ತಾಯಿ।।ಲಾಲಿ।। ಜಲದೊಳಗೆ ಹೊಳೆವ ನಿತ್ಯ ನಂದನನೆ ।।ಲಾಲಿ।। ಕುಲಗಿರಿಯ ಬೆನ್ನಲಿ ಪೊತ್ತ ಕೂರ್ಮಹರಿ।।ಲಾಲಿ।। ಧರಣಿಯಾ ತಂದ ವರದ ಮೂರುತಿಯೆ।।ಲಾಲಿ।। ನಿಗಮ ಚೋರನ ಕೊಂದು ಅಜಗೆ ವೇದವನಿತ್ತು। ನಗವ ಬೆನ್ನಲಿ ಪೊತ್ತು ವರಾಹಾವತಾರದಿ। ಉರಿವ ಕಂಬದೊಳು ಬಂದು ಕ್ರೂರರೂಪಿನಿಂ ಕರುಳ ಬಗೆದು। ದುರುಳ ಹಿರಣ್ಯಕನ ಕೊಂದು। ತರಳನನು ಕಾಯ್ದ ಹರಿಯಾ ತೂಗಿ ಪಾಡುತಲಿದ್ದಳು ತಾಯಿ।।ಲಾಲಿ।। ಪುಟ್ಟ ಬ್ರಾಹ್ಮಣನಾಗಿ ನೆಲವ ಬೇಡಿ। ತ್ರಿವಿಕ್ರಮನು ಆಗಿ ಪಟುತರದಿ ಭೂಮಿಯಳೆದು। ದಿಟ್ಟತನದಲಿ ಕೊಡಲಿಯನು ಮಸೆದು। ಕ್ಷತ್ರಿಯರ ಕುಲವ ಸದೆದು ಪಾವನ ಪಾದದಿ। ಶಿಲೆಯ ಪೆಣ್ ಗೈದ ಹರಿಯಾ। ಗೋಪಾಲ ಕೃಷ್ಣನನು ಪಾಡಿ ತೂಗುತಲಿದ್ದಳು ತಾಯಿ।।ಲಾಲಿ।। ತ್ರಿಪುರರಾ ಸತಿಯರ ವ್ರತವನಳಿದವನಾ। ವಿಪರೀತ ರೂಪಗಳ ಧರಿಸಿ ಮೆರೆದವನಾ। ಚಪಲ ತನದಲಿ ತೇಜಿ ಏರಿದವನಾ। ಚಪಲಾಕ್ಷಿ ತೂಗಿದಳ್ ಚೆಲುವ ಮೂರುತಿಯಾ।।ಲಾಲಿ।।

ನೀಲಘನ ಲೋಲ ಜೋ ಜೋ

ನೀಲಘನ ಲೋಲ ಜೋ ಜೋ ಕರುಣಾಲವಾಲ ಜೋ ಜೋ। ಲಲಿತಾವತಾರ ಪರಮಾತ್ಮ ಬಾಲಗೋಪಾಲ ಜೋ ಜೋ।।ಪ।। ಇಂದುಧರಮಿತ್ರ ಜೋ ಜೋ ಪರಮಾತ್ಮ ಇಂದು ರವಿ ನೇತ್ರ ಜೋ ಜೋ ಶ್ರೀಕೃಷ್ಣ ಇಂದಿರಾರಮಣ ಜೋ ಜೋ।।1।। ಆಶ್ಚರ್ಯಜನಕವಾಗಿ ನಿರ್ಮಿಸಿದ ಪುಷ್ಪದಾ-ತೊಟ್ಟಿಲಲ್ಲೀ ಅಚ್ಯುತಾ-ನಂತನಿರಲೂ ಪಾಡಿ ತೂಗಿದರು ಮತ್ಸ್ಯಾವತಾರದ ಹರಿಯಾ।।2।। ಧರ್ಮಸಂಸ್ಥಾಪಕನಿವನೆಂದೂ ನಿರ್ವಿದಿತ ನಿರ್ಮಲಾಭರಿತನೆಂದೂ ಮರ್ಮ ಕರ್ಮಗಳ ಬಿಟ್ಟು ತೂಗಿದರು ಕೂರ್ಮಾವತಾರದ ಹರಿಯಾ।।3।। ಸರಸಿಜಾಕ್ಷಿಯರೆಲ್ಲಾ ಜನಕ ಶ್ರೀಕಾರದಿವ್ಯರೂಪನಿವನೆಂದು ಪೊಗಳೀ ಪರಮ ಹರುಷದಿ ಪಾಡಿ ತೂಗಿದರು ವರಾಹಾವತಾರದ ಹರಿಯಾ।।4।। ಕರಿಕಂಬಗಳಿಂದ ಪೋಲ್ವ ಮಿಂಚಿನಲಿ ಕಮಲಗಳು ಪೊಳೆಯುತಿರಲೂ ವರ್ಣಗಂಧಿದುರುಪಾಡಿ ತೂಗಿದರು ನೃಸಿಂಹಾವತಾರದ ಹರಿಯಾ।।5।। ಭಾಮಾಮಣಿಯರೆಲ್ಲಾ ಯದುವಂಶ ಸೋಮನಿವನೆಂದು ಪೊಗಳೀ ವಾರಿಜಾಕ್ಷಿಯರು ಪಾಡೀ ತೂಗಿದರು ವಾಮನವತಾರದ ಹರಿಯಾ।।6।। ಸಾಮಂತ ಪುರುಷನೆಂದೂ ಅತುಳ ಮೃಗ ರಾಮಾವತಾರನೆಂದೂ ಶಿವರಾಮಾನಂದ ಹರಿಯಾ ತೂಗಿದರು ಪರಶುರಾಮಾವತಾರದ ಹರಿಯಾ।।7।। ಕಾಮನಿಗೆ ರಾಮನೆಂದೂ ಸುರಸೌಮ ಭಾಮಗುಣಧಾಮನೆಂದೂ ನೇಮದಿಂದಾ ಪಾಡೀ ತೂಗಿದರು ರಾಮಾವತಾರದ ಹರಿಯಾ।।8।। ಸೃಷ್ಟಿಕರ್ತನೆಂದೂ ಜಗದೊಳಗೆ ಸೃಷ್ಟಿ ಸಂರಕ್ಷಣನೆಂದೂ ದುಷ್ಟಾಂತರಹಿತನೆಂದೂ ತೂಗಿದರು ಕೃಷ್ಣಾವತಾರದ ಹರಿಯಾ।।9।। ಮುದ್ದು ನಾರಿಯರೆಲ್ಲಾ ಜಗದೊಳಗೆ ಪ್ರಬುದ್ಧಮಾನನೆಂದು ಪೊಗಳೀ ಭಾವಾನುರಾಗದಿಂದ ಪಾಡೀ ತೂಗಿದರು ಬೌದ್ಧಾವತಾರದ ಹರಿಯಾ।।10।। ತಾಳತಾತ್ಪರ್ಯದಿಂದಾ ರಂಜಿಸುವ ಮಲಯಜ್ಯೋತಿರ್ಯದಿಂದಾ ಜಲಗಂಧಿಯರು ಪಾಡೀ ತೂಗಿದರು ಕಲ್ಕ್ಯಾವತಾರದ ಹರಿಯಾ।।11।। ಕನಕಮಣಿ ಖಚಿತವಾದ ತಲ್ಪದಲಿ ವನಜಭವ ಕನ್ನಿಕೆಯರೆಲ್ಲಾ ವನಜನಾಭನ ಪಾಡೀ ತೂಗಿದರು ವನಿತಾ ಮಣಿಯರೆಲ್ಲಾ।।12।।

ದೇವಾದಿದೇವನೆಂದೂ ಈ ಶಿಶುವು ಪಾವನಾತೀತನೆಂದೂ ದೇವಗಂದರ್ವರು ಪಾಡಿ। ತೂಗಿದರೂ ದೇವಕೀ ಸುತನ ಹರಿಯಾ॥13॥ ಆನಂದ ವನದೊಳಗೇ ಗೋಪಿಯರು ಆನಂದ ಸುತನ ತಂದೂ ಆನಂದಭರಿತರಾಗಿ ತೂಗಿದರು ಆನಂದ ಜ್ವಾಲಲೀಲಾ॥14॥ ವಂಗಭವಭಂಗ ಜೋ ಜೋ ಶ್ರೀಕೃಷ್ಣ ಮಂಗಳೋ ಪಾಂಗ ಜೋ ಜೋ ರಂಗ ಕೃಪಾಂಗ ಜೋ ಜೋ ನವ ಮೋಹನ ರಂಗ ವಿಠಲ ಜೋ ಜೋ॥15॥

ನೀರೊಳಾಡಿ ಭಾರವಪೊತ್ತು

ನೀರೊಳಾಡಿ ಭಾರವಪೊತ್ತು। ಕೋರೆ ಬೆಳೆಸಿದೀ। ಸೀಳಿಕಂಭದಿಂದ ಬಂದು। ಪೋರನುಳುಹಿದಿ ರಾಮಲಾಲಿ ಮೇಘಶ್ಯಾಮಲಾಲಿ॥ಪ॥ ತಾಮರಸದಳನಯನಾ ತನಯಲಾಲಿ॥ಅ.ಪ॥ ಧರಿಸಿ ಕೊಡೆಯ ದಾನವ ಬೇಡಿ। ಪರಶುಎತ್ತಿದೀ। ಶರದಿದಾಟಿ ನಾಲ್ಕು ಆರು। ಶಿರವ ಕೆತ್ತಿದೀ॥1॥ ಗೊಲ್ಲತಿಯರ ಮನೆಗಳಿಗೆ ಮೆಲ್ಲನೆ ಪೋಗೀ। ಚೆಲ್ಲಿ ಪಾಲ್ ಮೊಸರು ಬೆಣ್ಣೆ ಸೂರೆ ಮಾಡಿದೀ॥2॥ ತ್ರಿಪುರಸತಿಯರ ವ್ರತವ ಕೆಡಿಸಿ। ಹಯವನೇರಿದೀ। ಕರುಣೆ ಉಡುಪಿ ಶ್ರೀಕೃಷ್ಣನೆ। ಮಾಡಿದಾ ಸುದ್ದೀ॥3॥

ಆರತಿ

ಮಂಗಳಾರುತಿ ಚಂದದಿ — ರಾಗ: ಕಾಂಬೋಧಿ

ಮಂಗಳಾರುತಿ ಚಂದದಿ। ತಂದು ನಾ ಬೆಳಗೂವೆ। ಕಂದರ್ಪಜನಕ ಶ್ರೀರಂಗನಿಗೆ॥ಪ॥ ನೀರೋಳು ಮುಳುಗಾಲು। ಭಾರ ಬೆನ್ನಲಿ ಪೊತ್ತು। ಧಾರುಣಿ ತಂದಂತ ದೀರಾನಿಗೇ। ಘೋರರೂಪವ ತಾಳಿ। ಪೋರನ್ನ ಸಲಹಿದ ನಾರಸಿಂಹಗೆ ಬೇಗ ಬೆಳಗುವೆ ನಾ॥1॥ ಬಾಲಬ್ರಾಹ್ಮಣನಾಗಿ ಬಲಿಯ ದಾನವ ಬೇಡಿ ಛಲದಿಂದ ಕ್ಷಾತ್ರರ ತಲೆಯ ಸೀಳಿ। ಮಲತಾಯಿ ಮಾತಿಗೆ। ವನವ ಸಂಚರಿಸಿದ ರಘುರಾಮ ಚಂದ್ರಗೆ ಬೆಳಗುವೆ ನಾ॥2॥ ಸರ್ಪನ್ಹೆಡೆಯ ತುಳಿದು। ಸತ್ಯಭಾಮೇರಿಗೊಲಿದು। ಉತ್ತುಮ ಸ್ತ್ರೀಯರ ವ್ರತವನಳಿದು। ಹತ್ತಾವತಾರವನೆತ್ತಿ ಬೆಟ್ಟಕ್ಕೆ ಬಂದ ಲಕ್ಷ್ಮೀರಮಣನಿಗೆ ಬೆಳಗುವೆ ನಾ॥3॥

ಆರತಿ ಬೆಳಗಿರೆ ಮಾರಮಣಗೆ — ರಾಗ: ಸಾರಂಗ

ಆರತಿ ಬೆಳಗಿರೆ ಮಾರಮಣಗೆ। ವರನಾರಿಯರು ಪರಮಾದರದಲಿ॥ಪ॥ ಸಾರುತೆ ಹರಿ ಗುಣ ಬೀರುತ ಮುದವನು। ಸರಸಿಜ ನಯನೆಗೆ ಹರುಷದಲೀ॥1॥ ನಿಗಮಕದ್ದು ನಗ ಭಾರ ಬೆನ್ನಲಿ ಪೊತ್ತು। ಅಗುದು ಬೇರ ಮೆದ್ದ ವರಾಹನಿಗೆ। ಮಗುವಿಗೋಸ್ಕರ ಕಂಬದಿಂದಲೆ ಬಂದ। ಜಗದೊಡೆಯಗೆ ಬೇಗ ಸುಗುಣೆಯರೂ॥2॥ ಸಂದರ ವಾಮನಾ ಇಂದು। ಭಾರ್ಗವಗೇ। ಅಹಲ್ಯೋದ್ಧಾರಕಗೇ। ಸುಂದರ ಗೋಪಿ ವೃಂದದಿ ಕುಣಿಯುವ ರಂಗನಿಗೆ ಗೋಪಿ ಕಂದನಿಗೆ॥3॥ ಅಶ್ವವಾಹನಗೇ ಪಶುರೂಪನಿಗೇ। ಬಸುರಲಿ ಬ್ರಹ್ಮಾಂಡವ ಧರಿಸಿದಗೇ। ದಶರಾತ್ರೆಯಲಿ ಅಸುರರ ಮಡುಹಿದ। ವಸುದೇವಸುತ ಸುಮನಸಪ್ರಿಯಗೇ॥4॥

ಭೂ ನಿಗಮ ಕದ್ದ ಚೋರ

ಭೂ ನಿಗಮ ಕದ್ದ ಚೋರ ದೈತ್ಯನ ಗೆದ್ದ ಸಾರವೇದಗಳ। ವಿಧಿಗಿತ್ತ ಮತ್ಸ್ಯಾವತಾರಗೆ ಆರತಿಯ ಬೆಳಗಿರೆ॥1॥ ವಾರಿಧಿ ಮಥನದಿ ನೀರೊಳು ಗಿರಿ ಮುಳುಗೇ ತೋರಿ ಬೆನ್ನಾಂತ ಸುರನುತ- ಕೂರ್ಮಾವತಾರಗಾರತಿಯ ಬೆಳಗಿರೆ॥2॥ ಧಾತ್ರಿಯ ಕದ್ದೊಯ್ದು ದೈತ್ಯನ ಮಡುಹಿದ- ಎತ್ತಿದಾಡೆಯಲಿ ನೆಗಹಿದ ಎತ್ತಿ ದಾಡೆಯಲಿ ನೆಗಹಿದ-ವರಾಹಮೂರ್ತಿ ಗಾರತಿಯ ಬೆಳಗಿರೆ॥3॥ ಕಡುಬಾಲಕನ ನುಡಿಗೆ ಒದೆದು ಕಂಬದೊಳುದಿಸಿ-ಒಡಲಸೀಳಿದ ಹಿರಣ್ಯಕನ ಒಡಲ ಸೀಳಿದ ಹಿರಣ್ಯಕನ ನರಸಿಂಹ-ಒಡೆಯಗಾರತಿಯ ಬೆಳಗಿರೆ॥4॥ ಸೀಮಾಧಿಪತಿ ಬಲಿಯ ಭೂಮಿ ಮೂರಡಿಬೇಡಿ। ಈ ಮೂರು ಜಗವ ಈರಡಿಯ। ಈ ಮೂರು ಜಗವ ಈರಡೀ ಮಾಡಿ ಅಳೆದ-ವಾಮನಗಾರತಿಯ ಬೆಳಗಿರೇ॥5॥

ಕುಂಭಿಣಿ ಸುರರಿಗಾಗಿ ಕ್ಷತ್ರಿಯರ ಸಂಭ್ರಮಕುಲವ ಸವರಿದ। ಸಂಭ್ರಮಕುಲವ ಸವರಿದ ಪರಶುರಾಮರಿಗಾರುತಿಯ ಬೆಳಗಿರೇ॥6॥ ತಂದೆ ಕಳುಹಲು ವನಕೆ ಬಂದಲ್ಲಿಸೀತೆಯ ತಂದ ರಾವಣನ ತಲೆಹೊಯ್ದು। ತಂದರಾವಣದತಲೆ ಹೊಯ್ದ ರಘುರಾಮ-ಚಂದ್ರಗಾರುತಿಯ ಬೆಳಗಿರೆ॥7॥ ಶಿಷ್ಟಯಮಳಾರ್ಜುನರ ಭೀಷ್ಟವ ಸಲಿಸಿದ-ದುಷ್ಟಕಂಸನ್ನ ಕೆಡಹಿದ। ದುಷ್ಟ ಕಂಸನ್ನ ಕೆಡಹಿದ ನಮ್ಮ ಶ್ರೀ ಕೃಷ್ಣಗಾರುತಿಯ ಬೆಳಗಿರೆ॥8॥ ರುದ್ರನ್ನ ತ್ರಿಪುರದೊಳಿದ್ದ ಸತಿಯರ-ಬುದ್ಧಿ ಭೇದವ ಕೆಡಿಸಿದ। ಬುದ್ಧಿ ಭೇದವ ಮಾಡಿ ಕೆಡಿಸಿ ಬತ್ತಲೆನಿಂದ್-ಬೌದ್ಧಗಾರುತಿಯ ಬೆಳಗಿರೆ॥9॥ ಪಾಪಿ ಜನ ಭಾರಕ್ಕೆ ಈ ಪೃಥ್ವಿ ಕುಸಿಯಲು - ತಾ ಪಿಡಿದು ಖಡ್ಗ ತುರುಗವ ತಾ ಪಿಡಿದು ಖಡ್ಗ ತುರುಗವನೇರಿದ ಕಲ್ಕಿ-ರೂಪಗಾರತಿಯ ಬೆಳಗಿರೆ॥10॥ ಮುತ್ತೈದೆನಾರಿಯರು ಮುತ್ತಿನಾರತಿಮಾಡಿ। ಹತ್ತಾವತಾರಿ ಹಯವದನ ಹತ್ತಾವತಾರಿ ಹಯವದನನ ಪಾಡುತ್ತ-ಚಿತ್ರದಾರತಿಯ ಬೆಳಗಿರೆ॥11॥

ಮಂಗಳೆಂದು ಬೆಳಗೆ ಬೇಗ **ರಾಗ: ಸಿಂಧುಭೈರವಿ**

ಮಂಗಳೆಂದು ಬೆಳಗೆ ಬೇಗ। ರಂಗಮೋಹನ ಕೃಷ್ಣಗೀಗ। ಅಂಗನೆಯಾರೆಲ್ಲ ಸೇರಿ। ಸಂಗೀತಾಲೋಲಾಗೆ ಬೇಗ॥ಪ॥ ಜಲದೊಳಾಡಿದ ಮತ್ಸ್ಯನಾ। ಕೂರ್ಮನಾಗಿ ಗಿರಿಯ ಪೊತ್ತು। ಕೋರೆಯಿಂದ ಮಣ್ಣು ಕೆದರಿ। ಆಡಿದ ವರಾಹಾದಿ ರೂಪ॥1॥ ಒಡೆದು ಬಂದ ಕಂಬದಿಂದ। ಬಲಿಯ ತುಳಿದ ಪಾದದಿಂದ। ಮಾತೆ ಶಿರವ ಹರಿದ ಭಾರ್ಗವ। ರಾಮಚಂದ್ರನಿಗಾರುತೀಯಾ॥2॥ ಗೋವುಗಳನೆ ಕಾಯ್ದದೇವ। ಲಲನೆಯರ ವ್ರತವನಳಿದ। ಹಯವನೇರಿ ಮೆರೆವ ಹರಿಗೆ। ಹವಳಾದ ಆರುತಿಯ ಬೆಳಗೆ॥3॥

ಮಂಗಳ

ವಸುದೇವ ಸುತನಿಗೆ ನಮೋ ನಮೋ

ವಸುದೇವ ಸುತನಿಗೆ ನಮೋ ನಮೋ ನಮ್ಮ ವಸುಧೇ ಪಾಲಕನಿಗೆ ನಮೋ ನಮೋ॥ಪ॥ ಮಚ್ಚವತಾರಗೆ ಮೊದಲೆ ಮಂಗಳವೆಂದು ಸಾಕ್ಷತ್ ಕೂರ್ಮಗೆ ನಮೋ ನಮೋ ಸುತ್ತಿ ಸುರುಳಿ ಭೂಮಿ ಒಯ್ದಿ ರಣ್ಯಾಕ್ಷಕನ ಪ್ರಾಣಹತ್ಯ ಮಾಡಿದ ವರಾಹ ನಮೋ ನಮೋ॥1॥ ಕೂಸು ಕರೆಯೆ ಕಂಬದಿಂದ ಬಂದ್ಹಿರಣ್ಯ ಕಶ್ಯಪನ ಕೊಂದ್ಹರಿಗೆ ನಮೋ ನಮೋ ಆಕಾಶವ್ಹಿಡಿಯದೆ ಬೆಳೆದು ಬಲಿಯ ಭಾಗ್ಯ ಆಕ್ರಮಿಸಿದಾತಗೆ ನಮೋ ನಮೋ॥2॥ ಪೊತ್ತು ಕೊಡಲಿ ಕ್ಷತ್ರಿಯರ ಕಡಿದ ಸಮರ್ಥ ಭಾರ್ಗವ ನಮೋ ನಮೋ ಹತ್ತು ಶಿರಗಳ ಕೊಂದು ಸೀತಾಸಮೇತನಾದ ಪೃಥಿವಿ ಪಾಲಕ ರಾಮ ನಮೋ ನಮೋ॥3॥ ಬೆರಳಲಿ ಗೋವರ್ಧನ ಎತ್ತ್ಯಾಕಾಕಳಕಾಯ್ದ ಕೊಳಲನೂದುವ ಕೃಷ್ಣ ನಮೋ ನಮೋ ತರಳರೂಪದಿ ತ್ರಿಪುರದ ದುರುಳರನೆಲ್ಲ ಮರುಳು ಮಾಡಿದ ಬೌದ್ಧ ನಮೋ ನಮೋ॥4॥ ಮುದ್ದು ತೇಜಿಯನೇರಿ ಕಲಿಗಳ ಕಡಿದಂಥ ಕಲ್ಕ್ಯಾವತಾರಗೆ ನಮೋ ನಮೋ ಶುದ್ಧ ವೈಷ್ಣವರಿಗೆ ಸುಲಭದಿಂದೊಲಿದು ಮುಕ್ತಿ ಕೊಡುವೊ ಭೀಮೇಶ ಕೃಷ್ಣಗೆ ನಮೋ ನಮೋ॥

ಅಂಬುಜದಳಾಕ್ಷಗೆ ಮಂಗಳ **ರಾಗ: ಸುರಟಿ**

ಅಂಬುಜದಳಾಕ್ಷಗೆ ಮಂಗಳ। ಸರ್ವದೇವರಕ್ಷಗೆ ಮಂಗಳ॥ಪ॥ ಜಲಧಿಯೊಳಾಮ್ನಾಯ ತಂದೆಗೆ ಮಂಗಳ। ಕುಲಗಿರಿಯ ಕೆಳಗೆ। ಜಯಮಂಗಳ। ನೆಲವ ಕದ್ದ ಸುರನ ಗೆಲಿದಗೆ ಮಂಗಳ। ಸುಲಭ ನರಸಿಂಹಗೆ ಶುಭಮಂಗಳ॥1॥ ವಸುಧೇ ಈರಡಿಗಯ್ದಗೆ ಮಂಗಳ। ವಸುಧಿಪರನಳಿದಗೆ ಜಯಮಂಗಳ। ದಶಕಂದರನನು ಗೆಲಿದಗೆ ಮಂಗಳ। ಪಶುಗಳ ಕಾಯ್ದಗೆ ಶುಭಮಂಗಳ॥2॥ ಪುರತ್ರಯವಧುಗಳ ಗೆಲಿದಗೆ ಮಂಗಳ। ತುರುಗ ವಾಹನನಿಗೆ ಜಯಮಂಗಳ। ವರಕಾಗಿ ನೆಲೆಯಾದಿ ಕೇಶವಗೆ ಮಂಗಳ। ಸಿರಿ ಹರಿಗೀಗ ಶುಭಮಂಗಳ॥3॥

ಜಲದೊಳು ಮುಳುಗಿದ ಮತ್ಸ್ಯನಿಗೆ

ಜಲದೊಳು ಮುಳುಗಿದ ಮತ್ಸ್ಯನಿಗೆ। ಗಿರಿಯ ಬೆನ್ನಲ್ಲಿ ಪೊತ್ತ ಕೂರ್ಮನಿಗೆ। ಧರೆಯ ನುದ್ಧರಿಸಿದ ವರಾಹವತಾರಗೆ।

ತರಳನ ಕಾಯ್ದ ನರಸಿಂಹಗೆ।।1।। ಭೂಮಿಯ ದಾನವ ಬೇಡಿದಗೆ। ಆ ಮಹಾಕ್ಷತ್ರಿಯರ ಗೆಲಿದವಗೆ। ರಾಮ ಚಂದ್ರನೆಂಬೋ ಸ್ವಾಮಿ ಶ್ರೀರಾಮಗೆ। ಭಾಮೆಯರರಸ ಗೋಪಾಲಕೃಷ್ಣಗೆ।।2।। ಬತ್ತಲೆ ನಿಂತಿದ್ದ ಬೌದ್ಧನಿಗೆ। ಉತ್ತಮ ಹಯವನೇರಿದ ಕಲ್ಕಿಗೆ। ಹತ್ತಾವತಾರದಿ ಭಕ್ತರ ಸಲಹುವ। ಕರ್ತೃ ಶ್ರೀ ಪುರಂದರ ವಿಠಲನಿಗೇ।।3।। ಮಂಗಳಂ ಜಯ ಮಂಗಳಂ।।

ನಿಗಮವ ತಂದ ಮತ್ಸ್ಯನಿಗೆ

ನಿಗಮವ ತಂದ ಮತ್ಸ್ಯನಿಗೆ ನಿತ್ಯಮಂಗಳ। ಅಗಣಿತ ಕೂರ್ಮಗೆ ಅತಿಮಂಗಳ। ಜಗವನುದ್ಧರಿಸಿದ ವರಹಗೆ ಮಂಗಳ-ಮಗುವ ಕಾಯ್ದ ನರಸಿಂಹಗೇ।।1।। ದಾನವಬೇಡಿದ ವಾಮನಗೆ ಮಂಗಳ-ಕ್ಷೋಣಿಪರನು ಕೊಂದಗೆ ಮಂಗಳ। ಜಾನಕಿದೇವಿಯ ರಮಣಗೆ ಮಂಗಳ ಜ್ಞಾನಿಗಳನೆ ಕಾಯ್ದ ಗೋಪಾಲಗೆ।।2।। ಬುದ್ಧರೂಪದಲಿಹ ದೇವಗೆಮಂಗಳ ಶುದ್ಧ ಅಶ್ವಾರೂಢಗೆ ಮಂಗಳ। ಮದ್ವವಲ್ಲಭ ಹಯವದನಗೆ ಮಂಗಳ ಉದ್ಧರಿಸುವ ದೇವರ ದೇವಗೆ ಮಂಗಳ।।3।।

ದುರುಳತಮ ವೇದವನು

ರಾಗ: ಸಾರಂಗ

ದುರುಳತಮ ವೇದವನು ಕದ್ದು। ಪಾತಾಳದಲಿ ಇರಲವನ। ಕೊಂದು ವೇದಾವಳಿಗಳ। ಸರಸಿಜೋದ್ಭವಗಿತ್ತು। ಸುರಮುನಿಗಳನ್ನೆಲ್ಲಾ। ಪೊರೆದ ಶ್ರೀ ಮತ್ಸ್ಯಾವತಾರಹರಿಗೇ। ಜಯಮಂಗಳಾ ನಿತ್ಯಶುಭಮಂಗಳಾ।।1।। ಸುರರು ದೈತ್ಯರು ಕೂಡಿ। ಸಿಂಧುವನು ಮಥಿಸುತಿರೆ।। ಗಿರಿ ಮುಳುಗಿಪಾತಾಳ ಕಿಳಿದು ಪೋಗೇ। ಭರದಿಂದಲೀ ಬಂದು ಗಿರಿಯ ಬೆನ್ನಲ್ಲೊತ್ತು। ಸುರರ ರಕ್ಷಿಸಿದಾ ಶ್ರೀಕೂರ್ಮಹರಿಗೇ। ಜಯಮಂಗಳಾ ನಿತ್ಯಶುಭಮಂಗಳಾ।।2।। ಭೂಮಿಯನು ಹಿರಣ್ಯಾಕ್ಷನೆಂಬೋ ದೈತ್ಯನು ಸುತ್ತಿ। ಭೀಮವಿಕ್ರಮನು ಪಾತಾಳಕೊಯ್ಯೆ। ತಾಮರಸ ಸಂಭವನು। ಭಿನ್ನವಿಸಲವನ ಕೊಂದು। ಭೂಮಿಯನು ತಂದ। ಶ್ರೀ ವರಹಾ ಹರಿಗೆ। ಜಯ ಮಂಗಳಾ ನಿತ್ಯ ಶುಭ ಮಂಗಳಾ।।3।। ಪರಮ ಭಾಗವತಾ ಪ್ರಹ್ಲಾದನಾ ಹಿರಣ್ಯಕನು। ಪರಿಪರಿಯ ಬಾಧೆಯಿಂದಲಿ ಪೀಡಿಸೇ। ಕರುಣಾಳು ಕೋಪದಲಿ। ದೈತ್ಯನು ದುರವ ಬಗೆದ। ಶರಣ ರಕ್ಷಕನಾದ। ನರಸಿಂಹಗೆ ಜಯ ಮಂಗಳಾ ನಿತ್ಯ ಶುಭ ಮಂಗಳಾ।।4।। ಬಲಿಚಕ್ರವರ್ತಿ ಭೂಮಿಯ ಧಾರೆ ಎರೆಯಲು। ಇಳೆಯನಳೆದವನ। ಸುತಳಕ್ಕಿಳುಹಿದೆ। ಸಿಲುಕಿಭಕುತಿಗೆ ಮೆಚ್ಚಿ। ಬಾಗಿಲಕಾಯಿದೆ।। ಬಲವಂತ ವಾಮನಾವತಾರ ಹರಿಗೆ।।5।। ಕಾರ್ತವೀರ್ಯಾರ್ಜುನನ। ಸಂಹರಿಸಿ ಮುದದಿಂದ ಕೀರ್ತಿಯನು ಲೋಕದೊಳು ವಿಸ್ತರಿಸಿದೆ ಪಾರ್ಥಿವಾಂತಕ ಬಾಹುಬಲಿ ಪರಿಪೂರ್ಣನೆ। ಆರ್ತ ಬಾಂಧವ ಭಾರ್ಗವರಾಮಗೆ ಜಯಮಂಗಳಾ ನಿತ್ಯ ಶುಭ ಮಂಗಳಾ।।6।। ದಶರಥನ ಮನೆಯಲುದ್ಭವಿಸಿ। ರಾವಣಾಸುರನಾ। ದಶಶಿರವನೀಡಾಡಿ। ಅವನನುಜಗೆ। ವಸುಧಾಧಿಪತ್ಯವನು। ಲಂಕೆಯೊಳಗವಗಿತ್ತ। ಅಸಮವಿಕ್ರಮರಾಚಂದ್ರ ಹರಿಗೆ ಜಯ ಮಂಗಳಾ ನಿತ್ಯ ಶುಭ ಮಂಗಳಾ।।7।। ಯದುಕುಲದಲಿ ಬಂದು। ಕೊಂದು ಕಂಸನನಂದು। ಮುದದೀಪಾಂಡವರನು। ಉದ್ಧರಿಸಿದೆ। ಒದಗಿ ಕೌರವ ಬಲವಸಂಹರಿಸಿ ಪದವಿತ್ತು। ಮುದದಿ ಮನ್ನಿಸಿದಾ ಶ್ರೀಕೃಷ್ಣಹರಿಗೆ। ಜಯ ಮಂಗಳಾ ನಿತ್ಯ ಶುಭ ಮಂಗಳಾ।।8।। ತ್ರಿಪುರದಮರಾರಿಯರ ಸತಿಯರಾ। ಪತಿವ್ರತವಾ। ನಪಹರಿಸಿ ದಿವ್ಯಮೋಹಕರೂಪದಿ। ತ್ರಿಪುರಹರಂಗೆಬಾಗಿ ಶಿವಗೆ ಕೀರ್ತಿಯನಿತ್ತ। ಅಪರಿಮಿತ ಬುದ್ಧಾವತಾರಹರಿಗೆ। ಜಯಮಂಗಳಂ ನಿತ್ಯ ಶುಭಮಂಗಳಂ।।9।। ಕಲಿಯುಗದ ಕಡೆಯಲ್ಲಿ ಖಳನೃಪರನ್ನೆಲ್ಲರನು। ತುಳಿಸಿ ಕುದುರೆಯ ಖುರದಪುಟಗಳಿಂದ। ಸುಲಭದಿಂ ನಡೆಸುತ್ತ ಕೃತಯುಗದ ಧರ್ಮವನು। ಬಲಿವಂಥ ಕಲ್ಕ್ಯಾವತಾರ ಹರಿಗೆ। ಜಯಮಂಗಳಾ ನಿತ್ಯ ಶುಭಮಂಗಳಾ।।10।। ಮಂಗಳಪದಂಗಳನು। ಭಕುತಿಯಿಂ ಮೋಹನ ತರಂಗನೆಯರೆಲ್ಲಾ ರಾಗದಿ ಪಾಡಲು। ಮಂಗಳಾತ್ಮ ಕ ಸಿರಿಪುರಂದರ ವಿಠಲಗೇ। ಅಂಗನೆಯರಾರುತಿ ಎತ್ತಿರೆ। ಜಯಮಂಗಳಾ ನಿತ್ಯ ಶುಭಮಂಗಳಾ।।11।।

ಮಂಗಳಂ ಮಾಯಾವಿಲಾಸಗೆ **ರಾಗ: ಮಧ್ಯಮಾವತಿ**

ಮಂಗಳಂ ಮಾಯಾವಿಲಾಸಗೆ ಮಂಗಳಮ್ ಮುರನಾಶಗೆ। ಮಂಗಳಮ್। ಶ್ರೀ ಸೌಮ್ಯನಾಯಕ। ಕೃಷ್ಣಹಲಧರ ಅನುಜಗೆ।।ಪ।। ಮತ್ಸ್ಯಕೂರ್ಮಗೆ ಮದನಜನಕಗೆ। ಮಂದರವನೆತ್ತಿನಿಂದಗೆ। ಸಚ್ಚಿದಾನಂದರೂಪಗೆ। ಶೂಕರಗೆ। ಶುಭಚರಿತಗೆ।।1।। ಕರೆಯೆ ಕಂಬದಿ ಉದಿಸಿದಾತೆಗೆ। ಕಮಲಲೋಚನ ಲಕ್ಷುಮಿಗೆ। ಬಲಿಯನರ್ಥಿಸಿ ನೆಲನನೀರಡಿ। ಅಳೆದ ಅದ್ಭುತ। ಮಹಿಮಗೆ।।2।। ಕ್ಷತ್ರಿಯರ ಸಂಹರಿಸಿದಾತಗೆ। ದಿಟ್ಟ ಭಾರ್ಗವರಾಮಗೆ। ಪ್ರಥವಿಜಯಪ್ರಾಣಕಾಂತ ರಾಘವ। ಶೂಕರಗೆ ಶುಭಚರಿತಗೆ।।3।। ಮೂರು ಪುರವನು ಗೆಲಿದ ಮಹಿಮಗೆ। ಮಂಗಳಮ್ ಮಹಾದೇವಗೇ। ವೀರಕುದುರೆಯನೇರಿ ಮೆರೆವಧೀರಕಲ್ಕ್ಯಾವತಾರಗೇ।।4।। ಈ ಮಹಿಯೊಳಧಿಕ ವಾದ ವೇಣೀನಗರಾಧೀಶಗೇ। ಭಾನುಕೋಟಿಪ್ರಕಾಶದತ್ತ ಶೂಕರಗೆ ಶುಭಚರಿತಗೆ।।5।।

ಜಯಮಂಗಳಂ ಜಗನ್ನಾಥಗೀಗ **ರಾಗ: ಮಧ್ಯಮಾವತಿ**

ಜಯಮಂಗಳಂ ಜಗನ್ನಾಥಗೀಗ ಶುಭಮಂಗಳಂ।।ಪ।। ನೀರೊಳು ಮುಳುಗಿ। ಗಿರಿಯ ಬೆನ್ನಲ್ಲಿಪೊತ್ತು। ಬೇರು ಮೆದ್ದು। ಕರುಳ್ಹಾರಹಾಕಿದವಗೆ।।1।। ಬಲಿಯ ದಾನವ ಬೇಡಿ ನೆಲನ ಮೂರಡಿ ಮೂಡಿ ಛಲದಿ ಕ್ಷತ್ರಿಯರ ಕುಲವನಾಳಿದವಗೆ।।2।। ರಾಕ್ಷಸ ಸಂಹಾರ ರಘುರಾಮ ಧೀರ। ಕೋತಿ ಪರಿವಾರ ಸೀತಮನೋಹರಗೆ।।3।। ನಂದಗೋಪಬಾಲ ಬಾಲಲೀಲೆ ಜಾಲ ಭಕ್ತ ಪರಿಪಾಲ ಬಾ ವೇಣು ಗೋಪಾಲಗೆ।।4।। ನಾರೇರ ವ್ರತಭಂಗ ಏರಿದಾ ತರಂಗ। ಕಲಹದಲ್ಲಿ ಧೀರ ಕಲ್ಕ್ಯಾವತಾರಗೆ।।5।।

ನೀರೊಳಗೆ ಮುಳುಗಿ ವೇದ ಸಾರವ ತಂದಾತಗೇ **ರಾಗ: ಸುರುಟಿ**

ನೀರೊಳಗೆ ಮುಳುಗಿ ವೇದ ಸಾರವ ತಂದಾತಗೇ। ಧಾರುಣಿಯೊಳ್ ನಲಿದು ಭೂಮಿ ದಾಡೇಲಿ ನಿಂದಾತಗೆ।। ನಾರಸಿಂಹ ರೂಪವಾಗಿ ನಂಬಿದವರ ಕಾಯ್ದವಗೇ।। ಮೂರಡಿ ಭೂಮಿಯ ಬೇಡಿದ ಮುದ್ದು ವಾಮನನಿಗೆ।। ಜಗದೋದ್ಧಾರನಿಗೆ ಜಯ ಮಂಗಳಂ। ನಿಗಮ ಗೋಚರನಿಗೆ ಶುಭ ಮಂಗಳಂ।। ಮೀರದೆ ಪಿತನಾಜ್ಞೆಯ ಪಾಲಿಸಿದ ಪರಶುರಾಮಗೇ।। ಧೀರ ರಾವಣನ ಕೊಂದು ನಾರಿಯ ಕರೆತಂದಾತಗೇ।। ನಾರಿ ಪೂತನಿಯ ಅಸುವ ಹೀರಿಕೊಂದ ಶ್ರೀಕೃಷ್ಣಗೆ।। ನಾರ್ಯೇರ ವ್ರತವ ನಳಿದ ಧೀರ ಬುದ್ದನಿಗೆ।। ಜಗದೋದ್ಧಾರನಿಗೆ ಜಯ ಮಂಗಳಂ।। ಬಿಂಕದಲಿ ಹಯವನೇರಿದ ಪಂಕಜೋದ್ಭವನಾಭಗೇ।। ಶಂಕೆಯಿಲ್ಲದೆ ಶೇಷನಾಪರಿಯಂಕದಿ ಮಲಗಿದಾತಗೇ।। ಶಂಕರನಪ್ರಿಯನಿಗೆ ಶೇಷಗಿರಿವಾಸನಿಗೇ ಶಂಖುಚಕ್ರವ ಪಿಡಿದ ವೆಂಕಟರಮಣನಿಗೇ ಜಗದೋದ್ಧಾರನಿಗೇ ಜಯ ಮಂಗಳಂ।।

ಮುಕುಟಕ್ಕೆ ಮಂಗಳಂ **ರಾಗ: ಸುರುಟಿ–ಆದಿತಾಳ**

ಮುಕುಟಕ್ಕೆ ಮಂಗಳಂ ಮತ್ಸ್ಯಾವತಾರಗೆ। ಮುಖಕೆ ಮಂಗಳ ಮುದ್ದು ಕೂರ್ಮನಿಗೆ ಸುಕಂಠಕೆ ಮಂಗಳ ಸೂಕರ ರೂಪಗೆ ನಖಕ್ಕೆ ಮಂಗಳ ನರಸಿಂಹಗೆ।।ಜಯಮಂಗಳಂ।। ವಕ್ಷಕೆ ಮಂಗಳ ವಟುವಾಮನಿಗೆ ಪಕ್ಷಕೆ ಮಂಗಳ ಪರುಶುರಾಮನಿಗೆ। ಕಕ್ಷಕೆ ಮಂಗಳ ಕಾಕುತ್ಸ್ಥರಾಮಗೆ ಕುಕ್ಷಿಗೆ ಮಂಗಳ ಶ್ರೀಕೃಷ್ಣಗೆ।।ಜಯಮಂಗಳಂ।। ಊರುಗಳಿಗೆ ಮಂಗಳ ಉತ್ತಮಬುದ್ಧಗೆ ಚರಣಕೆ ಮಂಗಳ ಚೆಲುವ ಕಲ್ಕಿಗೆ ಪರಿಪರಿ ರೂಪಗೆ ಪರಮಾನಂದಗೆ ಪುರಂದರ ವಿಠಲಗೆ ಜಯಮಂಗಳ।।ಜಯಮಂಗಳಂ।।

ಮಂಗಳಂ ಹರಿಗೇ ಜಯ ಮಂಗಳಂ **ರಾಗ: ಭೈರವಿ**

ಮಂಗಳಂ ಹರಿಗೇ ಜಯ ಮಂಗಳಂ ಸಿರಿಗೇ। ಮಂಗಳಂ ಮುರಾರಿಪ್ರಿಯೆಗೆ ಮಾರ ಜನಕನಿಗೆ।। ಮತ್ಸ್ಯಕಚ್ಛಪಗೆ ಸ್ವಚ್ಛ ವರಾಹನಿಗೆ। ತುಚ್ಛದಾನವ ನಸುವ ಬಗೆದ ನಾರಸಿಂಹನಿಗೆ।।1।। ವಾಮಭಾರ್ಗವಗೆ ಶ್ರೀರಾಮಕೃಷ್ಣರಿಗೆ। ಕಾರುಣ್ಯಸಾಗರ ಬೌದ್ಧ ಕಲ್ಕಿ ವಿಶ್ವಮೂರುತಿಗೆ।।2।।

ಮಂಗಳಂ ಹತ್ತಾವತಾರದ ದೇವಗೆ **ರಾಗ: ಸುರುಟಿ**

ಮಂಗಳಂ ಹತ್ತಾವತಾರದ ದೇವಗೆ। ಮಂಗಳಂ ಹತ್ತುದಿಕ್ಕಿನ ಒಡೆಯಗೆ। ಮಂಗಳಂ ಹತ್ತಾವತರಣದಲಿ ವ್ಯಾಪ್ತನಿಗೆ। ಮಂಗಳಂ ಹತ್ತಿರದಲಿಪ್ಪ ಹರಿಗೆ।।ಮಂಗಳಂ।। ನೋಡುವಗೆ ಗಿರಿಯ ಕೆಳಗಾಡುವಗೆ ಭೂಮಿಯನು। ತೋಡುವಗೆ ಮಹಭಯವ ಮಾಡುವಗೆ। ಬೇಡುವಗೆ ವೈರಿಗಳ ಕಾಡುವಗೆ ಅಮೃತಾನ್ನ। ನೀಡುವಗೆ ಗೋಪಿಯರ ಕೂಡುವಗೆ।।ಮಂಗಳಂ।। ಬೆಳೆವವಗೆ ಖಡ್ಗವನು ತೊಳೆವವಗೆ ಜಲದೊಳಗೆ। ಮೊಳೆವವಗೆ ಪಾತಾಳಕ್ಕಿಳಿವವಗೆ। ಮುಳುಗುವಗೆ ನಖವನ್ನು ತೊಳೆವವಗೆ ಕ್ಷಿತಿಪನ್ನ। ತುಳಿವವಗೆ ಕ್ಷತ್ರ ಕುಲವಳಿವವಗೆ।।ಮಂಗಳಂ।। ಚರಿಸುವಗೆ ಪರ್ವತವ ಧರಿಸುವಗೆ ವ್ರತವ ಅಪ-। ಹರಿಸುವಗೆ ತುರಗವನು ಹಾರಿಸುವಗೆ। ಅರಸುವಗೆ ಸುರರನುದ್ಧರಿಸುವಗೆ ಧರೆಯ ಪತಿ-। ಕರಿಸುವಗೆ ದಯಾದೃಷ್ಟಿ ಸುರಿಸುವವಗೆ।।ಮಂಗಳಂ।। ಪಡೆದವಗೆ ಮಾತೆಯನು ಕಡಿದವಗೆ ಕೋದಂಡ। ಪಿಡಿವವಗೆ ರಥವನ್ನು ಹೂಡಿದವಗೆ। ಬಿಡುವವಗೆ ಕಲಿತಾಪ ಸುಡುವವಗೆ ಪದವಿಲ್ಲದೆ। ನಡೆವವಗೆ ಅಮೃತವನು ಕೊಡುವವಗೆ।।ಮಂಗಳಂ।। ತಾಹನಿಗೆ ಕಂಭದಿಂ ಬಾಹನಿಗೆ ಊರ್ಧ್ವಗ-। ನಾಹನಿಗೆ ಕ್ಷತ್ರಿಯರ ದ್ರೋಹನಿಗೆ। ಹೋಹನಿಗೆ ಎರಡರಲಿ ಮೋಹನಿಗೆ ಸುಜನರ। ಸ್ನೇಹನಿಗೆ ಶ್ರೀ ವಿಜಯವಿಠ್ಠಲ ಹರಿಗೆ।।ಮಂಗಳಂ।।

ವೇದವ ತಂದಿಹ ಭೂಧರ **ರಾಗ: ಮಧ್ಯಮಾವತಿ–ಏಕತಾಳ**

ವೇದವ ತಂದಿಹ ಭೂಧರ ಪೊತ್ತಿಹ ಮೇಧಿನಿ ಸಲಹಿದ ವರಾಹಗೆ। ಬಾಧೆಯ ಬಿಡಿಸಿ ಬಾಲಗೆ ಕಂಬದಿ ತೋರಿ ಕರುಳಮಾಲೆ ಧರಿಸಿದ ನರಹರಿಗೆ।। ಜಯ ಮಂಗಳಂ ನಿತ್ಯ ಶುಭಮಂಗಳಂ।।1।। ಭೂಮಿಯ ಬೇಡ್ದಗೆ ಭೂಮಿಯ ನೀಡ್ದಗೆ ಭೂಮಿ ತ್ಯಜಿಸಿ ಕಾಡ ಸೇರಿದಗೆ ಭೂಮಿಯೊಳ್ ಬೆತ್ತಲೆ ತಿರುಗಿ ಕುದುರೆ ಏರಿ ಜಗವ ಪೊರೆದ ಕಲಿದೇವನಿಗೆ।। ಜಯಮಂಗಳಂ ನಿತ್ಯ ಶುಭಮಂಗಳಂ।।2।। ಸೋಮನ ಕೊಂದಗೆ ಮಂದರ ಹೊತ್ತಗೆ ಭೂಮಿಯ ದಾಡೆಯೊಳೆತ್ತಿದಗೆ। ನಾಮವ ನೆನೆದನ ಪೊರೆದಗೆ ಭೂಮಿ ದಾನ ಬೇಡ್ಡ ಬಲಿ ವರದನಿಗೆ।। ಜಯಮಂಗಳಂ ನಿತ್ಯ ಶುಭಮಂಗಳಂ।।3।। ಪರಶು ಧರಿಸಿದಗೆ ದಶಶಿರ ವೈರಿಗೆ ಧರೆಯೊಳ್ ಬೆತ್ತಲೆ ನಿಂತವಗೆ। ತುರಗವನೇರಿದ ಕಲ್ಕಿಗೆ ಪರಿಪರಿ ಅವತಾರವೆತ್ತಿಹ ಕೇಶವಗೆ।। ಜಯಮಂಗಳಂ ನಿತ್ಯ ಶುಭಮಂಗಳಂ।।4।। ನಿಗಮ ಉದ್ಧರಿಸಿದ ಆಗಮ ಧರಿಸಿದ ಜಗದೋದ್ಧಾರ ಹರಿ ವರಾಹಗೆ। ಮಗುವಿಗೆ ಒಲಿದಗೆ ಮಗು ರೂಪವಾಂತಗೆ ಜಗದಿ ಕ್ಷತ್ರಿಯಗರ್ವ ಹರಿಸಿದಗೇ।। ಜಯಮಂಗಳಂ ನಿತ್ಯ ಶುಭಮಂಗಳಂ।।5।। ಜಗದಭಿರಾಮಗೆ ನಗೆಮೊಗ ಬೌದ್ಧಗೆ ಜಗಭಾರ ಇಳುಹಿದ ಕಲ್ಕಿಗೆ ಬಗೆಬಗೆ ರೂಪಗೆ ಅಗಣಿತ ಮಹಿಮಗೆ ಜಗನ್ನಾಥದಾಸ ಕೇಶವನುತಗೆ।। ಜಯಮಂಗಳಂ ನಿತ್ಯ ಶುಭಮಂಗಳಂ ।।6।।

ಮಂಗಳಂ ಝುಷಕೂರ್ಮ

ಮಂಗಳಂ ಝುಷಕೂರ್ಮ ಘೋರನರಹರಿ ವಟುಗೆ। ಮಂಗಳಂ ಭಾರ್ಗವಗೆ ರಾಮ ಕೃಷ್ಣ ಬುದ್ಧರಿಗೆ। ಮಂಗಳಂ ಕಲ್ಕಿಗೆ ಅನಂತ ಅವತಾರನಿಗೆ ಮಂಗಳಂ। ಸಿರಿಯರಸಗೆ ಮಂಗಳಂ ಮುರಹರಗೆ ಮಂಗಳಂ। ನಗಧರಗೆ ಮಂಗಳಂ ದ್ರೌಪತಿಯ ಮಾನಕಾಯ್ದಗೆ ಮಂಗಳಂ। ಜಗದೀಶ ಪುರಂದರ ವಿಠಲಗೆ ಜಯಮಂಗಳಂ ನಿತ್ಯ ಶುಭಮಂಗಳಂ।।

ಮಂಗಳ ಹರಿಹರ ಬ್ರಹ್ಮರಿಗೆ **ರಾಗ: ಶಂಕರಾಭರಣ**

ಮಂಗಳ ಹರಿಹರ ಬ್ರಹ್ಮರಿಗೆ।। ನೀರೊಳು ನಿಗಮವ ತಂದವಗೆ। ಭಾರಬೆನ್ನಲಿ ಪೊತ್ತ ಕೂರ್ಮನಿಗೆ। ಕೋರೆಯೊಳಸುರನ ಕೊಂದವಗೆ। ನರಹರಿ ನರಸಿಂಹನಿಗೆ।।ಮಂಗಳ।। ಮೂರಡಿ ಬೇಡಿದ ವಾಮನಿಗೆ। ಪ್ರೇಮದಿ ಕೊಡಲಿಯ ಪಿಡಿದವಗೆ। ಭೀಮನೊಳಡವಿಯೊಳಾಡಿದಗೆ। ಕಾಮಜನಕ ಕರುಣಾಕರಗೆ।।ಮಂಗಳ।। ಬೆತ್ತಲಿನಿಂತಿಹ ಬೌದ್ಧನಿಗೆ। ಅಶ್ವವನೇರಿದ ಕಲ್ಕ್ಯನಿಗೆ। ನಿತ್ಯನಿರ್ಗುಣ ನಿಗೆ। ಸರ್ವೋತ್ತಮ ಶ್ರೀ ಹರಿ ಹಯವದನನಿಗೆ।।ಮಂಗಳ।।

ಜಯಮಂಗಳ ಮೂರುತಿ ಹರಿಗೆ **ರಾಗ:ಸುರುಟಿ**

ಜಯಮಂಗಳ ಮೂರುತಿ ಹರಿಗೆ। ಶ್ರೀರಂಗಗೇ। ಜಯಮಂಗಳ।। ನೀರೊಳು ಮುಳುಗಿ ಮೇರುವ ಪೊತ್ತು। ಧಾರಿಣಿಕೊರೆದವಗೆ। ದುರುಳರಕ್ಕಸನ। ಕರುಳನು ಮಾಲೆಯ ಧರಿಸಿದಾ ಶ್ರೀ ಹರಿಗೆ।।1।। ಮಾತೆಯ ಶಿರವನು ತರಿದು ಸುಪ್ರೀತಿಯಿಂ। ಕ್ಷತ್ರಿಯರಾಳಿದಗೆ। ಆತ ಪರಶುರಾಮಗೆ। ಮುದದೊಳು ಪ್ರೀತಿಯಿಂಪಾಡುತಲಿ।।2।। ಕುದುರೆಯನೇರಿ। ಕರಿದ್ರುವಗೊಲಿದಾ। ಕಲ್ಕ್ಯಾವತಾರನಿಗೆ। ಪರಮಪುರುಷಗೆ। ಪುರುಷೋತ್ತಮನಿಗೆ। ವರನರಸಿಂಹನಿಗೆ।।3।।

❖ ❖ ❖